ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 1

ಜನವರಿ 02, 2011


ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com

2011ರ ಕ್ಯಾಲೆಂಡರ್



ಬೆಲೆಗಳು ಗಗನಕ್ಕೆ ಜನಗಳು ಪಾತಾಳಕ್ಕೆ

ಪ್ರಣಾಳಿಕೆಗಳು : ಭರವಸೆ - ಜಾರಿಯ ನಡುವೆ ಕಂದರ



ಪ.ಬಂಗಾಳ ಪಂಚಾಯತ್ : ದುಡಿವ ಜನರ ಕೈಯಲ್ಲಿ ಅಧಿಕಾರ



ದ. ಕನ್ನಡ ಚುನಾವಣಾ ಕಣ : ಅತ್ತ ಪುಲಿ ಇತ್ತ ದರಿ

ಬಿ.ಟಿ. ಹತ್ತಿ : ಬತ್ತಿ ಹೋದ ರೈತರ ಜೀವಸೆಲೆ

ಬಾಬಾಬುಡನ್ ಗಿರಿ : ಸೌಹಾರ್ದತೆಗೆ ಸವಾಲು

ಪ್ರಜಾವಾಣಿ ನಡೆಸಿದ ದೀಪಾವಳಿಯ ವಿಶೇಷಾಂಕದ ಸ್ಪರ್ಧೆಯಲ್ಲಿ 2ನೇ ಬಹುಮಾನ ಗಳಿಸಿದ ಕಥೆಯಿದು. ನಮ್ಮ ಓದುಗರಿಗಾಗಿ

ತಿಪ್ಪೆಯನ್ನರಸಿ...

ಕಳೆದ ವಾರದಿಂದ ಮುಂದುವರಿದಿದ್ದು



ಕೆ. ನೀಲಾ

ಗಂಗವ್ವ ಯಾರೆಲ್ಲ ಹೇಳಿದರೂ ಜಾಗಾ ಬಿಡಲಿಲ್ಲ. ನೆಲ ಗುದ್ದಿ ಶಪಥ ತೊಟ್ಟ ಗಂಗವ್ವ ಮುಂದೆ ಖರೆನೇ ಆ ಜಾಗದಲ್ಲಿ ತಿಪ್ಪೆ ಮಾಡಿದಳು. ಊರ ಕೆಲವರು ಮಜಾಕ್ ಮಾಡಿ ನಕ್ಕರು. ಭೀಮರಾಯ ತನ್ನ ಜಾಗದಲ್ಲಿ ಮೂರು ದೊಡ್ಡ ಹಗೇವುಗಳು ಮಾಡಿ ಅದರಲ್ಲಿ ದವಸ-ಧಾನ್ಯ ತುಂಬಿದನು. ಆದರೆ ಹಗೇವ ಕಂಡಾಗೆಲ್ಲ ಗಂಗವ್ವನಿಗೆ ಎದೆಯಲ್ಲಿ ಮುಳ್ಳಾಡಿಸಿದಂಗಾಗ್ತಿತ್ತು. ತನ್ನನ್ನು ನಡುರಸ್ತೆಯಲ್ಲಿ ಅವಮಾನಿಸಿದ್ದು ನೆನಪಾದಾಗೆಲ್ಲ ವಿಚಿತ್ರ ಹಠ ಗರಿಗೆದರ್ತಿತ್ತು. ಅದೊಂದು ದಿನ ಗಂಗವ್ವ ತಿಪ್ಪೆಯ ಉದ್ಘಾಟನೆ ಮಾಡಿಯೇ ಬಿಟ್ಟಳು. ಅವತ್ತು ಗಂಡ ಮಾವ ಇಬ್ಬರೂ ಭರ್ತಿ ನಶೆಯಾಗಿ ಬೀದಿಯಲ್ಲಿದ್ದರು. ಅದಕ್ಕೆ ಕಾರಣ ಭೀಮರಾಯ ಅಂತ ಇವಳಿಗೂ ಗೊತ್ತಿತ್ತು.

ಗಂಗವ್ವ ಆ ತಿಪ್ಪೆಯನ್ನು ಕಣ್‌ಪಾಪಿಯಂತೆ ಕಾಪಾಡತೊಡಗಿದಳು. ಮೊದಲಿಗೆ ಅದೊಂದು ಜಿದ್ದಾಜಿದ್ದಿನ ಮಾತಾಗಿತ್ತು. ಆದರೆ ಬರಬರುತ್ತ ಅದು ಅವಳ ಸ್ವಂತ ಅಸ್ತಿತ್ವದ ಭಾಗವಾಗತೊಡಗಿತು. ಮೊದಲೆಲ್ಲ ಮುಂಜಾನೆದ್ದು ಶಿವ-ಶಿವಾ ಅಂತಂದು ಇದ್ದೊಂದು ಖೋಲಿ ಪಡಸಾಲೆ ಕಸಗುಡಿಸಿ ಅಂಗಳದಲ್ಲೀಟು ತೊಗರಿಕಡ್ಡಿಯಿಂದ ಸರ್ರಕ್-ಪರ್ರಕ್ಕೆಂದು ನಾಲ್ಕು ಕೈ ಎಳೆದರೆ ಮುಗಿಯಿತು. ತಿಪ್ಪೆಯೆನ್ನುವುದು ಉದಯಿಸಿದಂದಿನಿಂದ ಅದರ ಒಡಲು ತುಂಬಲು ತನ್ಮೂಲಕ ಮಕ್ಕಳು ಉಂಡು ತೇಗಿದಷ್ಟೇ ಖುಷಿ ಪಡಲು, ಥೇಟ್ ತಾಯಿಯಂತೆ ಧಡ-ಪಡಿಸುತ್ತಿದ್ದಳು. ಒಲೆಯ ಬೂದಿ, ಗಿಡ-ಮರಗಳ ತಪ್ಪಲು-ತಡಿ, ಹೊಲದಿಂದ ಬರುವಾಗ ಹಾದಿಯಲ್ಲಿ ಹೆಂಡಿ ಕಂಡರಂತೂ ಬಂಗಾರ ಸಿಕ್ಕಷ್ಟೆ ಹಿಗ್ಗಿನಿಂದ ಹೊತ್ತು ತರುತ್ತಿದ್ದಳು. ಆಜು-ಬಾಜು ಮನೆಯವರಿಗೂ ತಮ್ಮ ಮನೆಯ ಕಸ-ಕಡ್ಡಿ-ಹೆಂಡಿ- ಮಕ್ಕಳ ಹೇಲು ಹೀಗೆ ಸರ್ವೊಂದು ತಂದು ತನ್ನ ತಿಪ್ಪೆಗೆ ಧಾರೆ ಎರೆಯಲು ಫರ್ಮಾನು ಹೊರಡಿಸಿದಳು. ಆದರೆ ಗಂಡ ಮಾವನಿಗೆ ಮಾತ್ರ 'ಕುಡಿದ ಬಾಟಲಿ ತಿಪ್ಪ್ಯಾಗ ಹಾಕಿದ್ರ ನಡು ಬೀದ್ಯಾಗ ನೇಣ ಹಾಕ್ತೀನಿ' ಅಂತನೂ ಧಮಕಿ ಹಾಕಿದಳು. ಹಿಂದೆಲ್ಲ ಮುಲ್ಲಾ ಅಜಾನ್ ಕೊಡುವ ಮೊದಲೇ ಎದ್ದು ಡಬ್ಬಿ ನೀರು ಹಿಡಕೊಂಡು ಊರ ಹೊರಗೆ ಬಯಲಕಡಿಗೆ ಹೋಗಿ ಬರುತ್ತಿದ್ದಳು. ದಿನಕಳೆದಂತೆ ತಿಪ್ಪೆ ಎನ್ನುವುದು ನಾನಾ ನಮೂನೆಯ ಕಸ-ಕಡ್ಡಿ-ಹೆಂಡಿಯಿಂದ ಲಕ-ಲಕಿಸುತ ಕೊಳೆತು ಬೆಳೆಯುತ್ತಿತ್ತು. ಆವಾಗಿಂದ ಗಂಗವ್ವನೂ ನಸುಕಲೆದ್ದು ತಿಪ್ಪೆಯ ಮೈದಡುವುತ ಹೆಜ್ಜೆಯಿಟ್ಟು ಸೊಂಟದೆತ್ತರದ ಹಸನಾದ ಮಗ್ಗುಲಿನಲ್ಲಿ ತಲಾ ಒಂದು ಕಡೆಗೆ ಎರಡು ಕರಿಕಲ್ಲುಗಳನ್ನಾಶ್ರಯಿಸಿ ಬಹಿರ್ದೆಶೆ ಪೂರೈಸಿಕೊಂಡು ಬರತೊಡಗಿದಳು. ಇದರಿಂದ ಪ್ರೇರಿತರಾದ ನೆರೆ-ಹೊರೆಯ ಹರೆಯದ ಹೆಣ್ಣುಮಕ್ಕಳೂ ಗಂಗವ್ವನ ತಿಪ್ಪೆ ಬಳಸಿ ಕೃತಾರ್ಥರಾದರು.

> **ಗಂಗವ್ವ ಸಹ ತನ್ನ ತಿಪ್ಪೆಯ ಪರಿಹಾರ ಕೇಳಿ ತಹಸೀಲ ಕಚೇರಿಗೆ ಬಂದಿದ್ದಳು. ಊರಿನ ಸರ್ವೆಗಾಗಿ ಬಂದಿದ್ದ ತಲಾಟಿ ಮತ್ತು ಕಾರ್ಯದರ್ಶಿಗಳು ಪರಿಹಾರದ ಪಟ್ಟಿಯಲ್ಲಿ 'ತಿಪ್ಪೆ' ಸೇರಿಸಲು ಹಿಂದೇಟು ಹಾಕಿದ್ದರು.**


ಆ ತಿಪ್ಪೆಯೋ ಸೂರ್ಯ ಮುಳುಗಿದ ಮೇಲೆ ಮತ್ತು ತೇಲುವ ಮುನ್ನ ಗಲ್ಲಿ ಹೆಂಗಸರ ಬರುವಿಕೆಗೆ ಕಾದಂತಿರುತ್ತಿತ್ತು. ಸಾಲಾಗಿ ಕೆಲವೊಮ್ಮೆ ಎದು-ಬದುರು ಕೂಡುವ ಹೆಂಗಸರೆದೆಯಾಳದ ಗುಟ್ಟಿನ ಮಾತುಗಳು, ಕಣ್ಣೀರ ಹನಿಗಳು, ಕಿಸಕ್ಕು ನಗೆ ಹೀಗೆ ಎಲ್ಲ-ಎಲ್ಲವನ್ನೂ ಭರಿಸಿಕೊಂಡೇ ಮುಗಿಲಿಗೆ ಅಣಕಿಸುವಂತೆ ತಲೆಯೆತ್ತಿ ತೊನೆದಾಡಿತು.

ಈ ನಡುವಿಗೆ ಗಂಗವ್ವ ತನ್ನ ತಿಪ್ಪೆಗಾಗಿ ಇನ್ನೊಂದು ಕೆಲಸಕ್ಕೆ ಕೈ ಹಾಕಿದಳು. ಉಳಿತಾಯ ಸಂಘದಿಂದ ಸಾಲ ಪಡೆದು ದನದಂಗಡಿಯ ದಿನ ಕರ್‍ರಗೆ ಮಿರಮಿರ ಮಿಂಚುವ, ಅಡ್ಡಡ್ಡಲಾಗಿ ತಿವಿಯುವಂತಹ ಕೋಡಿನ, ಮಾತು-ಮೂತಿಗೆ ಮೂಗಿನ ಹೊರಳೆ ಅಗಲಿಸಿ ಡುರುಕಿ ಹಾಕುವ ಎಮ್ಮೆಯೊಂದನ್ನು ಖರಿದಿಸಿ, ಊರ ಅಗಸಿ ಬಾಗಿಲು, ಪಂಚಾಯ್ತಿ ಕಟ್ಟೆ, ಮುಖ್ಯ ಬಾಜಾರು ಮೂಲಕ ಮೆರವಣಿಗೆ ಹೊರಟು ಮೊದಲು ಅದಕ್ಕೆ ತಿಪ್ಪೆಯ ದರ್ಶನ ಮಾಡಿಸಿದಳು. ಭೀಮರಾಯನ ಒಳಖೋಲಿಗೂ ಕೇಳುವಂತೆ 'ಹಲ್ಯಾ' ಅಂದು ಎಮ್ಮೆ ತಂದ ಸುದ್ದಿಯನ್ನು ಬಿಂಕದಿಂದ ಬಿತ್ತರಿಸಿದಳು. ಎಮ್ಮೆ ಮತ್ತದರ ಹೆಂಡಿ ಕಾಲಡಿಯ ಚಿಪಾಟಿ ಹುಲ್ಲು ಹೀಗೆ ಎಲ್ಲವೂ 'ತಿಪ್ಪೆಗಾಗಿಯೇ'. ಅಷ್ಟೇ ಯಾಕೆ ಗಂಗವ್ವನ ಹಿಂದ್ಲಿಂದೆ ಹೋಗುವ ನಾಯಿಯೂ ಕಾಲೆತ್ತಿ ಉಚ್ಚೆ ಹೊಯ್ಯುವ ಹೊತ್ತಲ್ಲಿ ಬರುವುದು ತಿಪ್ಪೆಗೇ.

ಭೀಮರಾಯನಿಗೆ ಉಲ್ಟಾ ಸವಾಲು ಹಾಕಿದ್ದಕ್ಕೆ ಗಂಗವ್ವನಿಗೆ ಲಾಭವೇ ಆಗಿತ್ತು. ಕೂಲಿ-ನಾಲಿ ಮಾಡುತ ಇದ್ದವಳು ಈಗ ಹಾಲು-ಹೈನ ಅಂತ ತೊಡಗಿಸಿಕೊಂಡಳು. ಗಂಗವ್ವನಿಗೆ ಊರೊಳಗೆ ಮನೆಯೇನೋ ಇತ್ತು. ಆದರೆ ಅಡವಿಯಲ್ಲಿ ಹೊಲ ಇರಲಿಲ್ಲ. ವರ್ಷವೊಪ್ಪತ್ತಿನಲ್ಲಿ ತಿಪ್ಪೆಯು ಸಮೃದ್ಧವಾಗಿ ತುಂಬಿ ತುಳುಕಾಡತೊಡಗಿತು.

ಹೀಗಿದ್ದಾಗ, ಅದೊಂದು ಬೆಳಗು-ಮುಂಜಾನೆ ಬಾಜು ಊರಿನ ಶಾಂತಪ್ಪಣ್ಣ ಇವಳ ನಡುಅಂಗಳಕ್ಕೆ ಬಂದು 'ಗಂಗವ್ವಕ್ಕೋ ನಿನ್ ತಿಪ್ಪ್ಯಾನ ಗೊಬ್ರ ಬೇಕು. ರೇಟ್ ಹೇಳು' ಅಂದಾಗ ದಿಗಿಲಾಗುವ ಪಾಳಿ ಗಂಗವ್ವನದು. ಅವಳಿಗೆ ಈ ವ್ಯಾಪಾರ ಗೊತ್ತಿರಲಿಲ್ಲ. ಖರೆನೇ ತಿಪ್ಪೆ ತುಂಬು ಗರ್ಭಿಣಿಯಾಗಿತ್ತು. ಎತ್ತಿನ ಬಂಡಿ ತಂದು ತನ್ನ ತಿಪ್ಪೆಯ ಗೊಬ್ರ ಹೊಡಕೊಂಡು ಹೋಗುವ ದಿನ ಗಂಗವ್ವಗೆ ಬಲು ಖುಷಿಯಾಗಿತ್ತು. ತಿಪ್ಪೆ ತನ್ನ ನಸೀಬು ಎಂದೇ ನಂಬಿಕೊಂಡು ವರ್ಷಕ್ಕೊಂದಾವರ್ತಿ ಗೊಬ್ಬರ ಮಾರುತ್ತಿದ್ದಳು. ಇದು ಗೊತ್ತಾಗಿ ಭೀಮರಾಯನಿಗೆ ಅಂಗಾಲಿನಿಂದ ನಣ್ಣೆತ್ತಿವರೆಗೂ ಸಿಟ್ಟು ಹೆಡೆಯೆತ್ತಿತು. 'ಸರಕಾರಿ ಗೊಬ್ರ ಹಾಕಿ ಹೆಚ್ಚ ಇಳುವರಿ ಪಡ್ಯಾ ವ್ಯಾಳ್ಯಾದಾಗ ಈ ಕಸಬಾರ್ಗಿ ಹೆಂಗಸಿನ ತಿಪ್ಪಿ ಗೊಬ್ರಕ ಯಾರ ಕೇಳ್ತಾರ' ಅಂತ ಭೀಮರಾಯ ಧಿಮಾಕಿನಿಂದ ಟಿಂಗಲ್ ಮಾಡಿದರೂ, ಊರಿನ ಸಣ್ಣ ಪುಟ್ಟ ತ್ವಾಟ-ಪಟ್ಟಿ ಮಾಡಿ ತರಕಾರಿ ಬೆಳೆವ ರೈತರು ಮಾತ್ರ ಗಂಗವ್ವನ ತಿಪ್ಪೆಯ ಗೊಬ್ಬರಕ್ಕೇ ಡಿಮಾಂಡ್ ಮಾಡ್ತಿದ್ದರು. ಗಂಗವ್ವನ ಗೊಬ್ಬರಕ್ಕಾದರೆ ಬಡ್ಡಿಯಿಲ್ಲದೆ ಕೈಯಲ್ಲಿ ರೊಕ್ಕ ಬಂದಾಗ ಗಂಟು ಕೊಟ್ಟರೆ ಆಗುತ್ತಿತ್ತು.

ಗಂಗವ್ವ ರೋಮ-ರೋಮ ದುಡಿದು ತಿಪ್ಪೆಯನ್ನು ಶ್ರೀಮಂತಗೊಳಿಸಲು ಪಡಲಾರದ ಪಡಿಪಾಟಲು ಪಟ್ಟಳು. ಅವಳಿಗೆ ಯಾರೂ ಹೆಂಡಿ-ಬೂದಿ-ಕಸ-ಚಿಪಾಟಿ-ಹುಲ್ಲು ಅಂತೆಲ್ಲ 'ಕೂಡ'ಲಾರ'ದ'ಂಗ' ನೋಡಿಕೊಳ್ಳಲಾಯಿತು. ಬೀದಿ ಮೇಲೆ ಬಿದ್ದ ಹೆಂಡಿ ತಂದರೂ ಜಗಳಾಡುವಂತೆ ತನ್ನ ಹಿಂಬಾಲಕರಿಗೆ ಛೂಬಿಟ್ಟನು. ಗಂಡ ಸತ್ತ ಸರೋಜಕ್ಕ ತಿಪ್ಪೆ ಗೊಬ್ಬರ ಮಾಡಲು ಗಂಗವ್ವನಿಂದ ಪ್ರೇರಣೆ ಪಡೆದಳು. ಮಾಮೂಲಿ ಕೂಲಿ ಮಾಡುವ ಹೆಂಗಸೊಬ್ಬಳು ಹೀಗೆ ಎದುರಾಗಿ ತೋಳ್ತಟ್ಟಿ ಆಖಾಡಾಕ್ಕಿಳಿದಿರುವುದು ಭೀಮರಾಯನ ಶತಮಾನಗಳ





ಪ್ರತಿಷ್ಠೆಗೆ ಧಕ್ಕೆ ಬಂದಂಗಾಯಿತು. ಅದೂ ಹೊಲಸಿನ ಪ್ರತೀಕ ತಿಪ್ಪೆಯನ್ನೇ ಮುಂದೆ ಮಾಡಿ ಅಣಕಿಸಲು ಹೊರಟ ಗಂಗವ್ವ, ಭೀಮರಾಯನ ನಿದ್ದೆಗೆಡಿಸಿದಳು. ಇವಳ ತಿಪ್ಪೆಯ ಹುಲ್ಲುಕಡ್ಡಿಯೂ ಅವನಿಗೆ ಶತೃಸ್ವರೂಪವಾಗಿತ್ತು. ಗಂಗವ್ವ ಗರಿಕೆ ಹುಲ್ಲಿನಂತೆ ಸೆಣಸುತ್ತಲೇ ಇದ್ದಳು. ಗಂಗವ್ವನಿಗೆ ತನ್ನ ಹಳ್ಳಿಯೇ ಸ್ವರ್ಗವಾಗಿತ್ತು. ಗಂಡ ಕರುಳು ಸವೆದು ಬಲು ಬೇಗ ಈ ನೆಲ ಖಾಲಿ ಮಾಡಿದನು. ಗಂಗವ್ವನಿಗೆ ತಿಪ್ಪೆಯೇ ಸಂಗಾತಿಯಾಗಿತ್ತು. ಕಸ ಚೆಲ್ಲಲು ಹೋದಾಗ ಅದರೊಂದಿಗೆ ಮಾತಾಡುತ್ತಿದ್ದಳು. ಎಲ್ಲೋ ಒಂದು ಕಾಜಿನ ತುಂಡು ಅಥವ ಪ್ಲಾಸ್ಟಿಕ್ ಬಿದ್ದರೆ ಅಂಗಾಲಿನ ಮುಳ್ಳು ತೆಗೆವಂತೆ ಹೆಕ್ಕಿ ತೆಗೆಯುತ್ತಿದ್ದಳು. ಅದೊಂದು ವಿಚಿತ್ರ ಕಳ್ಳು- ಬಳ್ಳಿಯ ಸಂಬಂಧವಾಗಿತ್ತು. ಮನೆ ಬಾಜು ಕಾಕಾ 'ಏ ಗಂಗವ್ವ ಅದೇನ್ ತಿಪ್ಪ್ಯಾಗ ಇಟ ಕೆಲಸ?' ಅಂತ ಕೇಳಿದರೆ 'ಯಾಕ ನೀ ರಾತ್ರ್ಯಾದರ ಹೊಲದಾಗ ಇರ್ತಿಲ್ಲ? ನಿಂದೇನ್ ಕೆಲಸ ಇರ್ತದ...' ಪ್ರಶ್ನೆ ಹಾಕಿ ಸುಮ್ಮನಾಗಿಸುತ್ತಿದ್ದಳು.

•••

ವಾರಗಟ್ಟಲೇ ಛಡಿ ತಗೊಂಡು ಬೆನ್ನು ... ಧೋಗರೆದ ಮಳೆಯು ಸಧ್ಯ ಯುದ್ಧ ವಿರಾಮ ಘೋಷಿಸಿದೆ. ಚುಮು-ಚುಮು ಬಿಸಿಲು ಚುರ್ರೆನ್ನುತ್ತಿದೆ. ತಹಸಿಲ್ದಾರ ಕಚೇರಿಯ ಆವರಣವು ಈಗ ಮಳೆ ಹನಿಗಳಂತೆ ಜನರಿಂದ ಕಿಕ್ಕಿರಿದಿದೆ. ಭಣಮಿ ಪೂರ್ತಿ ಹರಿದು ಹೋಗಿತ್ತು. ಸೂಡಿಗಾಗಿ ಹೆಣಗಾಡುತ್ತಿದ್ದರು.

ಛೋಟಾ ಮೋಠಾ ಮನೆ-ಗುಡ್ಸಿಗಳು ಬಿ... ಪ್ರಯೋಜನ ಇಲ್ಲ. ಅದಕ್ಕೆ ಮನೆ ಅಂತ... ಅನ್ನುವುದಿಲ್ಲ. ಆರ್‌ಸಿಸಿ ತಾರಸಿ ಇರುವ ಬಂಗಲೆಯಂಥ ಮನೆಗಳು ಬಿದ್ದರೆ, ಬಿದ್ದಿದ್ದಕ್ಕೂ ಗೌರವ. ಪರಿಹಾರ ಕೊಡುವುದಕ್ಕೂ ಅರ್ಥ. ಹೀಗಾಗಿ ಹಳ್ಳಿಗಳಲ್ಲಿರುವ ಕೆಲವೇ ಗೌರವಸ್ಥರು ಇರುವೆಯಂಥ ದಟ್ಟಣೆಯ ನಡುವಿಗೆ ದಾ... ಮಾಡಿಕೊಂಡು ಒಳಹೋಗುತ್ತಿದ್ದರು.

ನೀರಲ್ಲಿ ನೀರಾದ ಕೀಟನಾಶಕ ಎಣ್ಣೆಯ ಪರಿಹಾರ ಕೇಳಿ ಬಂದ ಶರಣಪ್ಪನಿಗೆ ತಲೆ ಚಿಟ್ಟು ಹಿ... ಸಿಬ್ಬಂದಿಯು 'ಯಾರಿಗಿ ಕೇಳಿ ಎಣ್ಣೆ ತಂದಿಟ್ಟೆಯ... ಮುದುಕ' ಅಂತ ಚೀರಿದನು. 'ಯಪ್ಪ ಯಾರಿಗಿ ಯ್ಯಾ... ಕೇಳಾದ್ರಿ? ಬೇಕಿತ್ತು ತಂದಿಟ್ಟೇವು. ಮಳಿ ಬರ್ತದ ಅಂತ ಯಾರಿಗಿ ಗೊತ್ತಿತ್ತು?' ಅಂದನು. 'ಹಾ... ನೀನೂ ಯಾರಿಗಿಕೇಳಲಿಲ್ಲ, ಮಳಿನೂ ಯಾರಿ... ಹೇಳಿ ಬರಲಿಲ್ಲ. ಮುಗಿತು. ನಿನ್ನ ಯಣ್ಣಿ ಲಾಸ್ ನಮ್ ಲಿಸ್ಟಿನ್ಯಾಗ ಇಲ್ಲ. ನಡಿ ಹೊರಗ' ಅಂ... ಬಯ್ದು ...ಗಪ್ಪನನ್ನು ...ಕಿದ... ಹೊಳೆಯ ಧಾಳಿಗೆ ಮಲಗಿದಲ್ಲೇ ಧಸಕ್ಕೆಂದು ಸಾವ ಮನೆಗೆ ಜಾರಿದ ಶಾಂತಪ್ಪನ ಸಾವು ಸಹ ಪರಿಹಾರಕ್ಕೆ ಯೋಗ್ಯವಾಗಲಿಲ್ಲ.

ತಹಸೀಲ ಕಚೇರಿಯ ಮುಂದೆ ಹೀಗೆ ನಾನಾ ನಮೂನೆಯ ಸಂಕಟಗಳು ಸಾಗರದಲೆಗಳಂತೆ ಒಂದರ ಸೆರಗ್ಹಿಡಿದು ಇನ್ನೊಂದು ಪರಿಹಾರ ಕೊ... ಧಾವಿಸಿದ್ದವು. ಗ... ಹೊಳೆಯ ಸೆಳವಿಗೆ ... ಲುಂಗಿಯಾದಿಯ... ದರವೊಂದೂ ಕೊಚ್ಚಿ ಹೋಗಿರುವುದರಿಂದ, ಕರುಣೆಯುಳ್ಳವರು ಕೊಟ್ಟ ಬೃಹತ್‌ಗಾತ್ರದ ದೊಗಳೆ ಜಿನ್ಸ್‌ನಲ್ಲಿ ತುಂಬ ಖಿನ್ನನಾಗಿ ಬಂದಿದ್ದನು ಹುಸೇನಪ್ಪ. ಗದ್ದೆ ಪೂರ್ತಿ ಉಸುಕು ಚೆಲ್ಲಾಡಿದ ... ಗೂಂಡಾಗಿರಿಗೆ ವ್ಯಗ್ರನಾಗಿದ್ದ. ಪರಿಹಾರದ ಮೊತ್ತವೆಂಬುದು ಅಕ್ಷರಗಳ ರೂಪಧರಿಸಿ ಚೆಕ್... ನಮೂದಾಗಿತ್ತು. ಅದು ನಾಲ್ಕು ಸಾರಿ ತಹಸೀಲ ಕಚೇರಿಗೆ ಬಂದು ಹೋಗುವ ಖರ್ಚಿಗೂ ಸಾಲಾದಾಗಿತ್ತು.

ಗಂಗವ್ವ ಸಹ ತನ್ನ ತಿಪ್ಪೆಯ ಪರಿಹಾರ ಕೇಳಿ ತಹಸೀಲ ಕಚೇರಿಗೆ ಬಂದಿದ್ದಳು. ಊರಿನ ಸರ್ವೆಗಾಗಿ

ಪುಟ ...

ಸಂಪಾದಕೀಯ

ಪ್ರಣಾಳಿಕೆಗಳು ಭರವಸೆ-ಜಾರಿಯ ನಡುವಿನ ಕಂದರ

ವಿವಿಧ ಪಕ್ಷಗಳು ಪಂಚಾಯತ್ ಚುನಾವಣೆಯ ಪ್ರಣಾಳಿಕೆಯನ್ನೇನೋ ಪ್ರಕಟಿಸಿವೆ. ಆದರೆ ಈ ಪ್ರಣಾಳಿಕೆಗೆ ಅವು ಎಷ್ಟು ಬದ್ಧ ಹಾಗೂ ಅವುಗಳ ಜಾರಿಗೆ ಏನಾದರೂ ಗಂಭೀರ ಕ್ರಮ ವಹಿಸಲಿವೆಯೇ ಎಂದು ಪ್ರಶ್ನಿಸಲೇಬೇಕಾಗುತ್ತದೆ. ಮುಖ್ಯವಾಗಿ ಭೂಮಾಲೀಕ ಬಂಡವಾಳಗಾರರ ಬಲಪಂಥೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್‌ಗಳ ವಿಷಯದಲ್ಲಂತೂ ಪ್ರತಿ ಚುನಾವಣೆ ನಂತರವೂ ಅದರತ್ತ ತಿರುಗಿ ನೋಡದ ಇತಿಹಾಸವೇ ಇದೆ. ಹೀಗೆ ಜನತೆಗೆ ನೀಡಿದ ವಚನ ಚುನಾವಣೆಗಳು ಮುಗಿದ ಬಳಿಕ ಮರೆತುಹೋಗುವ ಜಾಣತನವನ್ನು ಇವು ತೋರಿಸುತ್ತಿವೆ. ಅದೇನಿದ್ದರೂ ಅವರಲ್ಲಿನ ಕೆಲ ಬುದ್ಧಿಜೀವಿಗಳ ಒಣ ಕಸರತ್ತಿನಂತಾಗಿದೆ.

ತತ್ವನಿಷ್ಠ ಹಾಗೂ ಪರಿಶುದ್ಧ (?) ರಾಜಕಾರಣ ತನ್ನದೆಂದು ಹೇಳಿಕೊಳ್ಳುವ ಬಿಜೆಪಿಯು ಕಳೆದ ವಿಧಾನಸಭಾ ಚುನಾವಣೆಯಲ್ಲಿ 2 ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿ ನೀಡುವುದಾಗಿಯೂ, ಬೆಲೆ ಏರಿಕೆಯಿಂದ ಜನರನ್ನು ರಕ್ಷಿಸಲಿದೆಯೆಂದೂ ಅದಕ್ಕೆಲ್ಲಾ ಬಿಜೆಪಿಯೇ ಪರಿಹಾರವೆಂದೆಲ್ಲಾ ಹೇಳಿ ಮತ ಗಿಟ್ಟಿಸಿತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಜನರ ಆಗ್ರಹಗಳಿದ್ದರೂ ಇದುವರೆಗೂ ಅದರ ಬಗ್ಗೆ ತುಟಿ ಬಿಚ್ಚಲಿಲ್ಲ. ಬೆಲೆ ಏರಿಕೆಯ ಬಾಧೆಯಿಂದ ಜನರನ್ನು ರಕ್ಷಿಸಲು ತನ್ನ ಮಿತಿಯಲ್ಲಾದರೂ ಕ್ರಮಗಳೇ ಇಲ್ಲ. ರೇಷನ್ ಇಲ್ಲ, ರೇಷನ್ ಕಾರ್ಡೂ ಇಲ್ಲ. ಈಗಲೂ ಗ್ರಾಮೀಣ ಅಭಿವೃದ್ಧಿಗೆ 'ಪಂಚ ಸೂತ್ರ'ಗಳನ್ನು ಪ್ರಕಟಿಸಿದೆ. ಪಂಚಾಯತ್‌ಗಳಿಂದ ಕಸಿದು ನೀರಿನ ಖಾಸಗೀಕರಣ ವ್ಯಾಪಾರೀಕರಣ, ಮಬಾರೀಕರಣ ಮಾಡುತ್ತಿರುವ ಬಿಜೆಪಿ ಸರ್ಕಾರವೇ ಇದೀಗ ಗ್ರಾಮದ ಪ್ರತಿಯೊಬ್ಬರಿಗೂ ನಿತ್ಯ ಸರಾಸರಿ 55 ಲೀಟರ್ ನೀರು ಕೊಡುವುದಾಗಿ ಹೇಳಿದೆ. ಕುಡಿವ ನೀರಿನ ಸರಬರಾಜಿಗೆ 'ಜಿಲ್ಲಾಮಟ್ಟದ' ವಿಶೇಷ ಘಟಕದ ಸ್ಥಾಪನೆಯೂ ಇದರ ಭಾಗ ರೈತರಿಗೆ ಶೇ.3.ರ ಬಡ್ಡಿದರದಲ್ಲಿ ಸಾಲ ನೀಡಿದ್ದಾಯ್ತು! ಇನ್ನು ಶೇ.1 ರಲ್ಲಿ ಬಡ್ಡಿ ನೀಡುವ ಭರವಸೆ, ಆದರೆ ಫಸಲಿಗೆ ಬೆಲೆ ಇಲ್ಲ, ಸಾಲದ ಬಾಧೆಯಿಂದ ರೈತರ ಆತ್ಮಹತ್ಯೆ ನಿಲ್ಲಲೇ ಇಲ್ಲ. ಹಳ್ಳಿ ಹಳ್ಳಿಗಳಲ್ಲಿ ಕೃಷಿ ವಿನಾಶಕ್ಕೆ 'ಪ್ರೋತ್ಸಾಹ'! ಕೂಲಿಕಾರರ ವಲಸೆ, ಕೂಲಿಗಾಗಿ ಅವರ ಪರಿತಾಪವೂ ತಪ್ಪಲೇ ಇಲ್ಲ, ರೇಗಾದಂತಹ ಯೋಜನೆಯಲ್ಲಿ ಕೂಲಿಕಾರರಿಗೆ ಸಿಗಬೇಕಾದ ಸಾವಿರಾರು ಕೋಟಿ ರೂಪಾಯಿಗಳನ್ನು ಗುಳುಂ ಮಾಡಿದ್ದಾಯ್ತು. ಕೈಗಾರಿಕಾ ಸ್ಥಾಪನೆ, ಅಭಿವೃದ್ಧಿ ಹೆಸರಿನಲ್ಲಿ ಹತ್ತು ಲಕ್ಷಕ್ಕೂ ಅಧಿಕ ಎಕರೆ ಭೂಸ್ವಾದೀನ, ಮತ್ತು ಅಕ್ರಮ ಹಗರಣಗಳಲ್ಲಿ ಮುಖ್ಯಮಂತ್ರಿಯಾದಿಯಾಗಿ ಸಚಿವರೆಲ್ಲ ಭಾಗಿ, ಹೀಗಿರುವಾಗ ಬಿಜೆಪಿ ಹೇಳುವಂತೆ, 'ವಿಶೇಷ ಕೃಷಿ ವಲಯ' ಸ್ಥಾಪನೆ ಎಂಬುದು ಹೇಗಿರಬಹುದು? ಯಾಕಿರಬಹುದು? ಏನಾಗಬಹುದು, ಇದನ್ನು ಊಹಿಸುವುದು ಸುಲಭ, ಇದೂ ಭೂಗಳ್ಳತನಕ್ಕೆ ಒಂದು ಹೆಚ್ಚಿನ ಅಧಿಕಾರ,. ಅವಕಾಶ ಪಡೆದಂತೆಯೇ.. ಮೇಲಾಗಿ ಇವು ಪಂಚಾಯತ್ ಚುನಾವಣೆಯ ಭರವಸೆಗಳೋ ಅಥವಾ ಮುಂದಿನ ವಿಧಾನಸಭಾ ಚುನಾವಣೆಗೆ ಸಿದ್ಧತೆಯಾ ಎಂಬ ಅನುಮಾನ ಬರುತ್ತದೆ. ಗ್ರಾಮ ಪಂಚಾಯತ್‌ಗಳಿಗೆ ಎರಡು ಕೋಟಿ ರೂಪಾಯಿಗಳ ಅನುದಾನ ನೀಡುವ ಭರವಸೆಯು ಕೆಳಹಂತದಲ್ಲಿರುವ ಪಂಚಾಯತ್ ಸದಸ್ಯರ ಮೂಗಿಗೆ ಹಚ್ಚಿದ ತುಪ್ಪ, ಆ ಮೂಲಕ ಬಿಜೆಪಿ ಕಾಲಾಳುಗಳಾಗಿ ಈ ಓಟು ಹಾಕಿಸಲು ದುಡಿಯಲು ನೀಡಿದ ಒತ್ತಾಯವೇ.

ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಏನೇ ಹೇಳಿಕೊಂಡರೂ ಅದಕ್ಕೆ ನಿಜಕ್ಕೂ ಈ ಚುನಾವಣೆ ಪಂಚಾಯತ್‌ಗಳ ಅಧಿಕಾರ ಗ್ರಾಮೀಣ ಅಭಿವೃದ್ಧಿಯ ಒಲವಿನಿಂದ ಅಲ್ಲವೇ ಅಲ್ಲ. ಹೇಗಾದರೂ ಮಾಡಿ ಸ್ಥಳೀಯ ಸಂಸ್ಥೆಗಳ ಹಿಡಿತ ಸಾಧಿಸಿ ರಾಜಕೀಯ ಮೇಲುಗೈ ತೋರಬೇಕು. ಅದು ತನ್ನ ಪಕ್ಷಕ್ಕೆ ಕೆಳಹಂತಗಳಲ್ಲಿ ಕಾರ್ಯಕರ್ತರನ್ನು ಹಿಡಿಯುವುದೇ ಗುರಿ. ಮೇಲಾಗಿ ಅದೇ ಘೋಷಿಸಿಕೊಂಡಂತೆ ಹೆಚ್ಚು ಗೆದ್ದರೆ ತನ್ನ ಈ ಅಧಿಕಾರದ ಅವಧಿಯಲ್ಲಿ ನಡೆಸಿದ ಹಗರಣ, ಅಕ್ರಮ ಪಾತಕಗಳಿಗೆ ಅಂಗೀಕಾರ ಸಿಕ್ಕಿತೆಂದು ವಿರೋಧಿಗಳ ಬಾಯಿ ಮುಚ್ಚಿಸುವುದು.

ಇದೇ ಹೊತ್ತಿನಲ್ಲಿ ಬಿಜೆಪಿ ಸ್ಥಳೀಯ ಸಂಸ್ಥೆಗಳನ್ನು ಸೊರಗಿಸಿದೆ. ಜನತೆಯ ನಡುವೆ ಪ್ರಜಾಪ್ರಭುತ್ವವನು[illegible]ಸಿ, ಜನರ ಕೈಗೆ ಅಧಿಕಾರ ನೀಡಿ ಅವರ ಪಾತ್ರ [illegible]ಜಿಯಲ್ಲ. ಈ ಅವಧಿಯಲ್ಲಿ ಗ್ರಾಮಸಭೆಗಳೇ [illegible]ಗುತ್ತದೆ. ಆಗ ಪರಿಹ[illegible] ಅಭಿವೃದ್ಧಿ ಯೋಜನೆ ಎಲ್ಲಿಂದ? ನಡೆದ [illegible] ಮುಖ್ಯ ಜವಾಬ[illegible] ಅಭಿವೃದ್ಧಿ ಕಾ[illegible]ವನ್ನೂ ಗುತ್ತಿಗೆದಾರರಿಗೆ ಪಾವತಿಯಾಗದೇ ಬೀದಿ

ಪುಟ 4ಕ್ಕೆ

ಬಾಬಾಬುಡನ್‌ಗಿರಿ : ಸೌಹಾರ್ದ ಪರಂಪರೆ ರಕ್ಷಣೆಯ ಸವಾಲು

ಬಾಲಕ್ಕೆ ಬೆಂಕಿ ಹೊತ್ತಿಸಿಕೊಂಡಿದೆ! ಅದು ಅದರ ದೇಹ ಸುಟ್ಟರೆ (ಸುಟ್ಟುಕೊಂಡಿತು ಎನ್ನಬಹುದಿತ್ತು). ಆದರೆ ಆ ಬೆಂಕಿ ಪಸರಿಸಿದರೆ ಮತ್ತೆ ಭಾರತದ ಇಡೀ ಸಮಾಜವನ್ನು, ಅದರ ಸಾಧನೆ ಸಂಬಂಧಗಳು ಸಾಮರಸ್ಯವನ್ನು ದಹಿಸಲಿದೆ.

ದೇಶದ ಜನರ ಮುಂದೆ ಕೋಮುವಾದದ ಅಜೆಂಡಾವೆ ಆದ್ಯತೆಯ ಪ್ರಶ್ನೆಯನ್ನಾಗಿಸಲು ಸಕಲ ಸಿದ್ಧತೆ ಮಾಡಿಕೊಂಡಿದೆ ಸಂಘ ಪರಿವಾರ. 'ಹಿಂದೂ ಸಮಾಜೋತ್ಸವ' ಗಳನ್ನು ಸಂಘಟಿಸಿದ್ದಾಯ್ತು. ಇನ್ನೂ ಅಂತಹ ಹಲವುಗಳನ್ನು ನಡೆಸಲಿವೆ.

ವಿವಾದಗಳ ಸೃಷ್ಟಿ

ಒಂದೊಂದು ರಾಜ್ಯದಲ್ಲಿ ಒಂದೊಂದು ವಿವಾದಗಳು ! ಒಂದೊಂದು ಜಿಲ್ಲೆ, ಊರುಗಳಲ್ಲಿ ಹೊಸ ಹೊಸ ವಿವಾದಗಳ ಸೃಷ್ಟಿ.. ಈ ಬಾರಿ ಮತ್ತೆ ಬಾಬಾಬುಡನ್‌ಗಿರಿಯಲ್ಲಿ ಚಡ್ಡಿ ಪಡೆಗಳ ವಿಕಾರ ನರ್ತನ! ಇಲ್ಲಿ ಇಲ್ಲದ, ಸಲ್ಲದ ವಿವಾದ ಹುಟ್ಟು ಹಾಕಿಸುವ ಸಂಘ ಪರಿವಾರ ಇದನ್ನು ರಾಷ್ಟ್ರವ್ಯಾಪಿ ವಿವಾದವನ್ನಾಗಿಸಿ ಹಬ್ಬಿಸಲಿದೆಯಂತೆ. ಸೌಹಾರ್ದತೆಯ ಬಾಬಾಬುಡನ್‌ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡುವುದಾಗಿ ಹಿಂದೆ ಅದು ಸಾರಿದ್ದಂತೆ! ಅಂದರೆ ಬಾಬಾಬುಡನ್‌ಸ್ವಾಮಿ ದರ್ಗಾ ದತ್ತಪೀಠದ ಧ್ವಂಸ! ಇದನ್ನೇ ಅವರು ಹೇಳುವುದು ವಿಮೋಚನೆಯೆಂದು.

ಇತ್ತೀಚಿನ ವರುಷಗಳಲ್ಲಿ ದತ್ತಜಯಂತಿ ಎಂಬ ಹಿಂದೆ ಎಂದೂ ಇಲ್ಲದ ಹೊಸ ಆಚರಣೆಯನ್ನು ಆರ್.ಎಸ್.ಎಸ್. ಪರಿವಾರ ಹುಟ್ಟುಹಾಕಿದೆ. ಅದರ ಪೂರ್ವ ಸಿದ್ದತೆಯಾಗಿ ದತ್ತಮಾಲೆ, ದತ್ತಯಜ್ಞ, ಶೋಭಾಯಾತ್ರೆ ಇತ್ಯಾದಿಗಳನ್ನು ಆರಂಭಿಸಿದೆ. ಇದು ಬಾಬಾಬುಡನ್‌ಗಿರಿಯಲ್ಲಿನ ಸಾಮರಸ್ಯದ ಪರಂಪರೆ, ಸೂಫಿ ಆಚರಣೆಗೆ ವಿರುದ್ಧವಾದದ್ದು ಮತ್ತು 1975 ರ ಹಿಂದಿದ್ದ ಯಥಾಸ್ಥಿತಿಯನ್ನೇ ಕಾಪಾಡಿಕೊಳ್ಳಬೇಕು ಎಂಬ ಸುಪ್ರಿಂ ಕೋರ್ಟ್‌ನ ನಿರ್ದೇಶನಕ್ಕೆ ವಿರುದ್ಧವಾದದ್ದು. ಹೀಗೆ ಗಿರಿಯ ಗುಹೆಯ ವೈವಿಧ್ಯಮಯ, ಬಹುಮುಖಿ ಸಂಸ್ಕೃತಿಗೆ ಮಾರಕವಾದುದು. ಇಲ್ಲಿಯ ಸಮನ್ವಯ ಸಾಮರಸ್ಯದ ಸಂಸ್ಕೃತಿಯನ್ನು ನಾಶ ಮಾಡಲು ಅದೇಷ್ಟೇ ಬಾರಿ, ಅದೆಷ್ಟೋ ಷಡ್ಯಂತ್ರಗಳ ಧಾಳಿ ನಡೆಸಿದರೂ ಸಂಘ ಪರಿವಾರಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ, ಪ್ರಗತಿಪರರಿಂದ. ಜನಸಾಮಾನ್ಯರಿಂದ ಎದ್ದುಬಂದಿರುವ ಪ್ರತಿರೋಧ, ಅಲ್ಲಿ ಸಿಥಿಲವಾಗದ ಸಾಮರಸ್ಯ ಮನೋಭಾವ ಹೀಗಾಗಿ ಹೊಸ ಹೊಸ ಅವಕಾಶಗಳಿಗೆ ಹೊಂಚುಹಾಕಿ, ಧಾರ್ಮಿಕ ಮುಖವಾಡ ಹಾಕಿಕೊಂಡು ಮತ್ತೆ ಮತ್ತೆ ಯತ್ನಿಸುವುದು. ನೆರೆಹೊರೆ ಜಿಲ್ಲೆಗಳಿಂದ ಜನರನ್ನು ಸೇರಿಸಿ ಹೂಂಕರಿಸುವುದು.

ಉಲ್ಲಂಘನೆ

ಹಾಗೆ ನೋಡಿದರೆ ಕಳೆದ ಒಂದೆರಡು ವರ್ಷಗಳಿಗೆ ಹೋಲಿಸಿದರೆ ಈ ವರ್ಷದ ಅಬ್ಬರ, ಅಟ್ಟಹಾಸ ಕೊಂಚ ಗರಿಗೆದರಿದೆ ಎಂದೇ ಹೇಳಬೇಕು. ದತ್ತ ಅಭಿಯಾನ ದತ್ತಮಾಲೆ, ಭಜನೆ, ಕೊನೆಯದಾಗಿ ದತ್ತಜಯಂತಿಗೆ ಕೆಲವು ಸಾವಿರ ಜನರನ್ನು ಸೇರಿಸಲಾಗಿದೆ. ದರ್ಗಾಪೀಠವಿರುವ ಗುಹೆಯು ಕುಸಿದ ಬಳಿಕ ಒಳಗೆ ಪ್ರವೇಶ ನಿಷೇಧಿತವಾಗಿತ್ತು. ಅದನ್ನು ದುರಸ್ತಿ ಮಾಡಲೆಂದು ಯೋಜನೆಗಳು ಸಿದ್ಧವಾದವು. ಆದರೆ ಇವು ಗುಹೆಯ ಮೂಲ ಸ್ವರೂಪಕ್ಕೆ ದಕ್ಕೆ ತರುವಂತಹ, ಪರಿಣತಿಯೇ ಇಲ್ಲದ, ಕಟ್ಟಡ ಉರುಳಿಸುವ ಪರಿಣಿತರಿಗೆ ಕಾಮಗಾರಿ ನಕ್ಷೆ ರೂಪಿಸಲು ಗುತ್ತಿಗೆ ಕೊಟ್ಟಿದ್ದು, ಇತ್ಯಾದಿಗಳ ವಿರುದ್ಧ ಪ್ರಗತಿಪರರು ನ್ಯಾಯಾಲಯದ ಕಟ್ಟೆ ಹತ್ತಿ ಅದಕ್ಕೆ ತಡೆಯನ್ನೂ ತಂದದ್ದು ಅತ್ಯಂತ ಗಮನಾರ್ಹ ಕ್ರಮವಾಗಿದೆ. ಹೀಗೆ ಗುಹೆಯ ದುರಸ್ತಿಯ ವಿಳಂಬ, ಅಲ್ಲಿ ಪ್ರವೇಶಕ್ಕೂ ತಡೆಯಾಗಿತ್ತು. ಏನಿದ್ದರೂ ಹೊರಗಿನಿಂದಲೇ ಭಕ್ತಿ ಸಮರ್ಪಣೆಯಾಗುತ್ತಿತ್ತು. ಅಲ್ಲಿನ ಪಾದುಕೆಗಳು ತಾಲ್ಲೂಕು ಆಡಳಿತದ ಸುಪರ್ದಿಯಲ್ಲಿದ್ದವು. ಈ ಬಾರಿ 'ದತ್ತ ಜಯಂತಿ' ಸಂದರ್ಭಕ್ಕೆ 'ದರುಶನಕ್ಕೆಂದು' ಪಾದುಕೆಗಳನ್ನು ಗುಹೆಗೆ ತರಲಾಗಿದೆ.

ಉಸ್ತುವಾರಿ

ಎಷ್ಟೆಲ್ಲಾ ನ್ಯಾಯಾಲಯದ ನಿರ್ದೇಶನ, ಪ್ರತಿರೋಧವಿದ್ದರೂ ಈ ಬಾರಿ 'ದತ್ತ ಜಯಂತಿ' ಸಂಘ ಪರಿವಾರ ಅಂದುಕೊಂಡಂತೆ ನಡೆದಿದೆ ಎನ್ನಬಹುದು. ಎಲ್ಲಾ ಉಲ್ಲಂಘನೆಗಳಿಗೂ ರಾಜ್ಯ ಸರ್ಕಾರದ ಪೂರ್ಣ ಬೆಂಬಲ ಕಣ್ಗಾವಲಿನಲ್ಲೇ ನಡೆದಿವೆ. ಚಿಕ್ಕಮಗಳೂರಿಗೆ ಸಾವಿರಾರು ದತ್ತ ಮಾಲಾಧಾರಿಗಳು ಬಂದಿದ್ದು, ಭಜನೆ ಮಾಡಿದ್ದು, ಶೋಭಾಯಾತ್ರೆ (?) ಮಾಲಾಧಾರಿಗಳಿಂದ ಗುಹೆಗೆ ಪ್ರವೇಶ 'ಇರುಮುಡಿ' ಸಲ್ಲಿಕೆ, ಪಾದುಕೆಗೆ ಪೂಜೆ, ಗುಹೆಯ ಹೊರಗೆ ಪಂಚಲೋಹದ ದತ್ತ ವಿಗ್ರಹ ಸ್ಥಾಪನೆ, ಈ ವಿಗ್ರಹವನ್ನು ಆಲ್ದೂರಿನಿಂದ 'ದೇವರ ಅಡ್ಡೆ'ಯಲ್ಲಿ ಹೊತ್ತು ತಂದುದು, ಗುಹೆಯ ಪರಿಸರದಲ್ಲೇ ರುದ್ರಹೋಮ, ದುರ್ಗಾ ಗಣಪತಿ ಹೋಮ, ದತ್ತಾತ್ರೆಯ ಹೋಮಗಳನ್ನು ನಡೆಸಿದ್ದು, ಸಭೆ ಮಾಡಿದ್ದು, ಇದಕ್ಕೆಲ್ಲಾ ವಿಶ್ವ ಹಿಂದೂ ಪರಿಷತ್, ಶ್ರೀರಾಮಸೇನೆಗಳ ಸಾರಥ್ಯ! ಸಂಸದ ಸದಾನಂದಗೌಡ, ಶಾಸಕ ಸಿ.ಟಿ.ರವಿ, ಸಚೇತಕ ಜೀವರಾಜ್, ಹಾಗೂ ಚೆಡ್ಡಿ ನಾಯಕರುಗಳ ಉಸ್ತುವಾರಿ ಬೇರೆ. ಇವೆಲ್ಲವೂ ನ್ಯಾಯಾಲಯ ಹಾಗೂ ಪರಂಪರೆಯ ನಗ್ನ ಉಲ್ಲಂಘನೆ ಹಾಗೂ ಮಾಡಿದ ಅವಮಾನ. ಇಷ್ಟಕ್ಕೆಲ್ಲಾ ಅವಕಾಶ ಮಾಡಿಕೊಟ್ಟದ್ದು ಸಾಕಾಗಲಿಲ್ಲವೆಂದು ಕರ್ನಾಟಕ ಸರ್ಕಾರದ ಜಿಲ್ಲಾಡಳಿತವೇ ಭಕ್ತರಿಗೆ (ಫ್ಯಾಸಿಸ್ಟ್ ಚೆಡ್ಡಿ ಪಡೆಗೆ) ಪ್ರಸಾದ ವಿತರಿಸಿ ಪುನೀತವಾಗಿದೆ! ಸಂವಿಧಾನ ಕಾನೂನನ್ನು ಪಾಲಿಸಬೇಕಾದ ಸರ್ಕಾರವೇ ಇಲ್ಲಿ ಯಾವುದೇ ಅಳುಕೂ ಇಲ್ಲದೇ ಎಲ್ಲವನ್ನೂ ಉಲ್ಲಂಘಿಸಿ ದಂಡನೀಯ ಅಪರಾಧವೆಸಗಿದೆ. ಬಿಜೆಪಿ ಅಧಿಕಾರದಲ್ಲಿರುವುದನ್ನು ಸಂಘ ಪರಿವಾರ ಬಳಸುತ್ತಿರುವ ರೀತಿಯದು.

ಬಾಬಾಬುಡನ್‌ಗಿರಿಯಲ್ಲಿ 'ಪೀಠ ದರ್ಗಾ'ದ ದರ್ಶನಕ್ಕೆ ಯಾವುದೇ ಧರ್ಮ, ಜಾತಿ, ಲಿಂಗ, ವರ್ಣಗಳ ತಾರತಮ್ಯವೇ ಇಲ್ಲ. ಹಿಂದೂ, ಮುಸ್ಲಿಂರು ಒಂದಾಗಿಯೇ ಇಲ್ಲಿಗೆ ಬರುತ್ತಾರೆ. ಜನರ ದೃಷ್ಟಿಯಲ್ಲಿ ಬಾಬಾ, ದತ್ತ, ಬಂದೇ, ಪಾದುಕೆ, ಗದ್ದುಗೆಗಳು ಬೇರೆ ಅಲ್ಲವೇ ಅಲ್ಲ. ಇಬ್ಬರೂ ಒಬ್ಬನೇ, ಒಂದೇ. ಅದೇ ಸೂಫಿ ಪರಂಪರೆಯ ವೈಶಿಷ್ಟತೆ. ಆದರೆ ಸಂಘ ಪರಿವಾರ 'ಬಾಬಾ ದತ್ತರನ್ನು ವಿಭಜಿಸುತ್ತಿದೆ. ಮತ್ತು ಎಲ್ಲವನ್ನೂ ವೈಧಿಕೀಕರಣವನ್ನು ಮಾಡಲು ಹೊರಟಿದೆ. ಹಂತಹಂತವಾಗಿ ನೂರಾರು ವರುಷಗಳಲ್ಲಿರುವ ಕೋಮುಸೌಹಾರ್ದತೆ, ಆರಾಧನಾ ವಿಶಿಷ್ಟ ಪದ್ಧತಿಗಳನ್ನು ನಾಶಗೈಯ್ಯುತ್ತಿದೆ.

ಇಷ್ಟೆಲ್ಲಾ ಅನಾಹುತಗಳನ್ನು ನಡೆಸಿದ ಫ್ಯಾಸಿಸ್ಟರ ಈ ತುಣುಕುಗಳು ಅಪಾಯದ ಸಂದೇಶವನ್ನು ಸಾರಿವೆ. ಹಿಂದೂ ಅರ್ಚಕರ ನೇಮಕ, ಅಲ್ಲಿನ ದರ್ಗಾ ಗೋರಿಗಳ ಸ್ಥಳಾಂತರ, ದತ್ತ ವಿಗ್ರಹದ ಸ್ಥಾಪನೆಗೆ ಆಗ್ರಹ. ಇವಷ್ಟೇ ಅಲ್ಲ, ಮುಖ್ಯವಾಗಿ ಸಾಮರಸ್ಯದ ಜ್ಯೋತಿಯನ್ನು ನಂದಿಸಿ, ದೇಶದೆಲ್ಲೆಡೆ ಅದನ್ನು ಕಿಚ್ಚಾಗಿಸಿ ಹಬ್ಬಿಸುವ ಬೆದರಿಕೆಯ ಪಂಥಾಹ್ವಾನ.

ಈ ಅಟ್ಟಹಾಸಕ್ಕೆ ಸರ್ಕಾರದ ಮೌನಸಮ್ಮತಿ

ಆದರೆ ಮತ್ತೆ ಮೂಡಿಬರಲಿ ಜನತೆಯ ಪ್ರತಿರೋಧ ಬೆಳೆಯಬೇಕಿದೆ. ಈ ನಾಡು, ಶಾಂತಿ, ಸಾಮರಸ್ಯ ಬಯಸುವವರ ಕ್ರಿಯಾಶೀಲ ಐಕ್ಯ ಕಾರ್ಯಾಚರಣೆ. ಕಾಲ ಬಂದಿದೆ ಈಗ.

ಸಂಪಾದಕೀಯ

ಪುಟ 3 ರಿಂದ

ಹೋರಾಟಕ್ಕೆ ಇಳಿದಿದ್ದಾರೆ. ಈಗಾಗಲೇ ಸಾಲದ ಬಲೆಯಲ್ಲಿ ಬಿದ್ದಿರುವ ಸರ್ಕಾರ ಎಲ್ಲಿಂದ ಹಣ ತರಲಿದೆ? ವಿಶ್ವಬ್ಯಾಂಕ್‌ಗಳಿಂದಲೇ? ಹೀಗೆ ಸಂಪನ್ಮೂಲಗಳ ಕ್ರೋಢೀಕರಣ, ವಿನಿಯೋಗದತ್ತ ಗಮನವಿಲ್ಲ. ಬಿಜೆಪಿ ತತ್ವವೇ ಫ್ಯಾಸಿಸ್ಟ್ ಸ್ವರೂಪದ್ದು. ಅದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಹೆಚ್ಚು ಕೇಂದ್ರೀಕೃತ ಅಧಿಕಾರವನ್ನೇ ಪಾಲಿಸುತ್ತಿರುವುದು. ಹೀಗೆ ಬಿಜೆಪಿ ಪ್ರಣಾಳಿಕೆಗೂ ಭರವಸೆಗಳಿಗೂ ಮತ್ತು ಜಾರಿಯಲ್ಲಿ : ಸಂಬಂಧವೇ ಇಲ್ಲದೇ ಎಂದಿನಂತೆ ವಂಚನೆಗಳ ವರಸೆಯಾಗಿದೆ. ಅಲ್ಲದೆ ಜಾರುವಾರು ರಕ್ಷಣೆ, ಸಂಸತಿ ರಕ್ಷಣೆಗೆ ಪಡೆಗಳ ರಚನೆ ಇತ್ಯಾದಿಗಳು ಸಂಘ ಪರಿವಾರದ ಅಜೆಂಡಾಗಳ ಜಾರಿಯ ಕ್ರಮವಾಗಿದೆ.

ಒಂದು ವೇಳೆ ಬಿಜೆಪಿಗೆ ತನ್ನ ಸರ್ಕಾರದ ಸಾಧನೆ, ಪ್ರಣಾಳಿಕೆಯ ಆಶ್ವಾಸನೆ ಜಾರಿಗೊಳಿಸುವ ಬದ್ಧತೆಗೆ ವಿಶ್ವಾಸ ಮೂಡಿಸುವಂತಿದ್ದರೆ ಯಾಕೆ ಅದು ಜಾತಿ, ಅಪಾರ ಪ್ರಮಾಣದಲ್ಲಿ ಹಣ, ಹೆಂಡ, ವಸ್ತುಗಳನ್ನು ಬಳಸುತ್ತಿದೆ. ಆಡಳಿತವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ? ಇದು ಅರ್ಥವಾಗದಂತಹದ್ದೇನಲ್ಲ.

ಇನ್ನೂ ಅಧಿಕೃತ ವಿರೋಧ ಪಕ್ಷವಾಗಿ ವಿಫಲವಾಗಿರುವ ಕಾಂಗ್ರೆಸ್‌ನ ಭರವಸೆಗಳು ಕೇಂದ್ರ ಸರ್ಕಾರದ ಬಲವನ್ನೇ ಆಧರಿಸಿವೆ. ಉದಾರೀಕರಣ, ಬಂಡವಾಳ ಹೂಡಿಕೆ, ಖಾಸಗೀಕರಣದ ಆರಾಧಕನಾಗಿರುವ ಕಾಂಗ್ರೆಸ್ ಭೂಸ್ವಾದೀನ ತಡೆಯುವ ಪರಿ ಹೇಗೆ? ಸಕಾಲದಲ್ಲಿ ರಸಗೊಬ್ಬರ ಬೀಜ ಪೂರೈಕೆ ಇತ್ಯಾದಿಗಳು ಪಂಚಾಯತ್ ವ್ಯಾಪ್ತಿಗೆ ಬರುವುದೇ, ಈ ಮಾರುಕಟ್ಟೆ ಹೈಟೆಕ್ ಆಡಳಿತದ ಫಲ ಸಿಗುವುದಾದರೂ ಯಾರಿಗೆ? ಅದೂ ಮಾರುಕಟ್ಟೆಯ ಮೇಲೆ ನಿಯಂತ್ರಣವೇ ಇಲ್ಲದೆ. ಮಾರುಕಟ್ಟೆ ಶಕ್ತಿಗಳ ಮನಬಂದಂತೆ ಆಟಕ್ಕೆ ಅವಕಾಶ ನೀಡಿ! ಅದರ ಕಾಂಕ್ರಿಟ್ ರಸ್ತೆ ನಿರ್ಮಾಣ, ಗ್ರಾಮೀಣ ಅಭಿವೃದ್ಧಿಯ ಹಲವು ಯೋಜನೆಗಳು ಇತ್ಯಾದಿಗಳನ್ನು ಮಾಡಬೇಕೆಂದರೆ ಸಂಪನ್ಮೂಲವೆಲ್ಲಿ? ಮತ್ತೆ ಜಾಗತಿಕ ಸಾಲಕ್ಕೆ ಕೈಚಾಚುವುದೇ? ಅದರ ಹೊರೆ ಸಾಮಾನ್ಯರಿಗೆ ಬರೆಯಾಗದೇ? ಇವೆಲ್ಲವನ್ನೂ ಪೂರೈಸಬೇಕೆಂದರೆ ಅದು ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು. ಅಂದರೆ ಬಂದ ಮೇಲೆ ಭರವಸೆಗಳ ಈಡೇರಿಕೆ ಇವಲ್ಲದೇ ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಮತಗಳ ಮೇಲೆ ಕಣ್ಣಿರಿಸಿದ ಭರವಸೆಗಳು ಹಲವು. ಹೊರತು ಕಾಂಗ್ರೆಸ್ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವ, ಸಂಪನ್ಮೂಲ ಹೆಚ್ಚಿಸುವ ನಿರ್ದಿಷ್ಟ ಬದ್ಧತೆಯೇ ಇಲ್ಲ. ಇನ್ನೂ ಜೆಡಿ(ಎಸ್)ನ ಪ್ರಣಾಳಿಕೆಯು ಕಾಂಗ್ರೆಸ್‌ನ ಮುಖ್ಯವಾಗಿ ಬಿಜೆಪಿಯ ಆಡಳಿತ ವೈಖರಿಯ ಮೇಲೆ ಬಂದಿತವಾಗಿದೆ. ಇನ್ನೊಂದೆಡೆ ಎಡಪಕ್ಷಗಳ ಪ್ರಣಾಳಿಕೆ, ಭರವಸೆಗಳ ಹೆಚ್ಚಿನ ಅಧಿಕಾರ, ಸಂರಕ್ಷಣೆಯು ಹೋರಾಟದ ದಿಕ್ಕಿನಲ್ಲಿವೆ ಮತ್ತು ಆಡಳಿತದ ನಿಜವಾದ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ, ಸ್ಥಳೀಯ ಸಂಸ್ಥೆಗಳೆಂದರೆ ಸ್ಥಳೀಯ ಸರ್ಕಾರವನ್ನಾಗಿ ಬಲ ತುಂಬುವ ಹಲವಾರು ಸಕಾರಾತ್ಮಕ ಅಂಶಗಳು ಅಲ್ಲಿವೆ. ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳದ ಪಂಚಾಯತ್ ವ್ಯವಸ್ಥೆಯ ವಿಶಿಷ್ಟ ಅನುಭವ ಎಡಪಕ್ಷಗಳಿಗಲ್ಲದೇ ಬೇರಾರಿಗೂ ಇಲ್ಲ. ಹೀಗಾಗಿ ಈ ಅನುಭವ ಅನನ್ಯವಾದುದು.

ಅಧಿಕಾರರೂಡ ಪಕ್ಷಗಳ ಆಶ್ವಾಸನೆ, ಭರವಸೆಗಳೇನೇ ಇದ್ದರೂ ಮೂಲತ: ಅವುಗಳ ಪ್ರಾಯೋಗಿಕ ಕಾರ್ಯಗಳನ್ನೇ ಜನತೆಯು ಆಧಾರವನ್ನಾಗಿ ಪರಿಗಣಿಸಬೇಕಾಗುತ್ತದೆ. ಸಮಸ್ಯೆ, ಸಂಕಷ್ಟಗಳಿಗೆ ಕಾರಣವಾದ ಬಿಜೆಪಿ, ಕಾಂಗ್ರೆಸ್‌ಗಳನ್ನು ಸೋಲಿಸದೇ ಸ್ಥಳೀಯ ಸಂಸ್ಥೆಗಳಿಗೆ ಬಲ ತುಂಬುವುದು ಅಸಾಧ್ಯ. ಆದ್ದರಿಂದ ಜನತೆ ಇದಕ್ಕೆ ಪರ್ಯಾಯ ರೂಪಿಸುವುದರತ್ತಲೇ ತೀರ್ಪು ನೀಡಲಿ.

○

ಜಿ.ಪಂ ಮತ್ತು ತಾ.ಪಂಚುನಾವಣೆಯಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಿಪಿಐ(ಎಂ) ವತಿಯಿಂದ ಸ್ಪರ್ಧಿಸಿದವರ ವಿವರ

	ಜಿಲ್ಲೆ	ಜಿಲ್ಲಾ ಪಂಚಾಯಿತಿ	ತಾಲ್ಲೂಕು ಪಂಚಾಯಿತಿ
1.	ಚಿಕ್ಕಬಳ್ಳಾಪುರ ಜಿಲ್ಲೆ		
	ಬಾಗೇಪಲ್ಲಿ ತಾಲ್ಲೂಕು	04	15 ಎಲ್ಲಾ ಸ್ಥಾನಕ್ಕೂ ಸ್ಪರ್ಧೆ
	ಗುಡಿಬಂಡೆ ತಾಲ್ಲೂಕು	02	11 ಎಲ್ಲಾ ಸ್ಥಾನಕ್ಕೂ ಸ್ಪರ್ಧೆ
	ಗೌರಿಬಿದನೂರು ತಾಲ್ಲೂಕು	03	05
	ಚಿಂತಾಮಣಿ	02	02
	ಒಟ್ಟು ಚಿಕ್ಕಬಳ್ಳಾಪುರ ಜಿಲ್ಲೆ	11	33
2.	ಕೋಲಾರ ಜಿಲ್ಲೆ	03	11
3.	ಬೆಂಗಳೂರು	01	03
4.	ತುಮಕೂರು	01	-
5.	ಚಿತ್ರದುರ್ಗಾ	-	01
6.	ಬೀದರ್	01	03
7.	ಬಳ್ಳಾರಿ	-	06
8.	ರಾಯಚೂರು	01	03
9.	ಗುಲ್ಬರ್ಗಾ	04	07
10.	ಯಾದಗಿರಿ	01	01
11.	ಕೊಪ್ಪಳ	03	07
12	ದಕ್ಷಿಣ ಕನ್ನಡ	03	12
13	ಉಡುಪಿ	01.	07
14	ಉತ್ತರ ಕನ್ನಡ	01	04
15	ಬಿಜಾಪುರ	00	04
16	ಕೊಡಗು	02	02
17	ಮಂಡ್ಯ	04	10
18	ಬೆಳಗಾಂ	02	01
19	ಹಾಸನ	01	00

ಮತದಾನ ಮೊದಲ ಹಂತ ಡಿಸೆಂಬರ್ 26
ಎರಡನೇ ಹಂತ ಡಿಸೆಂಬರ್ 31

ಸೀರೆ ಪಂಚೆ ಹಂಚೋರ್ಯಾರು ?

ಕ್ಯಾತೆ
ಈ. ಬಸವರಾಜು

ಯಣ್ಣ, ಬೆಂಗ್ಳೂರಲ್ಲಿ ಅವನ್ಯಾರೋ ಪುಣ್ಯಾತ್ಮ ಜನಗಳಿಗೆ ಅಂಚಕೆ ಸ್ವೆಟರ್ ಇಟ್ಟಿದ್ನಂತೆ, ಈ ಪೋಲೀಸ್ನರು ಸುಮ್ಕಿರದ್ ಬುಟ್ಟು ಅದ್ಯಲ್ಲಾನು ಇಡ್ದು ಮುಟ್ಟುಗೋಲಾಕ್ಯಂಡವ್ರಂತೆ, ಇದ್ಯಂತ ಮೋಸ?

ಇದೇನು ನೀನಿಂಗಂತಿ, ಓಟ್ ಕೊಡೋರ್‌ಗೆ ದುಡ್ಡು, ಯಂಡ, ಬಟ್ಟೆ ಇಂತದ್ಯಲ್ಲಾನು ಅಂಚಬಾರ್ದು ಅಂತ ಕಾನೂನೇ ಏಳ್ತದೆ, ಅಂತದ್ರಲ್ಲಿ ಸ್ವೆಟ್ರು ಅಂಚದು ತಪ್ಪಲ್ವೆ? ಅಂಗಾರೆ ನೀನು ಸ್ವೆಟರ್ ಈಸ್ಕಂಡು ಓಟಾಕ್ತಿಯ?

ಅಂಗಲ್ಲ ಕಣಣ್ಣ, ಸಳಿ ಜಾಸ್ತಿ ಏನಿಲ್ವಲ?

ನೀನು ಮಾತಾಡ್ತ ಇರದ ನೋಡಿದ್ರೆ ಆ ನಾಟ್ಕ ಆಡ್ತನಲ ವೀರಣ್ಣಯ್ಯ, ಅಂಗ್ ಮಾತಾಡ್ತಿ, ಅವ್ನೂ ಇಂಗೆಯ. ಕೊಡರತ್ರ ಈಸ್ಗಳಿ, ಓಟಾಕ್ವಾಗ ನಿಮಿಗೆ ಬೇಕಾದವ್ರಿಗೆ ಆಕಿ ಅಂತ ಟೀವೀಲಿ ಏಳ್ದ.

ಅಂತ ದ್ವಡ್ಡರೇ ಏಳಿದ್ ಮ್ಯಾಲೆ ತಗಬೌದಲ?

ಆ ತರ ಏಳ ಜನಗಳ್ನ ದ್ವಡ್ಡರು ಅಂತ ಯಂಗ್ ಏಳಕಾದತು? ಅಲ್ಲೆ ಇನ್ನಬ್ರು ದ್ವರೇಸ್ವಾಮಿ ಅನ್ನೋ ಸ್ವಾಸಂತ್ರ ಹೋರಾಟ್ಗಾರ್ರು ಇದ್ರು, ಅವ್ರು ಈ ವೀರಣ್ಣಯ್ನಂಗೆ, ಏನಂತ ಮಾತಾಡ್ತಾ ಇದ್ದೀಯಯ್ಯ ನೀನು? ಓಟಾಕಕೆ ಏನಾರ ಈಸ್ಗಂಡ್ರೆ ಅದೂ ಲಂಚ್ವೇ ಅಲ್ವೇನಯ್ಯ? ಮದ್ಲು ಆ ಮಾತ ವಾಪಸ್ ತಗೊ ಅಂತ ಅಂದ್ರು, ಅವ್ನು ಪೆಚ್ಚಾದನಂಗೆ ಸುಮ್ಕಾದ.

ಓಗ್ಲಿ ಆ ಸ್ವೆಟ್ರುಗಳ ಯಾರಿಟ್ಟಿದ್ರಂತೆ?

ಗೊತ್ತಿಲ್ವಪ್ಪ, ಆದ್ರೆ ಆ ಸ್ವೆಟ್ರು ಇದ್ದ ಜಾಗದಲ್ಲಿ ಕಿಷ್ಣಯ್ಯಸೆಟ್ಟಿ ಅನ್ನನ್ ಯಸ್ರಲ್ಲಿ ಪೇಪ್ರಿದ್ವಂತೆ!

ಯಾರು ಲಾಡ ಅಂಚಕೆ ಬಂದಿದ್ನಲ್ಲ ಅವ್ನೆ?

ಊ ಕಣಣ್ಣ, ಓಟಾಕಿದವರಿಗ್ಯಲ್ಲ ಲಾಡ ಅಂಚಕೆ ಅಂತ ಲಾರಿಗಟ್ಲೆ ಲಾಡ ಮಾಡಿಕಂಡು ಕೂತಿದ್ನಂತೆ. ಚುನಾವಣಾ ಆಯೋಗದವ್ರು ಅಂಚ್ ಕೂಡ್ದು ಅಂದ್ರಂತೆ. ಇವ್ನ ಸ್ವಾಮಿ ಯಲ್ಲ ಕೆಟ್ಟೋಗ್ತವೆ, ಏನಾರ ಮಾಡಿ ಅಂತವ ಗೋಗರುದ್ನಂತೆ. ಆಗ ಅವ್ರು ಅಂಚುಂಗಿದ್ರೆ ಬೆಂಗ್ಳೂರಲ್ಲಿ ಅಂಚ್ಕೊ ಅಂದ್ರಂತೆ, ಅದ್ಕೆ ಅವ್ನು ಈಗ ಸ್ವೆಟರ್ ಅಂಚಕೆ ಐಡಿಯಾ ಮಾಡಿರ್‌ಬೌದೇನೊ.

ಅವ್ನು ಬೀಜೆಪಿ ಕಡೆಯೋನಲ್ವೆ?

ಊಕಣ್ಣ. ಮಂತ್ರೀನೂ ಆಗಿದ್ದ. ಆದು ಓದ್ ಮ್ಯಾಲೆ ತಲೆ ಬೋಳಿಸ್ಗಂಡು ಓಡಾಡ್ತಿದ್ದ.

ಮತ್ತೆ ಯಡ್ಯೂರಪ್ಪ, ಜಂತಾದಳ, ಕಾಂಗ್ರೇಸ್ ನವ್ರು ದುಡ್ಡು ಅದೂ ಇದೂ ಅಂಚ್ತಾ ಅವ್ರೆ, ನಾನು ಅಂತದೇನೂ ಅಂಚ್ತಾ ಇಲ್ಲ, ನಾನು ನ್ಯಾಯಸ್ಥ, ಓಟಾಕಿ ಅಂತ ಅಳ್ತಾ ಇದ್ನಂತೆ!!!

ಯಣ್ಣ ನೀನು ದಡ್ಡ ಅನ್ನದು ಇದ್ಕೆಯ! ನೀನು ಅವ್ನ ಮಾತೇನಾದ್ರೂ ನಂಬಿಯ. ಆ ಕಡೂರ್ ಯಲೆಕ್ಷನ್ನಲ್ಲಿ ಇವ್ರು ಅಂಚದ ನೋಡಿ ಯಲ್ಲ ಯದಿರ್ಕಂಡ್ರಂತೆ. ಬಳ್ಳಾರೀಲಿ ಸಿಕ್ಕಾಬಟ್ಟೆ ಅಂಚಿದ್ರಂತೆ. ಅದೋಗ್ಲಿ, ನೀನು ಅವ್ರ ಪಕ್ಷದಲ್ಲಿ ನಿಂತ್ಕತಿನಿ ಅಂಡ್ ನೋಡು ಅದೆಷ್ಟ್ ಕೊಡ್ತರೆ ಅಂತವ.

ಮತ್ತೆ ನಾನು ಸಾಬಸ್ಥ ಅನ್ನಂಗೆ ಮಾತಾಡ್ತನಲ?

ಕಳ್ಳಂಗೆ ಕಡಿನಾಲ್ಗೆ ಅಂತರಲ ಅಂಗಾಗ್ಯವ್ನೆ ಅವ್ನು

ಈ ತರ ಅಂಚದು ಬಂದು ವಳ್ಳೇವ್ರು, ಬಡ-ಬಗ್ರು ಯಲೆಕ್ಷನ್ನಿಗೆ ನಿಲ್ಲಂಗೇ ಇಲ್ದಂಗಾಗ್ಯದಲಣ್ಣ, ಏನ್ ಮಾಡದು? ಹಿಂದಿನ್ ಕಾಲ್ದಲೂ ಇಂಗೇ ಇತ್ತೆ?

ಅಯ್ಯೋ ಜನ ಕೆಟ್ಟೋಗಿರದು ಈಚಿಗೆ. ಹಿಂದೆ ಕಾಂಗ್ರೇಸಿನೋರು ಸೀರೆ, ಪಂಚೆ, ಯಂಡ ಅಂಚಕೆ ಸುರು ಮಾಡಿದ್ರು. ಆಗ ಜನತಾ ಪಕ್ಷ ಅಂತ ಇತ್ತು. ಅವ್ರು ರಾತ್ರಿಯಲ್ಲಾ ಕಾದು ಅಂಚಕೆ ಬಂದೋರ್ನ ಕಲ್ ತಗಂಡು ವಡ್ದು ಒಡ್ಸರು. ಏನಾರ ಅಂಚ್ಬೇಕಾದ್ರೆ ಬಾಳ ಕಷ್ಟ ಇತ್ತು. ಆಮ್ಯಾಲ್ ಆಮ್ಯಾಲೆ ಅವ್ರೂ ಅಂಚಕೆ ಸುರು ಮಾಡಿದ್ರು. ಆಮ್ಯಾಲೆ ಬೀಜೇಪಿಯೋರು ಬಂದ್ರು. ಅವ್ರು ಯಲ್ಲಾರ್ನೂ ಮೀರ್ಸಿ ಸ್ವಲ್ಪ ಜಾಸ್ತೀನೇ ಅಂಚಕ್ಕೆ ಸುರು ಮಾಡ್ಯವ್ರೆ.

ಅಂಗಾರೆ ಏನೂ ಅಂಚದೇ ಯಲೆಕ್ಷನ್ನಿಗೆ ನಿಂತ ಗೆಲ್ಲೋರು ಯಾರೂ ಇಲ್ವೆ?

ಯಾಕಿಲ್ಲ, ಆ ಮಂಡೇವುದ್ ಕಡೆ ಸಿ.ಪಿ.ಎಂ ಪಕ್ಷದವ್ರು ಒಂದ್ ಪೈಸಾನು ಅಂಚಿಲ್ವಂತೆ, ಜನಗಳತ್ರನೇ ಎಷ್ಟ್ ಬೇಕೋ ಅಷ್ಟ್ ದುಡ್ಡೀಸ್ಗಂಡ ಪಂಚಾತಿ ಯಲೆಕ್ಷನ್ನಲಿ ಗೆದ್ದವ್ರಂತೆ. ನಮ್ ಕಡೆ ಒಂದ್ ಓಟಿಗೆ ಕರ್ಚ ಮಾಡಿದ್ರಲ, ಅಷ್ಟ ವಬ್ಬ ಪಂಚಾತಿ ಮೆಂಬ್ರು ಕರ್ಚ್ ಮಾಡಿ ಗೆದ್ದವ್ನಂತೆ. ಅಂಗೆ ಯಾರೂ ಕೊಡ್ದೇ ಇದ್ರೆ ಜನ ಯಾರ್ ವಳ್ಳೇರು ಅನ್ನದ ನೋಡಿ ಓಟಾಕ್‌ಬೌದು.


ಅಂಗೂ ನಡೀತದೆ ಅಂದ್ರೆ ನಂಬಕೇ ಆಗದಿಲ್ಲ ಬುಡು. ಅಂಗಿದ್ರೆ ವಳ್ಳೇದೆಯ.

ನಾವೂ ಅಂಗೇ ಇರ್ಬೇಕು. ಯಾರ್ಯಾರ ಏನಾರ ಅಂಚಕ್ ಬಂದಾಗ, ನೀನು ಜನಗಳಿಗೆ ಏನ್ ಮಾಡ್ತಿ ಅನ್ನದ ಏಳಿ ಓಟ್ಕೇಳಯ್ಯ, ಇದ್ಯಲ್ಲಾನು ಅಂಚಕೆ ಯಾಕ್ ಬಂದಿದ್ದಿ ಅಂತ ಮಕ್ಕೆ ಉಗ್ದು ಓಡುಸ್ಬೇಕು. ಆಗ ಯುಲ್ಲ ಸರ್ಯಾಯ್ತದೆ ನೋಡು.

○

ದಿದ್ದಳು. ಊರಿನ ಸರ್ವೆ

ಹತ್ತಿಗೆ ಹತ್ತು ಕುತ್ತು ಎಂಬ ಮಾತು ಅಕ್ಷರಶಃ ಅನ್ವಯವಾಗುತ್ತಿದೆ. ಬಿ.ಟಿ. ಹತ್ತಿಯ ಬೀಜ ಬಿತ್ತಿದ ಧಾರವಾಡ ಜಿಲ್ಲೆಯ ರೈತರು ಕೈ ಬಾಯಿ ಸುಟ್ಟುಕೊಂಡು ಹಾನಿ ಅನುಭವಿಸುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಇಲಾಖೆಯ ಹೊಣೆಯೇನು?



ಬಿ.ಟಿ. ಹತ್ತಿ

ಬತ್ತಿಹೋದ ರೈತರ ಜೀವಸೆಲೆ

● ಬಿ.ಎಸ್.ಸೊಪ್ಪಿನ

ತಲೆಮೊರಬ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೂಲೆಯಲ್ಲಿರುವ ಒಂದು ಗ್ರಾಮ. ಇಲ್ಲಿ ಕೃಷಿಯೇ ಜನರ ಜೀವನಾಡಿ. ಕಳೆದ ವಾರ ಈ ಗ್ರಾಮದ ರೈತರು ಧಾರವಾಡದ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸುವುದರ ಮೂಲಕ ತಮ್ಮಲ್ಲಿ ಮಡುವು ಗಟ್ಟಿದ ಅಸಹನೆಯನ್ನು ವ್ಯಕ್ತಪಡಿಸಿದರು. ರೈತರ ಆಕ್ರೋಶಕ್ಕೆ ಕಾರಣ ಬಿ.ಟಿ. ಹತ್ತಿ (ರಾಶಿ ಬಿ.ಟಿ. ಕಂಪನಿ ತಯಾರಿಕೆ) ಬೆಳೆ ಕಾಯಿ ಬಿಡದೆ ಎದೆ ಉದ್ದಕ್ಕು ಬೆಳೆದು ಬರಡಾಗಿದೆ. ಗಿಡಕ್ಕೆ ಕೇವಲ 4-5 ಕಾಯಿ ಹಿಡಿದು ಇಳುವರಿ ತೀರಾ ಕುಂಠಿತವಾಗಿದೆ. ಕಳೆದ ವರ್ಷ ಉತ್ತಮ ಫಸಲು ಬಂದಿದ್ದರಿಂದ ರೈತರು ಅದೇ ಕಂಪನಿಯ ಬೀಜಗಳನ್ನು ಈ ವರ್ಷವು ಬಳಕೆ ಮಾಡಿದ್ದರು. ರೈತರು ಬೆಳೆ ನಷ್ಟ ಪರಿಹಾರಕ್ಕಾಗಿ ಆಗ್ರಹಿಸಿದರು. ಜಂಟಿ ನಿರ್ದೇಶಕರು, ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಹಿಂದಕ್ಕೆ ಪಡೆಯಲಾಗಿದೆ. ಕೃಷಿ ಇಲಾಖೆಯ ಅಧಿಕಾರಿ ಹಾಗೂ ಕೃಷಿ ವಿಜ್ಞಾನಿಗಳು ಸೇರಿದ ಒಂದು ತಂಡ ಕ್ಷೇತ್ರಕ್ಕೆ ಭೇಟಿ ಕೊಟ್ಟಿದೆ. ಅದರ ಪರಿಶೀಲನಾ ವರದಿ ಇನ್ನೂ ಬರಬೇಕಿದೆ ಅಷ್ಟೇ. ಇದು ಒಂದು ಸಣ್ಣ ಗ್ರಾಮದ ರೈತರ ಪ್ರಕರಣವಾದರೂ ಕುಂಟು ನೆಪ ಹೇಳಿ ಸಮಸ್ಯೆಯನ್ನು ನಿರ್ಲಕ್ಷಿಸುವಂತಿಲ್ಲ. ಆಗಾಗ್ಗೆ ಅಲ್ಲಲ್ಲಿ ಇಂಥ ಘಟನೆಗಳು ಕೃಷಿ ರಂಗದಲ್ಲಿ ಸಂಭವಿಸುತ್ತಲೇ ಇರುತ್ತವೆ. ನಾಲ್ಕಾರು ವರ್ಷಗಳ ಹಿಂದೆ ಹಾವೇರಿ ಜಿಲ್ಲೆಯಲ್ಲಿ 'ಚಮತ್ಕಾರ' ಎಂಬ ಬೀಜ (ಬಿ.ಟಿ. ಅಲ್ಲ) ಬಿತ್ತಿದ ರೈತರು ಹತ್ತಿ ಗಿಡಗಳು ಬರಡಾಗಿ ಬೆಳೆದಾಗ ಕಂಗಾಲ ಆಗಿದ್ದು, ಪ್ರತಿಭಟನೆ ತೀವ್ರವಾದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡಿದ್ದು ಅಂತಿಮವಾಗಿ ಬೀಜ ಕಂಪನಿ ರೈತರಿಗೆ ಪರಿಹಾರ ನೀಡಿದ್ದು ಈಗ ಇತಿಹಾಸ. ಇತಿಹಾಸ ಆಗಾಗ ಇಲ್ಲೆಲ್ಲಾ ಪುನರಾವರ್ತನೆ ಆಗುತ್ತಲೇ ಇರುತ್ತದೆ.

ಹತ್ತು ಕುತ್ತುಗಳು

'ಹತ್ತಿಗೆ ಹತ್ತು ಕುತ್ತು' ಎಂಬ ಮಾತು ಇಲ್ಲಿ ಜನಜನಿತವಾಗಿದೆ. ಅತೀ ಸೂಕ್ಷ್ಮ ಬೆಳೆಯಾದ ಹತ್ತಿಗೆ ದೇಶಿ ತಳಿಗಳಲ್ಲಿ ಇರುವ ನಿರೋಧಕ ಶಕ್ತಿ ಪರಿವರ್ತಿತ ತಳಿಗೆ ಅಥವಾ ಸಂಕರಣ ತಳಿಗೆ ಇರಲಾರದು ಅಂದಾಗ ಬೆಳೆ ಸಂರಕ್ಷಣೆಗೆ ಕೀಟನಾಶಕಗಳ ಸಿಂಪಡಣೆ ಅಗತ್ಯವಾಗಿರುತ್ತದೆ. ಆದರೆ ತಲೆಮೊರಬ ಗ್ರಾಮದ ಪ್ರಕರಣದಲ್ಲಿ ಬೀಜ ವಿಫಲವಾಗಿದ್ದು ಅದೊಂದು ಗಂಭೀರ ಪ್ರಕರಣವೇ ಸರಿ. ಆದರೆ ದೋಷಪೂರಿತ ಬೀಜಗಳ ಪೂರೈಕೆಗೆ ಯಾರ ಹೊಣೆ ? ಬೀಜೋತ್ಪಾದನಾ ಕಂಪನಿ ದೋಷಪೂರಿತ ಬೀಜದ ಹೊಣೆ ಹೊರಬೇಕಾಗುತ್ತದೆ. ಆಗ ಪರಿಹಾರ ಕೊಡುವದು ಆ ಕಂಪನಿಯ ಮುಖ್ಯ ಜವಾಬ್ದಾರಿಯಾಗುತ್ತದೆ. ದೋಷದಿಂದ ಬೆಳೆ ನಷ್ಟವಾದ ಸಂದರ್ಭದಲ್ಲಿ ಕಂಪನಿಗಳು ಕೇವಲ ಬೀಜದ ಖರ್ಚನ್ನು ಕೊಟ್ಟು ಕೈ ತೊಳೆದುಕೊಳ್ಳುತ್ತಿವೆ. ಅಳಗವಾಡಿ ಗ್ರಾಮದ ರೈತರು ನೂರಾರು ಎಕರೆಗಳಲ್ಲಿ ಬೆಳೆದ ಈರುಳ್ಳಿ ಹಾಗೂ ಗೋವಿನ ಜೋಳ ಬೀಜದ ದೋಷದಿಂದ ಫಲ ನೀಡದಿದ್ದಾಗ ಬೀಜದ ಖರ್ಚನ್ನು ಮಾತ್ರ ಬೀಜದ ಕಂಪನಿ ನೀಡಿದ್ದನ್ನು ಇಲ್ಲಿ ಉದಾಹರಿಸಬಹುದು. ಆದರೆ ಬೀಜ ದೋಷದಿಂದ ಬೆಳೆ ನಷ್ಟವುಂಟಾದಾಗ ರೈತರು ಅನುಭವಿಸುವ ಹಾನಿ ಎಷ್ಟು ಎಂಬುದನ್ನು ಲೆಕ್ಕ ಹಾಕಬೇಕು. ಮತ್ತು ಆ ಮೊತ್ತವನ್ನು ಪರಿಹಾರ ರೂಪದಲ್ಲಿ ಕಂಪನಿ ನೀಡಬೇಕು.

ದೋಷಗಳು

ಇಂದು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಬಿ.ಟಿ. ಹತ್ತಿ ತಳಿಗಳು ಇನ್ನೂ ಉತ್ಪಾದನೆ ಆಗಿಲ್ಲವಾದ್ದರಿಂದ ಸಧ್ಯ ರೈತರು ಖಾಸಗಿ ಬೀಜ ಸಂಸ್ಥೆಗಳ ಬಿ.ಟಿ. ಹತ್ತಿ ಬೆಳೆಗಳ ಬೀಜಗಳನ್ನೆ ಅವಲಂಭಿಸಬೇಕಾಗಿದೆ. (ಮುಂದಿನ ದಿನಗಳಲ್ಲೂ ಉದಾರ ಆರ್ಥಿಕ ನೀತಿಯ ಪರಿಣಾಮವಾಗಿ ಸರ್ಕಾರಿ ಸ್ವಾಮ್ಯದ ಬೀಜ ಉತ್ಪಾದನಾ ಘಟಕಗಳು ಅಸ್ತಿತ್ವಕ್ಕೆ ಬರುತ್ತವೆ ಎಂಬ ಭರವಸೆಯೂ ಇಲ್ಲ.) ದೇಶದ ವಿವಿಧ ಭಾಗಗಳಲ್ಲಿ 280 ಕ್ಕೂ ಅಧಿಕ ಸಂಖ್ಯೆಯ ಬಿ.ಟಿ. ಹತ್ತಿ ತಳಿಗಳು ಚಾಲ್ತಿಯಲ್ಲಿವೆ. ಅಂದಾಗ ಇದೇ ತಳಿ ಉತ್ತಮ ಎಂದು ನಿಖರವಾಗಿ ಹೇಳಲು ಕೃಷಿ ತಜ್ಞರು ತಮ್ಮ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.



ಖಾಸಗಿ ಬೀಜ ಕಂಪನಿಗಳು ಲಾಭವನ್ನೆ ಗುರಿಯನ್ನಾಗಿಸಿ ಕೊಂಡು ಬೀಜ ಉತ್ಪಾದನೆ ಮಾಡುತ್ತವೆ. ಸಂಕರಣದ ಪ್ರಕ್ರಿಯೆಯಲ್ಲಿ ಉಂಟಾದ ದೋಷದಿಂದಲೂ ಪ್ಯಾಕಿಂಗ್‌ನಲ್ಲಿ ಆದ ದೋಷದಿಂದಲೂ ಬೀಜಗಳು ಕಳಪೆಯಾಗಲು ಸಾಧ್ಯತೆಗಳು ಇರುತ್ತವೆ. ತಲೆಮೊರಬ ಗ್ರಾಮದ ವಿಷಯದಲ್ಲಿ ಇವುಗಳಲ್ಲಿ ಮೇಲಿನ ಯಾವುದಾದರೂ ದೋಷ ಇರುವ ಸಾಧ್ಯತೆ ಇದೆ.

ವಾಣಿಜ್ಯ ಬೆಳೆಯತ್ತ ಒಲವು

ಇಂದು ವಾಣಿಜ್ಯ ಬೆಳೆಗಳು ನಮ್ಮ ಕೃಷಿಯಲ್ಲಿ ಸಿಂಹ ಪಾಲು ಪಡೆದಿವೆ. 2-3 ದಶಕಗಳ ಹಿಂದೆ ಆಹಾರ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳ ಕ್ಷೇತ್ರಗಳಲ್ಲಿ ಸಮಪಾಲು ಪಡೆದಿದ್ದವು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ ಕಾರಣ ಬದುಕಿನ ಸಂಕೀರ್ಣತೆ, ಆರ್ಥಿಕ ಸಂಕಷ್ಟಗಳು, ಸಾಲದ ಹೊರೆ ಇವುಗಳಿಂದ ಮುಕ್ತಿ ಪಡೆಯಲು ರೈತರು ಹೆಚ್ಚು ಹೆಚ್ಚು ವಾಣಿಜ್ಯ ಬೆಳೆ ಬೆಳಯುವುದಕ್ಕೆ ತಮ್ಮ ಒಲವು ತೋರಿಸುತ್ತಿದ್ದಾರೆ. ಹೀಗಾಗಿ ರೈತರು ವಾಣಿಜ್ಯ ಬೆಳೆಗಳಾದ ಹತ್ತಿ, ಸೊಯಾಬಿನ್, ಈರುಳ್ಳಿ, ಮೆಣಸಿನಕಾಯಿ, ಮುಸಕಿನ ಜೋಳ, ಕಡಲೆ ಮುಂತಾದ ಬೆಳೆಗಳಿಗೆ ಹೆಚ್ಚಿನ ಕ್ಷೇತ್ರವನ್ನು ಮೀಸಲಾಗಿಡುತ್ತಾರೆ. ಬೆಳೆಗಳಿಗೆ ಬೇಕಾದ ಬೀಜಗಳನ್ನು ಪೇಟೆ ಯಿಂದಲೇ ಖರೀದಿಸ ಬೇಕಾಗುತ್ತದೆ. ಆದ್ದರಿಂದ ಬೀಜೋತ್ಪಾದನೆ ಒಂದು ಬೃಹತ್ ಕೈಗಾರಿಕೆಯಾಗಿ ರೂಪುಗೊಂಡಿದೆ. ಭಾರತದಲ್ಲಿ ಸ್ವದೇಶಿ ಕಂಪನಿ ಗಳಲ್ಲದೇ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಬೀಜ ಉತ್ಪಾದನೆಯಲ್ಲಿ ತೊಡಗಿವೆ. ಒಂದು ಕಾಲಕ್ಕೆ ಭಾರತದ ಕೃಷಿಯನ್ನು 'ಮಳೆಯೊಡನೆ ಆಡುವ ಜೂಜಾಟ' ವೆಂದು ಕರೆಯಲಾಗುತ್ತಿತ್ತು. ಈಗ ಅದನ್ನು ಮಾರ್ಪಡಿಸಿ ಬೀಜ ಕಂಪನಿಗಳೊಡಣೆ ಆಡುವ ಜೂಟಾಟ ಎನ್ನುವಂತಾಗಿದೆ. ಈ ಕಂಪನಿಗಳು ಕೆಲವು ಸಹ ಬೀಜದ ಕೃತಕ ಅಭಾವ ಸೃಷ್ಟಿಸಿ ಲಾಭ ಮಾಡಿಕೊಂಡರೆ ಮತ್ತೆ ಕೆಲವು ಸಹ ಕಳಪೆ ಬೀಜ ಮಾರಿ ಲಾಭ ಮಾಡಿಕೊಳ್ಳುತ್ತವೆ. ಈ ಬೀಜದ ವಿಷಯದಲ್ಲಿ ದೋಷ ಉತ್ಪಾದಕರದೋ ಅಥವಾ ಮಾರಾಟ ಗಾರರದೋ ಎಂಬುದನ್ನು ರೈತರು ಅರಿಯದವರಾಗಿ ದ್ದಾರೆ. ಕ್ರಮೇಣ ಭಾರತದ ಕೃಷಿ ಬಹುರಾಷ್ಟ್ರೀಯ ಬೀಜ ಕಂಪನಿಗಳ ಆಕ್ಟೋಪಸ್ ಹಿಡಿತಕ್ಕೆ ಸಿಲುಕುವ ಎಲ್ಲಾ ಲಕ್ಷಣಗಳು ಸ್ಪಷ್ಟವಾಗ ಹತ್ತಿವೆ. ಬಹುರಾಷ್ಟ್ರೀಯ ಕಂಪನಿಗಳು ವಿದೇಶಿ ಮಾರುಕಟ್ಟೆಯ ಬೇಕು ಬೇಡಗಳನ್ನಾಧರಿಸಿ ಭಾರತದ ಕೃಷಿಯನ್ನು ಮಾರ್ಪಡಿಸುವ ಹುನ್ನಾರ ನಡೆಸಿವೆ. ಅದಕ್ಕಾಗಿ ನಮ್ಮ ಪ್ರಭುತ್ವ ಅತ್ತಕಡೆ ವಾಲುತ್ತಿಧೆ. 1966 ಬೀಜ ಕಾಯ್ದೆ ಈಗ ತಿದ್ದುಪಡಿಗೊಂಡು 2010 ರ ಬೀಜ ಕಾಯ್ದೆಯಾಗಿ ಹೊರಹೊಮ್ಮಿದೆ. ಬಹು ರಾಷ್ಟ್ರೀಯ ಬೀಜ ಉತ್ಪಾದನಾ ಕಂಪನಿಗಳ ಹಿತ ಕಾಪಾಡುವ ಎಲ್ಲಾ ಅಂಶಗಳನ್ನು ಅದು ಒಳಗೊಂಡಿದೆ.

ಈ ಹಿನ್ನೆಲೆಯಲ್ಲಿ ರೈತರಿಗೆ ಉಳಿದಿರುವದು ಒಂದೇ ದಾರಿ ಅದು ಸಂಘಟನೆ, ಭಾರತದ ಕೃಷಿ ಮತ್ತು ಕೃಷಿಕರನ್ನು ರಕ್ಷಿಸುವ ಏಕೈಕ ಮಾರ್ಗವೆ ರೈತರ ಸಂಘಟನೆ ಮತ್ತು ಸಂಘಟನಾತ್ಮಕ ಹೋರಾಟ.

ಧಾರವಾಡ ಜಿಲ್ಲೆಯ ಕಲಘಟಗಿ, ನವಲಗುಂದ, ಕುಂದಗೋಳ ಹಾಗೂ ಹುಬ್ಬಳ್ಳಿ ತಾಲ್ಲೂಕಗಳ ರೈತರು ಬೇರೆ ಬೇರೆ ಸಂದರ್ಭಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಈ ವರ್ಷ ಕುಂಭದ್ರೋಣ ಮಳೆ ಸುರಿಯದೆ ಇದ್ದರೂ ನಿರಂತರವಾಗಿ ಮಳೆ ಬಿದ್ದಿದೆ. ಕೆಲವು ಸಲ ಅಕಾಲಿಕವೂ ಆಗಿದೆ. ಮಳೆಗೆ ಮೆಣಸಿನಕಾಯಿ ಬೆಳೆ, ಸೋಯಾಬಿನ, ಭತ್ತ, ಹತ್ತಿ ಮುಂತಾದ ಬೆಳೆಗಳು ನಾಶವಾಗಿವೆ. ಹೀಗಾಗಿ ರೈತರು ಪರಿಹಾರಕ್ಕಾಗಿ ಪ್ರತಿಭಟನೆ ನಡೆಸಿದ್ದಾರೆ.

ನಮ್ಮ ಮು. ಮಂ.ಗಳು

ಹೇಗಾದರೂ ನೋಡಿ ಮಸಲತ್ತು ಮಾಡಿ
ಅಧಿಕಾರ ಕೈಜಾರಬಿಡಲಿಲ್ಲ ನೋಡಿ
ಮರ್ಯಾದೆ ಬಿಟ್ಟಿರುವ ಶಾಸಕರ ಕೊಂಡೆ
ಆ ಪ್ರೆಶನ್ ಕಮಲಕ್ಕೂ ಜೈ ಜೈ ಅಂದೆ

\- ವಿಡಂಬಾರಿ

ಪಾಪಾ ಉಮಾನಾಥ್ ಇನ್ನಿಲ್ಲ



ರಾಷ್ಟ್ರದ ಕಮ್ಯೂನಿಸ್ಟ್ ಪಕ್ಷದ ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತೊಂದು ಹಿರಿಯ ಕೊಂಡಿ ಕಳಚಿತು. ತಮಿಳ್ನಾಡಿನ ಜನವಾದಿ ಮತ್ತು ಇತರ ಪ್ರಜಾಪ್ರಭುತ್ವ ಚಳುವಳಿಯನ್ನು ಕಟ್ಟಿಬೆಳೆಸಿದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳಲ್ಲಿ ತನ್ನ ಎಳೆಯ ವಯಸ್ಸಿನಲ್ಲಿ ಭಾಗವಹಿಸಿದ ಹಿರಿಯ ಸಂಗಾತಿ ಪಾಪಾ ಇನ್ನಿಲ್ಲ. ಬಾಲ್ಯದ ಹೆಸರು ಧನಲಕ್ಷ್ಮಿ ಯಿಂದಾದರೂ ಪ್ರೀತಿಯ ಹೆಸರಾದ 'ಪಾಪಾ' ಆಗಿಯೇ ಚಿರಪರಿಚಿತರು.

1931 ರಲ್ಲಿ ಹುಟ್ಟಿದ ಪಾಪಾ 1943 ರಲ್ಲಿ ಪೊನ್ನಾಮಲ್ಲೈನಲ್ಲಿ ನಡೆದ ರೈಲ್ವೇ ಕಾರ್ಮಿಕರ ಹೋರಾಟದಲ್ಲಿ ತನ್ನ 12ನೆಯ ವಯಸ್ಸಿನಲ್ಲೇ ಪಾಲ್ಗೊಂಡವರು. ಬ್ರಿಟಿಷರ ವಿರುದ್ಧದ ಘೋಷಣೆಗಳನ್ನು ಕೂಗಿದರೆಂದು ಕಾರ್ಮಿಕರನ್ನು ಬಂಧಿಸುವಾಗ ಚಿಕ್ಕ ಹುಡಿಗಿಯೆಂಬ ಕಾರಣಕ್ಕೆ ಪೊಲೀಸರು ಬಂಧಿಸಲಿಲ್ಲ. ಆದರೆ ಪಾಪಾ ಪಟ್ಟು ಹಿಡಿದಿದ್ದರಿಂದ ಬಂಧಿಸಬೇಕಾಗಿ ಬಂತಾದರೂ ನ್ಯಾಯಾಲಯ ಅವರ ವಯಸ್ಸನ್ನು ಪರಿಗಣಿಸಿ-ಬಿಡುಗಡೆ ಮಾಡಿತ್ತು. ಎಳೆಯ ವಯಸ್ಸಿನಲ್ಲಿಯೇ ಪ್ರಾರಂಭವಾದ ಅವರ ಹೋರಾಟದ ಜೀವನ ಅವರ ಕೊನೆಯ ಉಸಿರಿನವರೆಗೂ ಮುಂದುವರೆದಿತ್ತು. 1948 ರಲ್ಲಿ ಸ್ವತಂತ್ರ ಭಾರತದ ಸರ್ಕಾರ ಎಡ ಚಳುವಳಿ ಮತ್ತು ಕಾರ್ಮಿಕ ಸಂಘಗಳ ಮೇಲೆ ಪ್ರಹಾರ ನಡೆಸಿತ್ತು. ಕಮ್ಯೂನಿಸ್ಟ್ ಪಕ್ಷಗಳನ್ನು ನಿಷೇಧಿಸಿ ನೇತಾರರನ್ನು ಬಂಧಿಸಲಾಯಿತು. ರೈಲ್ವೇ ಕಾರ್ಮಿಕರಿಗೆ ಸಂಘಟನೆಯ ಹಕ್ಕನ್ನು ನಿರಾಕರಿಸಲಾಯಿತು. ಪೊಲೀಸರು ಪಾಪಾರ ಮನೆಯನ್ನು ಶೋಧಿಸಲು ಬಂದರು. ಜಾಣೆ ಪಾಪಾ, ಒಳಗಿದ್ದ ಸಂಗಾತಿಗಳು ಪ್ರಮುಖ ಕಾಗದ ಪತ್ರಗಳನ್ನು ಮರೆಮಾಡುವವರೆಗೆ, ಪೊಲೀಸರನ್ನು ಬಾಗಿಲಲ್ಲೇ ತಡೆದು ನಿಲ್ಲಿಸಿದರು. ಅವರು ತಂದ ಶೋಧನಾ ಪತ್ರ ಖೊಟ್ಟಿ ಇರಬಹುದು, ಸುಳ್ಳು ಮೊಕದ್ದಮೆ ಹಾಕಿರಬಹುದು ಎಂಬಿತ್ಯಾದಿ ಪ್ರಶ್ನೆಗಳನ್ನು ಪೊಲೀಸರನ್ನು ತಡೆದು ನಿಲ್ಲಿಸಿದ ಸಮಯ ಪ್ರಜ್ಞೆ ಪಾಪಾರದು. ಪೊಲೀಸರು ಒಳಗೆ ಹೋಗಿ ಶೋಧಿಸಿದಾಗ ಏನೂ ಸಿಗಲಿಲ್ಲ.

ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತೆಯಾಗಿದ್ದ ಪಾಪಾ ಅಂದಿನ ಸಂಪ್ರದಾಯಸ್ಥ ಸಮಾಜದ ಕೆಂಗಣ್ಣಿಗೆ ಗುರಿಯಾಗಿದ್ದರು. ಯುವತಿಯೊಬ್ಬಳು ಗಂಡಸರೊಂದಿಗೆ ಬೀದಿಯಲ್ಲಿ ಅಡ್ಡಾಡುವುದೆಂದರೆ, ನಡತೆಗೆಟ್ಟವರೆಂದು ಪರಿಗಣಿಸಲಾಗುತ್ತಿತ್ತು. ಅಲ್ಲಿಯೂ ಈ ಟೀಕೆ ಭರ್ತ್ಸನೆಗಳು ಮಹಿಳೆಯರಿಂದಲೇ ಹೆಚ್ಚು. ಅವರ ವೈಯಕ್ತಿಕ ಬದುಕಿನ ಅನುಭವಗಳೇ ಪಾಪಾರವರನ್ನು ಮಹಿಳಾ ವಿಮೋಚನೆಯ ಚಳುವಳಿ ಕಟ್ಟಲು ತೀರ್ಮಾನಿಸುವಂತೆ ಪ್ರೇರೇಪಿಸಿದವು. 1950 ರಲ್ಲಿ ಪಾಪಾ ಉಮಾನಾಥ್ ಮತ್ತಿತರ ಸಂಗಾತಿಗಳಿದ್ದ ಕಟ್ಟಡದ ಮೇಲೆ ಪೊಲೀಸರು ರೈಡ್ ಮಾಡಲು ಬಂದಾಗ ಅವರ ಕೈಗೆ ಸುಳಿವು ಸಿಗದಿರಲಿ ಎಂದು ಕಾಗದಗಳನ್ನೇ ನುಂಗಿದವರು ಪಾಪಾ. ಅಲ್ಲಿದ್ದವರನ್ನೆಲ್ಲ ಬಂಧಿಸಲಾಯಿತು. ಉಳಿದವರ ವಿವರ ತಿಳಿಸಲಿಲ್ಲ ಎಂದು ಪೊಲೀಸರಿಂದ ಒದೆ ತಿಂದರೂ ಬಾಯಿ ಬಿಟ್ಟವರಲ್ಲ ಪಾಪಾ. ಒಂದು ಕಾನ್ಸಂ ಟ್ರೇಶ್ ಕ್ಯಾಂಪ್‌ನಂತಿದ್ದ ಸೈದಾ ಪೇಟೆಯ ಜೈಲಿನಲ್ಲಿ ಅವರನ್ನು ಇಡಲಾಯಿತು. ಮಲ ತುಂಬಿದ ಕೊಡವನ್ನು ಹೊತ್ತೊಯ್ಯುವಂತೆ ಮಾಡಿದ ಆದೇಶವನ್ನು ಧಿಕ್ಕರಿಸಿದರೆಂದು ಹೊಡೆದು ನೆಲದ ಮೇಲೆ ಎಳೆದಾಡಿದ್ದರಿಂದ ಆದ ಗಾಯದ ಕಲೆ ಕೊನೆಯವರೆಗೂ ಇತ್ತು. ಜೈಲಿನಲ್ಲಿದ್ದಾಗಲೇ ಒಡನಾಡಿಯಾಗಿದ್ದ ತಾಯಿ ಜೈಲಿನಲ್ಲೇ ಸಾವನ್ನಪ್ಪಿದರು. ತಾಯಿಯ ಅಂತಿಮ ದರ್ಶನಕ್ಕೆ ಜೈಲು ಅಧಿಕಾರಿಗಳು ಹಾಕಿದ ಷರತ್ತು ಕಮ್ಯೂನಿಸ್ಟ್ ಪಕ್ಷ ತ್ಯಜಿಸಬೇಕೆಂದು. ಪಾಪಾ ಅದಕ್ಕೆ ಒಪ್ಪಲಿಲ್ಲ. ಅವರಿಗೆ ಸೈದ್ಧಾಂತಿಕ ಬದ್ಧತೆ. ಮುಖ್ಯವಾಗಿತ್ತು.

1955 ರಲ್ಲಿ ಕೃಷಿ ಕೂಲಿಕಾರ ಸಂಘಟನೆ ಪ್ರಾರಂಭವಾದಾಗ ತಂಜಾವೂರು ಜಿಲ್ಲೆಯಾದ್ಯಂತ ಸಂಚರಿಸಿ ಸಂಘ ಕಟ್ಟಿದರು.

1975 ರ ತುರ್ತು ಪರಿಸ್ಥಿತಿಯಲ್ಲಿಯೂ ಪಾಪಾ ತಮಿಳ್ನಾಡಿನಾದ್ಯಂತ ಸಂಚರಿಸಿ ತುರ್ತು ಪರಿಸ್ಥಿತಿಯ ವಿರುದ್ಧ ಕೆಲಸ ಮಾಡಿದರು.

1973 ರಲ್ಲಿ ತಮಿಳ್ನಾಡಿನಲ್ಲಿ ಪ್ರಥಮವಾಗಿ ಎಐಡಿಡಬ್ಲ್ಯುಎ ರಚಿಸುವ ಕೆಲಸ ಪ್ರಾರಂಭಿಸಿ 1974 ರಲ್ಲಿ ತಿರುವಾಯೂರಿನಲ್ಲಿ ಪ್ರಥಮ ರಾಜ್ಯ ಸಮ್ಮೇಳನ ನಡೆಯಿತು. ಅದರಲ್ಲಿ ಆಯ್ಕೆಯಾದ ಪ್ರಥಮ ರಾಜ್ಯ ಕಾರ್ಯದರ್ಶಿ ಪಾಪಾ.

1981 ರಲ್ಲಿ ರಾಷ್ಟ್ರೀಯ ನೆಲೆಯಲ್ಲಿ ಸಂಘಟನೆ ಪ್ರಾರಂಭವಾದಾಗ ನಡೆದ ಪ್ರಥಮ ಸಮ್ಮೇಳನ ಅವರ ನಾಯಕತ್ವದಲ್ಲಿ ಮದ್ರಾಸಿನಲ್ಲಿ ನಡೆಯಿತು.

ಜನವಾದಿ ಪ್ರಾರಂಭವಾದಾಗ ಒಂದು ಪ್ರತ್ಯೇಕ ಮಹಿಳಾ ಸಂಘಟನೆಯ ಅಗತ್ಯವಿಲ್ಲವೆಂಬ ಅಭಿಪ್ರಾಯ ಹಲವರಿಗಿತ್ತು. ಮಹಿಳೆಯರು ಬೀದಿಗಿಳಿಯುವುದು, ಘೋಷಣೆ ಕೂಗುವುದು ಸರಿಯಲ್ಲ ಎಂಬ ಭಾವನೆ ಇತ್ತು. ಅದನ್ನೆಲ್ಲ ಬದಿಗೊತ್ತಿ ಬೆಳೆದ ಸಂಘಟನೆ ಇಂದು ಕೋಟ್ಯಾಂತರ ಮಹಿಳೆಯರ ಬದುಕಿಗೆ ಆಧಾರವಾಗಿದೆ.

20 ವರ್ಷಗಳ ಕಾಲ ತಮಿಳ್ನಾಡಿನ ಪ್ರಧಾನ ಕಾರ್ಯದರ್ಶಿಯಾಗಿದ್ದವರು ಪಾಪಾ 1996 ಮತ್ತು 98 ರಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ರಾಷ್ಟ್ರೀಯ ಉಪಾಧ್ಯಕ್ಷರಾಗಿ ಹಲವು ವರ್ಷ ಕೆಲಸ ಮಾಡಿದರು. 1988 ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಪೋಷಕರಾಗಿ ಆಯ್ಕೆಗೊಂಡರು.

1989 ರಲ್ಲಿ ತಮಿಳ್ನಾಡಿನ ವಿಧಾನ ಸಭೆಗೆ ತಿರುವೆರುಂಬೂರಿನಿಂದ ಆಯ್ಕೆಯಾದ ಪಾಪಾ ಹೆಣ್ಣು ಶಿಶು ಹತ್ಯೆ, ಹೆಣ್ಣುಮಕ್ಕಳಿಗೆ ಆಸ್ತಿಹಕ್ಕು, ಶಿಕ್ಷಣದ ಅವಕಾಶ ಹೆಣ್ಣು ಮಕ್ಕಳಿಗೆ ಶಿಕ್ಷಣಕ್ಕೆ ಆದ್ಯತೆ ನೀಡಿದ ಕುಟುಂಬಗಳಿಗೆ ಪ್ರೋತ್ಸಾಹಧನ ಕುಡಿಯುವ ನೀರುಗಳಂತಹ ವಿಷಯಗಳನ್ನು ಅಧಿವೇಶನಗಳಲ್ಲಿ ಚರ್ಚಿಸಿದ್ದರು. ತನ್ನ 79ನೇ ವಯಸ್ಸಿನಲ್ಲಿ ಕೆಲವು ಕಾಲದ ಅನಾರೋಗ್ಯದಿಂದ ಸಂಗಾತಿ ಪಾಪಾ 17.12.2010 ರಂದು ಸಂಜೆ ತ್ರಿಚೂರಿನಲ್ಲಿ ಕೊನೆ ಉಸಿರೆಳೆದಿದ್ದಾರೆ. ಅವರ ಜೀವನದ ಅನುಭವಗಳು, ಬದ್ಧತೆಗಳು ನಮಗೆ ಸದಾ ಸ್ಫೂರ್ತಿ. ಹೋಗಿ ಬನ್ನಿ ಪಾಪಾ. ನೀವು ಕಟ್ಟಿದ ಚಳುವಳಿಯನ್ನು ನಾವು ಮುನ್ನಡೆಸುತ್ತೇವೆ.

ಶ್ರದ್ಧಾಂಜಲಿ

'ಪಾಪಾ' ಇನ್ನಿಲ್ಲವಾದ ಸುದ್ದಿ ತಿಳಿಯುತ್ತಿದ್ದಂತೆಯೇ ಜನವಾದಿ ಮಹಿಳಾ ಸಂಘಟನೆ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಗಳು ಪ್ರತ್ಯೇಕ ಸಭೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದವು. ದೇಶದ ಜನತೆಯ ಪ್ರಜಾಸತ್ತಾತ್ಮಕ ಆಂದೋಲನ ಹಾಗೂ ಕ್ರಾಂತಿಕಾರಿ ಬೆಳವಣಿಗೆ ಅವರು ನೀಡಿದ ಕೊಡುಗೆ ಸ್ಮರಿಸಿ, ಎದ್ದು ನಿಂತು ಎರಡು ನಿಮಿಷಗಳ ಮೌನದ ಮೂಲಕ ಗೌರವ ಸೂಚಿಸಲಾಯಿತು.

ಅತ್ತ ಪುಲಿ, ಇತ್ತ ದರಿ ದ್ವಂದ್ವದಲ್ಲಿ ತೊಳಲಾಡುತ್ತಿರುವ ದ.ಕ. ಮತದಾರರು

ಬಿ.ಮಾಧವ

ಭ್ರಷ್ಟಾಚಾರ, ಸ್ವಜನ ಪಕ್ಷಪಾತದ ಗಂಭೀರ ಆರೋಪಗಳಲ್ಲಿ ತೊಳಲಾಡುತ್ತಿರುವ ಬಿಜೆಪಿ ಪಕ್ಷದ ಸರ್ಕಾರ ಒಂದು ಕಡೆ, ರಾಷ್ಟ್ರೀಯ ಮಟ್ಟದಲ್ಲಿ ಶತಮಾನದ ಹಗರಣಗಳಿಂದಾಗಿ ಮತದಾರರನ್ನು ಎದುರಿಸುವ ನೈತಿಕ ಸ್ಥೈರ್ಯವನ್ನು ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷ ಇನ್ನೊಂದು ಕಡೆ; ದ.ಕ.ಜಿಲ್ಲೆಯಲ್ಲಿ ಈ ಗಂಡಾಂತರಗಳಿಗೆ ಕಲಶವಿಟ್ಟಂತೆ ಚುನಾವಣೆಗಳು ನಡೆಯುತ್ತಿರುವ ಸನ್ನಿವೇಶದಲ್ಲಿ ರಾಜ್ಯದ ಎರಡು ಪ್ರಮುಖ ರಾಜಕೀಯ ಪಕ್ಷಗಳ ಪರಿಸ್ಥಿತಿ ಹೀಗಿದೆ. ಈ ಮಧ್ಯೆ ಮತದಾರರು ಒಂದು ಪರ್ಯಾಯಕ್ಕಾಗಿ ಹಾತೊರೆಯುತ್ತಿದ್ದಾರೆ.

ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಸಂಘಟನಾ ಪ್ರಭಾವ ಹೊಂದಿರುವ ಸಿಪಿಐ(ಎಂ), ತನ್ನ ಸೀಮಿತ ಸಂಪನ್ಮೂಲಗಳ ಮಿತಿಯೊಳಗೆ ಮೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರಗಳಲ್ಲೂ, ಹನ್ನೆರಡು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಜಾತ್ಯಾತೀತ ಜನತಾದಳವು ಸಿಪಿಐ(ಎಂ) ಜೊತೆಗೆ ಜಿಲ್ಲಾ ಮಟ್ಟದಲ್ಲಿ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಅಪೇಕ್ಷೆ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾ ನಾಯಕತ್ವದ ಮಟ್ಟದಲ್ಲಿ ಮಾತುಕತೆ ನಡೆದಿದ್ದು, ಒಂದು ಒಮ್ಮತ ಅಭಿಪ್ರಾಯಕ್ಕೆ ಬರಲಾಗಿತ್ತು. ಆದರೂ ಸ್ಥಳೀಯವಾಗಿ ಕೆಲವೆಡೆ ಆ ಪಕ್ಷದಲ್ಲೇ ಸಂಘಟನಾ ಸಮಸ್ಯೆಗಳು ತಲೆದೋರಿದ ಪರಿಣಾಮವಾಗಿ ಸಮರ್ಪಕವಾದ ಹೊಂದಾಣಿಕೆ ಮಂಗಳೂರು ತಾಲ್ಲೂಕಿನಲ್ಲಿ ಮಾತ್ರ ಸಾಧ್ಯವಾಗಿದೆ. ಸಿಪಿಐ ಪಕ್ಷದವರು ಜಿಲ್ಲೆಯಲ್ಲಿ 2 ತಾಲ್ಲೂಕು ಪಂಚಾಯಿತಿ ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದಾರೆ. **ಏನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿಯ ಮೇಲೆ ತೀವ್ರ ಅತೃಪ್ತಿ ಹೊಂದಿರುವ ದೊಡ್ಡ ವಿಭಾಗದ ಮತದಾರರು ಜಿಲ್ಲೆಯಲ್ಲಿ ತೃತೀಯ ಶಕ್ತಿಯೊಂದರ ಪರವಾಗಿ ಮತ ನೀಡುವರು ಎಂಬ ಭರವಸೆ ಎದ್ದು ಕಾಣುತ್ತಿದೆ.**

ಜಿಲ್ಲೆಯಲ್ಲಿ ಸಿಪಿಐ(ಎಂ)ಸ್ಪರ್ಧಿಸುವ ಕ್ಷೇತ್ರಗಳು ಕಾರ್ಮಿಕ ಚಳುವಳಿಯ ಸುದೀರ್ಘ ಹೋರಾಟಗಳ ಕೇಂದ್ರಗಳಾಗಿವೆ. ಸ್ವಾಭಾವಿಕವಾಗಿಯೇ ಸಿಪಿಐ(ಎಂ) ಅಭ್ಯರ್ಥಿಗಳು ಕೂಡಾ ಬಹುತೇಕ ಕಾರ್ಮಿಕ ನಾಯಕರು ಮತ್ತು ಕಾರ್ಯಕರ್ತರೇ ಆಗಿರುತ್ತಾರೆ. ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೋಟೆವಾರು ಜಿ.ಪಂ.ಕ್ಷೇತ್ರದಲ್ಲಿ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಹಾಗೂ ಉಳ್ಳಾಲ ವಲಯದ ಕಟ್ಟಡ ಕಾರ್ಮಿಕರ ಸಂಘಟನೆಯ ಮುಖಂಡರಾಗಿರುವ ಯು.ಜಯಂತ ನಾಯಕ್ ಅವರು ಸ್ಪರ್ಧಿಸುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಬರುವ ಕೋಟೆಕಾರು 1ನೇ ತಾಲ್ಲೂಕು ಪಂಚಾಯತ್ ಕ್ಷೇತ್ರದಲ್ಲಿ ಉಷಾ ಚಂದ್ರಶೇಖರ್, ಸೋಮೇಶ್ವರ 1ನೇ ತಾ.ಪಂ. ಕ್ಷೇತ್ರದಲ್ಲಿ ವಿಜಯಲಕ್ಷ್ಮಿ ಸೋಮೇಶ್ವರ 2ರಲ್ಲಿ ಪುಷ್ಪಾ ಸ್ಪರ್ಧಿಸುತ್ತಿದ್ದಾರೆ. ಈ ಜಿ.ಪಂ. ಕ್ಷೇತ್ರದೊಳಗೆ ಬರುವ ಇನ್ನುಳಿದ 2 ತಾ.ಪಂ. ಕ್ಷೇತ್ರಗಳಲ್ಲಿ ಜೆಡಿ(ಎಸ್) ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಸ್ಥಾನ ಹೊಂದಾಣಿಕೆಯ ಆಧಾರದಲ್ಲಿ ಕೊಣಾಜೆ ಜಿ.ಪಂ. ಕ್ಷೇತ್ರದಲ್ಲಿ ಜೆಡಿ(ಎಸ್) ಅಭ್ಯರ್ಥಿ ಸ್ಪರ್ಧಿಸುತ್ತಿದಾರೆ. ಈ ಜಿ.ಪಂ. ಕ್ಷೇತ್ರದ ವ್ಯಾಪ್ತಿಯಲ್ಲಿರುವ ಹರೇಕಳ ತಾ.ಪಂ. ಕ್ಷೇತ್ರದಲ್ಲಿ ಸಿಪಿಐ(ಎಂ) ಪಕ್ಷದಿಂದ ಹಮಾಲಿ ಕಾರ್ಮಿಕರ ಸಂಘಟನೆಯ ಯುವ ನಾಯಕರಾದ ರಫೀಕ್ ಹರೇಕಳ ಹಾಗೂ ಮುನ್ನೂರು ತಾ.ಪಂ. ಕ್ಷೇತ್ರದಿಂದ ಆ ಪ್ರದೇಶದಲ್ಲಿ ಹಾಗೂ ರೇಗಾ ಜಾರಿಯಲ್ಲಿ ಪ್ರಮುಖ ಪಾತ್ರವಹಿಸಿ ಅಪಾರ ಜನಮನ್ನಣೆಗಳಿಸಿರುವ ಹಾಗೂ ಅಲ್ಲಿನ ಗ್ರಾ.ಪಂ.ಸದಸ್ಯರೂ ಆಗಿರುವ ಗಣೇಶ್ ಕುತ್ತಾರ್ ಇವರು ಸ್ಪರ್ಧಿಸುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕ ಹಾಗೂ ರೈತ ಚಳುವಳಿ ಚುರುಕಾಗಿ ಬೆಳೆದು ಬರುತ್ತಿರುವ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ ಜಿ.ಪಂ. ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಪಕ್ಷದ ಯುವ

ಕನ್ನಡ ವಾರಪತ್ರಿಕೆ

ಈರುಳ್ಳಿ ಒಳಗೊಂಡು ತರಕಾರಿಗಳ ಬೆಲೆಗಳು ಗಗನಕ್ಕೇರುತ್ತಲೇ ಹೋದ ಹಿನ್ನೆಲೆ ಏನು? ಇದರ ಹಿಂದೆ ಯಾರಿದ್ದಾರೆ?

ಬೆಲೆಗಳು ಗಗನಕ್ಕೆ ಜನಗಳು ?

- ಬಾಲಕೃಷ್ಣ ಶೆಟ್ಟಿ

ಕಳೆದೊಂದು ವಾರ ಪತ್ರಿಕೆಗಳ ತುಂಬ 'ಈರುಳ್ಳಿ'ಯದ್ದೇ ಸುದ್ದಿ. ಒಮ್ಮೆ ಬೆಲೆ ಜಾಸ್ತಿಯಾಯಿತೆಂದು ಸುದ್ದಿಯಾದರೆ, ಇನ್ನೊಮ್ಮೆ ಧಿಡೀರ್ ಕುಸಿಯಿತೆಂದು ಸುದ್ದಿ 'ಬೆಲೆ ಏರಿಕೆಯಾದಾಗ ಗ್ರಾಹಕರು ಪ್ರತಿಭಟಿಸಿದರೆ' ಬೆಲೆ ಕುಸಿದಾಗ ರೈತರು ಪ್ರತಿಭಟಿಸುತ್ತಾರೆ. ಬೆಲೆ ಏರಿಕೆಯಾದಾಗಲೂ, ಬೆಲೆ ಕುಸಿದಾಗಲೂ ಎರಡರಲ್ಲೂ ಲಾಭದ ಕೊಳ್ಳೆ ಹೊಡೆಯುವವರು ದೊಡ್ಡ ವರ್ತಕರು.

ಈರುಳ್ಳಿಯ ಕಥೆಯನ್ನೇ ತೆಗೆದುಕೊಳ್ಳಿ. ಯಾವಾಗಲೂ ಕೆ.ಜಿ.ಗೆ 10 ರೂ.ನಿಂದ 20 ರೂ.ವರೆಗೆ ಇರುತ್ತಿದ್ದ ಈರುಳ್ಳಿಯ ಬೆಲೆ ಒಂದೇ ಸಮನೆ ರೂ.40ಕ್ಕೆ, ಕೊನೆಗೆ 80 ಕ್ಕೂ ತಲುಪಿತು. ಯಾಕೆ ಹೀಗಾಯ್ತು ಎಂದು ಕೇಳಿದರೆ ಮಳೆಯಿಂದಾಗಿ ಎಂಬುತ್ತರ. ಅಕಾಲದಲ್ಲಿ ಮಳೆಗೆ ಸಿಕ್ಕು ಬೆಳೆ ನಾಶವಾದುದು ಸರಿ ಇದರಿಂದ ರೈತರಿಗೆ ನಷ್ಟವಾದದ್ದು ಹೌದು, ಆದರೆ ಬೆಲೆ ರೂ.80ಕ್ಕೆ ತಲುಪಲು ರೈತರು ಕಾರಣರಲ್ಲ.

ಕೇಂದ್ರ ಸರ್ಕಾರದ ನೇರ ಹೊಣೆ : ಸುಮಾರು ಒಂದು ತಿಂಗಳ ಹಿಂದೆ ಸುರಿದ ಅಕಾಲಿಕ ಮಳೆಯಿಂದಾಗಿ ಈರುಳ್ಳಿ ಬೆಳೆಗಾರರು ತೊಂದರೆಗೆ ಒಳಗಾದುದು ಬೆಳೆ ನಷ್ಟವಾದುದು ಸತ್ಯ. ಆಗಲೇ ಬೆಲೆ ಏರಿಕೆ ಆರಂಭವಾಗಿತ್ತು. ಇದು ಕೇಂದ್ರ ಸರ್ಕಾರಕ್ಕೆ ತಿಳಿಯದ ವಿಷಯವೇನಲ್ಲ.ಜನ ಸಾಮಾನ್ಯರ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿಜವಾದ ಕಾಳಜಿ ಇದ್ದಿದ್ದರೆ. ಆಗಲೇ ರಫ್ತಿನ ಮೇಲೆ ನಿಷೇಧ ಹೇರಬೇಕಾಗಿತ್ತು. ಅಥವಾ ನಿಯಂತ್ರಣಗೊಳಿಸಬೇಕಿತ್ತು. ಅದರ ಬದಲಿಗೆ ಕಾಳಸಂತೆಕೋರ ವರ್ತಕರಿಗೆ ದಾಸ್ತಾನು ಮಾಡಲು ಅವಕಾಶ ಮಾಡಿಕೊಟ್ಟಿತು. ಉದಾಹರಣೆಗೆ ಈರುಳ್ಳಿ ಬೆಳೆ ಹಾಳಾಗಿದೆ ಎಂದು ತಿಳಿದ ನಂತರವೂ 1.4 ಲಕ್ಷ ಮೆಟ್ರಿಕ್ ಟನ್ (14 ಕೋಟಿ. ಕೆ.ಜಿ.) ಈರುಳ್ಳಿಯನ್ನು ವಿದೇಶಗಳಿಗೆ ರಫ್ತು ಮಾಡಲಾಗಿದೆ ಎಂದು ಸಿಎನ್‌ಎನ್, ಐಬಿಎನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಆದರೆ ಈಗ ಆಮದು ಮಾಡಿಕೊಳ್ಳಲು ಉದ್ದೇಶಿಸಿರುವುದು ಕೇವಲ 50,000 ಮೆಟ್ರಿಕ್ ಟನ್, ಅದನ್ನೂ ಕೂಡಾ ಸ್ಥಗಿತಗೊಳಿಸಲಾಗಿದೆ.

ಇದೀಗ ರಫ್ತಿನ ಮೇಲೆ ನಿಷೇಧದ ಘೋಷಣೆಯಾಗುತ್ತಲೇ ಧುತ್ತೆಂದು ಬೆಲೆ ಕುಸಿದಿದೆ. ಹಾಗಾದರೆ ಅಷ್ಟು ಬೇಗನೆ ಮಾರುಕಟ್ಟೆಗೆ ಈರುಳ್ಳಿಯ ಪೂರೈಕೆಯಾಗಿತ್ತೇ ? ಸಾಧ್ಯವೇ ಇಲ್ಲ. ಅಂದರೆ ಫಸಲು ಕಡಿಮೆ ಆಗಿರುವುದನ್ನು ಅರಿತ ದೊಡ್ಡ ವರ್ತಕರು ದಾಸ್ತಾನು ಮಾಡಿದ್ದರು. ಈಗ ರಫ್ತು ನಿಷೇಧದಿಂದಾಗಿ ಅಥವಾ ಪಾಕಿಸ್ತಾನದಿಂದ ಆಮದು ಆಗುತ್ತದೆ ಎಂದು ತಮ್ಮ ದಾಸ್ತಾನನ್ನು ಕಡಿಮೆ ಮಾಡುತ್ತಿರುವುದರಿಂದ ಬೆಲೆ ಇಳಿಕೆ ಆರಂಭಗೊಂಡಿದೆ. ಕಾಳಸಂತೆ ಕೋರರಿಂದಾಗಿ ಬೆಲೆ ಹೆಚ್ಚಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವ ಆನಂದ ಶರ್ಮಾ ಅವರೇ ಹೇಳಿದ್ದಾರೆ. ಆದರೆ ಅದೇ ಕೇಂದ್ರ ಸರ್ಕಾರ ಯಾವುದೇ ಪರಿಹಾರ ಕ್ರಮಕ್ಕೈಗೊಳ್ಳುತ್ತಿಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇರವಾಗಿ ರೈತರಿಂದ ಖರೀದಿಸಿ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಇದರಿಂದ ಬೆಳೆದ ರೈತರಿಗೂ ತಕ್ಕ ಬೆಲೆ ಸಿಗುತ್ತದೆ. ಹಾಗೆಯೇ ಗ್ರಾಹಕರಿಗೂ ಕಡಿಮೆ ಬೆಲೆಯಲ್ಲಿ ವಸ್ತುಗಳು ದೊರೆಯುತ್ತವೆ.

ಒಬ್ಬರನೊಬ್ಬರು ದೂಷಿಸುವ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಮತ್ತು ಅವುಗಳ ನೇತೃತ್ವದ ಸರ್ಕಾರಗಳು ಈ ನಿಟ್ಟಿನಲ್ಲಿ ಯಾವುದೇ ಕ್ರಮಕೈಗೊಳ್ಳುತ್ತಿಲ್ಲ.

ತರಕಾರಿಗಳ ಬೆಲೆಯೂ ಏರಿಕೆ : ಬೆಲೆ ಏರಿಕೆಯಾಗಿರುವುದು ಕೇವಲ ಈರುಳ್ಳಿಯದ್ದು ಮಾತ್ರವಲ್ಲ. ಎಲ್ಲಾ ತರಹದ ತರಕಾರಿಗಳ ಬೆಲೆಯೂ ಗಗನಕ್ಕೇರಿದೆ. ಕೆ.ಜಿ.ಗೆ 8-10 ರೂ.ಗೆ ಟೊಮೊಟೊವನ್ನು ರೈತ ಮಾರಾಟ ಮಾಡಿದ್ದರೆ, ಇಂದು ಗ್ರಾಹಕ 40 ರೂ. ಕೊಟ್ಟು ಖರೀದಿ ಮಾಡಬೇಕಾಗಿದೆ. ಯಾವ ತರಕಾರಿ ಬೆಲೆಯೂ ಕೆ.ಜಿ.ಗೆ 40 ರೂ.ಗಿಂತ ಕಡಿಮೆ ಇಲ್ಲ. ಇದನ್ನೆಲ್ಲಾ ನೆಪವಾಗಿಟ್ಟುಕೊಂಡು ಹೋಟೆಲ್ ಮಾಲಿಕರ ಸಂಘ ತಿಂಡಿ ತಿನಿಸುಗಳ ಬೆಲೆ ಹೆಚ್ಚಿಸಿದೆ. ಆದರೆ ಹೆಚ್ಚಿನ ಹೋಟೆಲುಗಳ ಸಾಂಬಾರ್‌ನಲ್ಲಿ ತರಕಾರಿಯೇ ಇಲ್ಲ. ಇದ್ದರೂ ಸೀಮೇ ಬದನೆಕಾಯಿ !

ಬೆಲೆ ಏರಿಕೆಗೆ ಮಧ್ಯವರ್ತಿಗಳೇ ಕಾರಣ ಎಂದು ಬೆಂಗಳೂರಿನ ಹಾಪ್‌ಕಾಮ್ಸ್ ಸಂಸ್ಥೆಯ ಅಧ್ಯಕ್ಷ ಬಿ.ವಿ.ಚಿಕ್ಕಣ್ಣ ಪ್ರಜಾವಾಣಿ ಪತ್ರಿಕೆಗೆ ತಿಳಿಸಿದ್ದಾರೆ.

ತರಕಾರಿ ಬೆಲೆ ಮತ್ತು ದೊಡ್ಡ ಕಂಪನೆಗಳು : ಇದೀಗ ಚಿಲ್ಲರೆ ವ್ಯಾಪಾರದಲ್ಲಿ ದೊಡ್ಡ ದೊಡ್ಡ ಕಂಪನೆಗಳು ಭಾಗವಹಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಅಂಶ. ಮೇಟ್ರೋ, ರಿಲೆಯನ್ಸ್, ಮೋರ್, ಬಿಗ್‌ಬಜಾರ್, ಫುಡ್‌ವರ್ಲ್ಡ್? ಇನ್ನೂ ಅನೇಕ. ಅದರಲ್ಲಿ ಕೆಲವು ಕಂಪನಿಗಳು ಕೇವಲ ಹಣ್ಣು ಮತ್ತು ತರಕಾರಿ ಕ್ಷೇತ್ರಕ್ಕೆ ಮೀಸಲಿಟ್ಟಿವೆ. ಅದರಲ್ಲಿ ರಿಲೆಯನ್ಸ್ ಫ್ರೆಶ್ ಪ್ರಮುಖವಾದುದು.

ಈ ಕಂಪನೆಗಳು ನೇರವಾಗಿ ರೈತರಲ್ಲಿಗೆ ಹೋಗಿ, ಹೊಲದಲ್ಲಿರುವ ಬೆಳೆಯನ್ನು ಇಡಿ ಇಡಿಯಾಗಿ ಖರೀದಿಸುತ್ತವೆ. ತಾವೇ ಹೊಂದಿರುವ ಶೀತಲೀಕರಣ ವ್ಯವಸ್ಥೆಯಲ್ಲಿ ದಾಸ್ತಾನು ಮಾಡುತ್ತವೆ. ಮಾರುಕಟ್ಟೆಗೆ ಇಂತಹ ದಾಸ್ತಾನು ಕೋರರಿಂದ ಸಾಕಷ್ಟು ಮಾಲುಗಳು ಬಾರದೆ ದರ ಹೆಚ್ಚಳವಾಗುತ್ತದೆ. ಆಗ ತಮ್ಮಲ್ಲಿದ್ದ ದಾಸ್ತಾನಿನ ಮೂಲಕ ರಿಲಯನ್ಸ್ ನಂತಹ ದೈತ್ಯ ಕಂಪೆನಿಗಳು ಸೂಪರ್ ಲಾಭಗಳಿಸುತ್ತವೆ.

ಹಿಂದೆ ತರಕಾರಿ ಮಾರುಕಟ್ಟೆಯಲ್ಲಿ ಚಿಲ್ಲರೆ ವ್ಯಾಪಾರಸ್ಥರು, ಗಾಡಿ ವ್ಯಾಪಾರಿಗಳದ್ದೇ ಮೇಲುಗೈಯಾಗಿತ್ತು. ಅವರು ದಿನನಿತ್ಯ ತರಕಾರಿ ಮಾರುಕಟ್ಟೆಯಿಂದ ಖರೀದಿಸಿ ಅದೇ ದಿನ ಮಾರಾಟ ಮಾಡುತ್ತಿದ್ದರು. ಆದ್ದರಿಂದ ದಾಸ್ತಾನಿನ ಪ್ರಶ್ನೆ ಇರಲಿಲ್ಲ. ಮಾತ್ರವಲ್ಲದೆ, ಚಿಲ್ಲರೆ ವ್ಯಾಪಾರಸ್ಥರಿಗೆ ಸೂಪರ್‌ಲಾಭದ ಆಸೆಯೂ ಇರುವುದಿಲ್ಲ. ಇಂದು ಕಂಪೆನಿಗಳ ಭರಾಟೆ ಜಾಸ್ತಿ ಆಗಿರುವುದರಿಂದ ಮಾರುಕಟ್ಟೆಗೆ ಬರುವ ತರಕಾರಿಯಲ್ಲಿ ತೀವ್ರ ಇಳಿ ಮುಖವಾಗಿದೆ. ಅಲ್ಲದೆ, ದೊಡ್ಡ ಕಂಪೆನಿಗಳೊಂದಿಗೆ ಸ್ಪರ್ಧಿಸಲಾಗದ ಚಿಲ್ಲರೆ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚುತ್ತಿದ್ದಾರೆ.

ಬೆಲೆ ಏರಿಕೆಗೆ ಕಾರಣಗಳು : ಅಕಾಲಿಕ ಮಳೆ ಮತ್ತು ಕಾಳಸಂತೆಕೋರರ ದಾಸ್ತಾನುಗಳಲ್ಲದೆ ಬೆಲೆಏರಿಕೆಗೆ ಇನ್ನೂ ಹಲವು ಕಾರಣಗಳಿವೆ.

1. ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರವು ಇತ್ತೀಚೆಗೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸಿದೆ. ಪೆಟ್ರೋಲ್ ಬೆಲೆಯಂತೂ 15 ದಿನಗಳಿಗೊಮ್ಮೆ ತಿಂಗಳಿಗೊಮ್ಮೆ ಹೆಚ್ಚುತ್ತಲೇ ಇರುತ್ತದೆ. ಇದರಿಂದ ಸಾರಿಗೆ ವೆಚ್ಚ ಹೆಚ್ಚುತ್ತದೆ.
2. ರೈತರಿಂದ ನೇರವಾಗಿ ಖರೀದಿಸಿ ಮಾರುಕಟ್ಟೆ ಮಾಡುವ ವ್ಯವಸ್ಥೆ ಇಲ್ಲದಿರುವುದು. ಎಪಿಎಂಸಿ ಮೂಲಕ ರೈತರಿಂದ ಖರೀದಿಸುವ ವ್ಯವಸ್ಥೆ ಇದ್ದರೂ, ಎಪಿಎಂಸಿ ಕಾಯಿದೆಗೆ ತಂದ ತಿದ್ದುಪಡಿಯಿಂದಾಗಿ ದೊಡ್ಡ ಕಂಪೆನಿಗಳಿಗೆ ಖರೀದಿಗೆ ಅನುಕೂಲವಾಗಿದೆ.
3. ಬಿಜೆಪಿ ರಾಜ್ಯ ಸರ್ಕಾರವು, ಜನರ ಒತ್ತಾಯಗಳಿಗೆ ವಿರುದ್ಧವಾಗಿ, ಜಾನುವಾರು ಹತ್ಯೆ ನಿಷೇದ ಕಾಯಿದೆ ತಂದಿದೆ. ಇದು ರಾಷ್ಟ್ರಪತಿಯವರ ಅಂಕಿತಕ್ಕೆ ಬಾಕಿ ಇದ್ದರೂ, ಸಂಘಪರಿವಾರದ ಅಂಗಗಳಾದ ಭಜರಂಗದಳ, ಶ್ರೀರಾಮಸೇನೆ ಮೊದಲಾದ ಸಂಘಟನೆಗಳು ಗ್ರಾಮೀಣ ಪ್ರದೇಶದಲ್ಲಿ ಜಾನುವಾರು ಕಡಿಯುವುದನ್ನು ತಡೆ ಹಿಡಿಯುತ್ತಿವೆ. ಸ್ಥಳೀಯ ಪೋಲಿಸರು ಈ ಸಂಘಟನೆಗಳೊಂದಿಗೆ ಶಾಮಿಲಾಗಿದ್ದಾರೆ. ಇದರಿಂದ ಕುರಿ, ಕೋಳಿ, ಮೀನು ಮಾಂಸದ ಬೆಲೆ ದುಪ್ಪಾಟ್ಟಾಗಿದೆ. ಸ್ವಾಭಾವಿಕವಾಗಿ ಬಡ, ಮಧ್ಯಮ ವರ್ಗದ ಜನ ತರಕಾರಿಗೆ ಮಾರುಹೋಗುತ್ತಿದ್ದಾರೆ. ಇದರಿಂದಲೂ ತರಕಾರಿ ಬೆಲೆ ಹೆಚ್ಚುತ್ತಿದೆ.

ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಧ್ಯಪ್ರವೇಶಿಸಿ, ರೈತರಿಗೂ, ಗ್ರಾಹಕರಿಗೂ ಅನುಕೂಲವಾಗುವಂತಹ ನೀತಿಗಳನ್ನು ಜ್ಯಾರಿಗೊಳಿಸಬೇಕು. ಆದರೆ ದೊಡ್ಡವರ್ತಕರ ಪರವಾಗಿರುವ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಇದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಜನರ ಸಂಘಟನಾತ್ಮಕ ಹೋರಾಟದ ಮೂಲಕ ಮಾತ್ರವೇ ಈ ನೀತಿಯನ್ನು ಬದಲಿಸಲು ಸಾಧ್ಯ.

ಕೊನೆ ಸುದ್ದಿ : ಅಡುಗೆ ಅನಿಲ ಬೆಲೆ ಸಿಲೆಂಡರಿಗೆ ರೂ.100 ಹೆಚ್ಚಾಗಬಹುದು ಎಂದು ವರದಿಯಾಗಿದೆ. ವಿದ್ಯುತ್ ದರ ಏರಿಕೆ ತಡೆ ಹಿಡಿದಿದ್ದೇವೆ ಎಂದು ಸಚಿವರಾದ ಶೋಭಾ ಕರಂದ್ಲಾಜೆ ಹೇಳಿದರೂ ಚುನಾವಣಾ ನಂತರದಲ್ಲಿ ಹೆಚ್ಚಿಸುವ ಸಾಧ್ಯತೆಗಳಿವೆ. ನಂತರ ಹಾಲು, ನೀರು ಇತ್ಯಾದಿ.

ಒಟ್ಟಾರೆಯಾಗಿ ಬೆಲೆಗಳು ಹೆಚ್ಚುತ್ತಲೇ ಇವೆ. ಆರ್ಥಿಕವೃದ್ಧಿ ಆಗುತ್ತಿದೆ. ಆದರೆ ಜನಸಾಮಾನ್ಯರ ಆದಾಯ ಹೆಚ್ಚುತ್ತಿಲ್ಲ. ಒಂದು ವೇಳೆ ಆದಾಯ ಹೆಚ್ಚಿದರೂ ಬೆಲೆ ಏರಿಕೆಯಿಂದ ನಿಜ ಆದಾಯ ಕುಸಿಯುತ್ತಿದೆ. ಹಾಗಾದರೆ ಆರ್ಥಿಕವೃದ್ಧಿಯ ಲಾಭ ಯಾರಿಗೆ ? ಕೇವಲ ಶ್ರೀಮಂತರಿಗೆ ಮಾತ್ರ. ಹೇಗಿದೆ ಬಂಡವಾಳಶಾಹಿ ವ್ಯವಸ್ಥೆ ನಿಯಮ.

ಬೆಲೆ ಏರಿಕೆ
ಪ್ರತಿಭಟನೆಗೆ ಕರೆ

ಪೆಟ್ರೋಲ್, ತರಕಾರಿ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ದೇಶದಾದ್ಯಂತ ಪ್ರತಿಭಟಿಸಲು ಸಿಪಿಐ(ಎಂ) ಪಾಲಿಟ್ ಬ್ಯೂರೋ ಕರೆ ನೀಡಿದೆ.

....ದ್ವಂದ್ವದಲ್ಲಿ ದ.ಕ. ಮತದಾರರು

ಪುಟ 6 ರಿಂದ

ಕಾರ್ಯಕರ್ತೆ ರಂಜಿನಿ ಸ್ಪರ್ಧಿಸುತ್ತಿದ್ದಾರೆ. ಈ ಜಿ.ಪಂ. ಕ್ಷೇತ್ರದ ವ್ಯಾಪ್ತಿಯಲ್ಲಿರುವ ಧರ್ಮಸ್ಥಳ ತಾ.ಪಂ. ಕ್ಷೇತ್ರದಿಂದ ಯುವ ನಾಯಕ ಶೇಖರ ಲಾಯಿಲ, ಕಂಜ ತಾ.ಪಂ. ಕ್ಷೇತ್ರದಿಂದ ಬೆಳ್ತಂಗಡಿ ತಾಲ್ಲೂಕಿನ ಕಾರ್ಮಿಕ ನಾಯಕರೂ ವಕೀಲರೂ ಆದ ಬಿ.ಎಂ.ಭಟ್ ಮತ್ತು ಕೊಕ್ಕಡ ತಾಲ್ಲೂಕು ಪಂಚಾಯತ್ ಕ್ಷೇತ್ರದಿಂದ ಯುವ ಕಾರ್ಮಿಕ ನಾಯಕಿ ಈಶ್ವರಿ ಸ್ಪರ್ಧಿಸುತ್ತಿದ್ದಾರೆ. ಇದೇ ತಾಲ್ಲೂಕಿನ ಲಾಯಿಲ ತಾ.ಪಂ. ಕ್ಷೇತ್ರದಿಂದ ವಸಂತ ನಡ ಮತ್ತು ಅಳದಂಗಡಿ ತಾ.ಪಂ. ಕ್ಷೇತ್ರದಿಂದ ವಿದ್ಯಾರ್ಥಿ ಚಳುವಳಿಯ ಜಿಲ್ಲಾ ನಾಯಕ ಸುಜಿತ್ ಸ್ಪರ್ಧಿಸುತ್ತಿದ್ದಾರೆ.

ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸುವ ಎಲ್ಲಾ ಕ್ಷೇತ್ರಗಳಲ್ಲಿ ಪ್ರಮುಖ ಕಾರ್ಯಕರ್ತರ ಸಭೆಗಳು ಈಗಾಗಲೇ ನಡೆದಿವೆ. ದಿನಾಂಕ:23 ರಂದು ನಾಮಪತ್ರ ಹಿಂತೆಗೆತ ಮತ್ತು ಚಿಹ್ನೆ ನೀಡಿಕೆ ಪ್ರಕ್ರಿಯೆ ಪೂರ್ಣಗೊಂಡು ನಂತರ ಮನೆಮನೆಗೆ ತೆರಳಿ ಪ್ರಚಾರ ಕೈಗೊಳ್ಳಲು ಈಗಾಗಲೇ ಕಾರ್ಯಕರ್ತರ ತಂಡಗಳು ತೆರಳಿವೆ. ಮತದಾರರ ಮನೋಭಾವ ವನ್ನು ನೋಡುವಾಗ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ತಮ್ಮ ಹಿಂದಿನ ಪ್ರಭಾವವನ್ನು ಉಳಿಸಿಕೊಳ್ಳಲಾರರು ಎಂಬುದು ಸ್ಪಷ್ಟವಾಗುತ್ತಿದೆ. ಈ ಸನ್ನಿವೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರಮುಖ ನಾಯಕರೆಲ್ಲರೂ ದ.ಕ.ಜಿಲ್ಲೆಯನ್ನೆ ಗುರಿಯಾಗಿಸಿ ಪ್ರಚಾರಕ್ಕೆ ಬರುತ್ತಾರೆಂಬ ಸುದ್ದಿಗಳು ವ್ಯಾಪಕವಾಗಿವೆ. ಇದು ಅವರ ಹತಾಶ ಮನೋಭಾವವನ್ನು ತೋರಿಸುತ್ತಿದೆ. ಇನ್ನೊಂದೆಡೆ ಜೆಡಿ(ಎಸ್) ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಮತ್ತು ಎಸ್.ಬಂಗಾರಪ್ಪರವರು ಜಿಲ್ಲೆಯಲ್ಲಿ ಒಂದೆರಡು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಲಿದ್ದಾರೆ. ಒಟ್ಟಿನಲ್ಲಿ ಚುನಾವಣಾ ಕಣರಂಗೇರಿದೆ. ಕೇಂದ್ರ ಮತ್ತು ರಾಜ್ಯದ ಆಳುವ ಪಕ್ಷಗಳು ತಮ್ಮ ಪ್ರಭಾವವನ್ನು ಉಳಿಸಿ ಕೊಳ್ಳಲು ಹೆಣಗಾಡುತ್ತಿವೆ.

ನಂದದ ಜ್ಯೋತಿ



ಆ ದಿನಕ್ಕೆಂದೇ ಕಾಯುತ್ತಿದ್ದೇವೆ
ನೋವಿನ ಕೊನೆಯ ಆ ದಿನಕ್ಕೆ
ಶೋಷಣೆಯೇ ಇಲ್ಲವಾದ ಘನತೆಯ ದಿನಕ್ಕೆ

- ಜ್ಯೋತಿಬಸು

ಜ		
ಭಾ	30	2
ಸೋ	31	3
ಮಂ		4
ಬು		5
ಗು		6
ಶು		7
ಶ	1	8

ಮೇ		
ಭಾ	1	8
ಸೋ	2	9
ಮಂ	3	10
ಬು	4	11
ಗು	5	12
ಶು	6	13
ಶ	7	14

ಸೆಪ್ಟೆಂಬ		
ಭಾ		4
ಸೋ		5
ಮಂ		6
ಬು		7
ಗು	1	8
ಶು	2	9
ಶ	3	10

ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

37/ಎ, 8ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಎದುರು, ಮಹಾಲಕ್ಷ್ಮಿ ಲೇಔ

2011

	16	23
	17	24
	18	25
	19	26
	20	27
	21	28
	22	29

ಫೆಬ್ರವರಿ

ಭಾ		6	13	20	27
ಸೋ		7	14	21	28
ಮಂ	1	8	15	22	
ಬು	2	9	16	23	
ಗು	3	10	17	24	
ಶು	4	11	18	25	
ಶ	5	12	19	26	

ಮಾರ್ಚ್

ಭಾ		6	13	20	27
ಸೋ		7	14	21	28
ಮಂ	1	8	15	22	29
ಬು	2	9	16	23	30
ಗು	3	10	17	24	31
ಶು	4	11	18	25	
ಶ	5	12	19	26	

ಏಪ್ರಿಲ್

ಭಾ		3	10	17	24
ಸೋ		4	11	18	25
ಮಂ		5	12	19	26
ಬು		6	13	20	27
ಗು		7	14	21	28
ಶು	1	8	15	22	29
ಶ	2	9	16	23	30

	22	29
	23	30
	24	31
	25	
	26	
	27	
	28	

ಜೂನ್

ಭಾ		5	12	19	26
ಸೋ		6	13	20	27
ಮಂ		7	14	21	28
ಬು	1	8	15	22	29
ಗು	2	9	16	23	30
ಶು	3	10	17	24	
ಶ	4	11	18	25	

ಜುಲೈ

ಭಾ	31	3	10	17	24
ಸೋ		4	11	18	25
ಮಂ		5	12	19	26
ಬು		6	13	20	27
ಗು		7	14	21	28
ಶು	1	8	15	22	29
ಶ	2	9	16	23	30

ಆಗಸ್ಟ್

ಭಾ		7	14	21	28
ಸೋ	1	8	15	22	29
ಮಂ	2	9	16	23	30
ಬು	3	10	17	24	31
ಗು	4	11	18	25	
ಶು	5	12	19	26	
ಶ	6	13	20	27	

	18	25
	19	26
	20	27
	21	28
	22	29
	23	30
	24	

ಅಕ್ಟೋಬರ್

ಭಾ	30	2	9	16	23
ಸೋ	31	3	10	17	24
ಮಂ		4	11	18	25
ಬು		5	12	19	25
ಗು		6	13	20	27
ಶು		7	14	21	28
ಶ	1	8	15	22	29

ನವೆಂಬರ್

ಭಾ		6	13	20	27
ಸೋ		7	14	21	28
ಮಂ	1	8	15	22	29
ಬು	2	9	16	23	30
ಗು	3	10	17	24	
ಶು	4	11	18	25	
ಶ	5	12	19	26	

ಡಿಸೆಂಬರ್

ಭಾ		4	11	18	25
ಸೋ		5	12	19	26
ಮಂ		6	13	20	27
ಬು		7	14	21	28
ಗು	1	8	15	22	29
ಶು	2	9	16	23	30
ಶ	3	10	17	24	31



..., ಬೆಂಗಳೂರು-560087 ಇ-ಮೇಲ್ : js_weekly@yahoo.com

ಬೇಳೆಕಾಳು ಬೆಳೆದು ಬೆಂದ ರೈತರು

ಮಲ್ಲಯ್ಯ ಜಾಲಹಳ್ಳಿ

ಕಳೆದ 2 ತಿಂಗಳಿಂದ ಮೈತುಂಬಿ ಬೆಳೆದುನಿಂತಿದೆ ಹೊರತು ಮೊಗ್ಗಿಲ್ಲ, ಹೂವಿಲ್ಲ, ಕಾಯಿಕಟ್ಟುವ ಮಾತಂತೂ ದೂರವೇ ಉಳಿಯಿತು.

ಆಳೆತ್ತರಕ್ಕೆ ಬೆಳೆದ ತೊಗರಿಗಿಡಗಳು. ಹಚ್ಚಹಸಿರಾಗಿ ನೋಡುಗರ ಕಣ್ ಮನ ತಣಿಸುವಂತಿವೆ. ಯಾರೇ ನೋಡಿದರೂ ತಕ್ಷಣ ಕೇಳುವ ಪ್ರಶ್ನೆ ಯಾವ ತಳಿನೊ ಮಾರಾಯ, ಎಷ್ಟು ಚಂದ ಬೆಳೆದವಲ್ಲ ಅಂತ. ಅಷ್ಟು ಚಂದದ ಬೆಳವಣಿಗೆ ಕೊಟ್ಟ ತಳಿ ಬಿ.ಎಸ್.ಎಂ.ಆರ್ 736. ಕಳೆದ 2 ತಿಂಗಳಿಂದ ಮೈತುಂಬಿ ಬೆಳೆದುನಿಂತಿದೆ ಹೊರತು ಮೊಗ್ಗಿಲ್ಲ, ಹೂವಿಲ್ಲ, ಕಾಯಿಕಟ್ಟುವ ಮಾತಂತೂ ದೂರವೇ ಉಳಿಯಿತು. ಈ ತಳಿಯ ಬೀಜದ ಜತೆಯಲ್ಲೆ ಬಿತ್ತಿದ ಬೇರೆ ತಳಿಗಳು ಮೊಗ್ಗಾಗಿ, ಹೂಬಿಟ್ಟು, ಕಾಯಿಕಟ್ಟಿ, ಕೊಯ್ಲೂ ಆಗಿ ಮಾರಾಟ ಕೂಡ ನಡೆದಿದೆ.

ಡಿಸೆಂಬರ್ 9ರಂದು ಬತ್ತದ ಬೆಂಬಲ ಬೆಲೆಗಾಗಿ ಹೋರಾಟಕ್ಕೆ ಬನ್ನಿ ಎಂದು ಪ್ರಚಾರಕ್ಕೆ ಹೋದ ರೈತಸಂಘದ ಕಾರ್ಯಕರ್ತರ ಮುಂದೆ ತೀವ್ರವಾಗಿ ಎದುರಾಗಿದ್ದು ಬಿಎಸ್‌ಎಂಆರ್ 736 ತಳಿಯ ಗೊಡ್ಡುಬೀಜದ ಪ್ರಶ್ನೆ. ಲಿಂಗಸುಗೂರು ತಾಲ್ಲೂಕಿನ 7 ರೈತಸಂಪರ್ಕ ಕೇಂದ್ರಗಳಿಗೆ ದೂರು ಸಲ್ಲಿಸಿದರೂ ಪ್ರಯೋಜನ ಕಾಣದ ರೈತರು ಸಂಘದ ಕಾರ್ಯಕರ್ತರ ಮುಂದೆ ತಮ್ಮ ಗೋಳನ್ನು ತೋಡಿಕೊಂಡರು. ಪರಿಣಾಮ ನವೆಂಬರ್ 27 ರಂದು ಲಿಂಗಸುಗೂರು ಸಹಾಯಕ ಕೃಷಿ ಅಧಿಕಾರಿ ಕಛೇರಿಗೆ ಸಂಘದ ನೇತೃತ್ವದಲ್ಲಿ ಮುತ್ತಿಗೆ ಹಾಕಲಾಯ್ತು. ಪರಿಣಾಮವಾಗಿ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ತಜ್ಞ ಡಾ.ಸೋಮಶೇಖರ ನೇತೃತ್ವದಲ್ಲಿ ತಜ್ಞರ ಸಮಿತಿ ನೇಮಕವಾಗಿದೆ.



ತೊಗರಿ ಕರ್ನಾಟಕದ ಪ್ರಮುಖ ಬೆಳೆಗಳಲ್ಲಿ ಒಂದು. ಬೇಳೆಕಾಳುಗಳಲ್ಲಿ ಪ್ರಮುಖವಾದದ್ದು. ಪ್ರತಿ ವರ್ಷ ಸರಾಸರಿ 10 ರಿಂದ 15 ಲಕ್ಷ ಎಕರೆಗಳಲ್ಲಿ ಬಿತ್ತಲಾಗುತ್ತದೆ. ಆದರೆ ಈ ವರ್ಷ 20 ಲಕ್ಷ ಎಕರೆಗಳಲ್ಲಿ ಬಿತ್ತನೆಯಾಗಿದೆ ಎನ್ನಲಾಗುತ್ತಿದೆ. ಕಾರಣ ಕಳೆದ ವರ್ಷ ತೊಗರಿಗೆ ಕ್ವಿಂಟಾಲಿಗೆ 4500 ರೂ.ಗಳಿಂದ 6200 ರವರೆಗೆ ಬೆಲೆ ಸಿಕ್ಕಿದ್ದರಿಂದಾಗಿ ರೈತರ ಕೈಗೆ ನಾಲ್ಕು ಕಾಸು ಬೀಳಲು ಕಾರಣವಾಗಿದ್ದರಿಂದಾಗಿ ಸೂರ್ಯಕಾಂತಿ ಬದಲು ತೊಗರಿ ಬೀಜ ಹಾಕಲಾಯಿತು. ಹೀಗಾಗಿ ಶೇ.25 ರಷ್ಟು ಪ್ರದೇಶದಲ್ಲಿ ತೊಗರಿ ಬಿತ್ತನೆಯಲ್ಲಿ ವಿಸ್ತರಣೆಯಾಯಿತು.

ರಾಜ್ಯದಲ್ಲಿ ತೊಗರಿಯ ಕಣಜವೆಂದು ಹೆಸರಾದ ಜಿಲ್ಲೆ ಗುಲಬರ್ಗಾ ಯಾವಾಗಲೂ 6 ರಿಂದ 7 ಲಕ್ಷ ಎಕರೆಗಳಲ್ಲಿ ಬಿತ್ತನೆಯಾಗುತ್ತಿದ್ದ ತೊಗರಿ ಈ ವರ್ಷ 9 ಲಕ್ಷ ಎಕರೆ ದಾಟಿದೆ. ಆದರೆ ಬೆಲೆ ಮಾರುಕಟ್ಟೆಯಲ್ಲಿ ಕುಸಿದಿದೆ. ಕಳೆದ 4500 ರಿಂದ 6200 ರವರೆಗೆ ಇದ್ದ ಬೆಲೆ ಈಗ 2200 ರಿಂದ 2900 ರೊಳಗೆ ಓಡಾಡುತ್ತಿದ್ದು . ರೈತರು ಕಂಗಾಲಾಗುವಂತೆ ಮಾಡಿದೆ. ಪ್ರತಿ ಎಕರೆಗೆ ಸಾಮಾನ್ಯವಾಗಿ 8000 ರಿಂದ 10,00 ರವರೆಗೆ ರೈತರು ಖರ್ಚು ಮಾಡುತ್ತಾರೆ. ತೊಗರಿ ಇಳುವರಿ ಎಕರೆಗೆ ಸರಾಸರಿ 3 ಕ್ವಿಂಟಾಲ್. ಹೀಗಾಗಿ ರೈತರು ಪ್ರತಿ ಎಕರೆಗೆ 3000 ದಿಂದ 5,000 ರವರೆಗೆ ನಷ್ಟ ಹೊಂದುತ್ತಿದ್ದಾರೆ. ಈ ನೀತಿಗೆ ತೊಗರಿಬೆಳೆವ ಜಿಲ್ಲೆಗಳಾದ ಗುಲಬರ್ಗಾ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಿಜಾಪುರಗಳ ರೈತ ಸಮೂಹ ಬಲಿಯಾಗಿದೆ.

ಗುಲಬರ್ಗಾದಲ್ಲಿ ತೊಗರಿ ಮಂಡಳಿ ಇದ್ದರೂ ಖರೀದಿಗೆ ಮುಂಬರುತ್ತಿಲ್ಲ. 3000 ಬೆಂಬಲ ಬೆಲೆ ಇದ್ದು 500 ಪ್ರೋತ್ಸಾಹಧನ ಸೇರಿ ಕನಿಷ್ಟ 3500 ರೂ.ಗೆ ಮಂಡಳಿ ಖರೀದಿಗೆ ಮುಂದಾದಲ್ಲಿ ಐದಾರು ಲಕ್ಷ ರೈತ ಕುಟುಂಬಗಳು ಕನಿಷ್ಟ ನಿರಾಳವಾಗಿ ಉಸಿರಾಡಲು ಸಾಧ್ಯವಾಗುತ್ತದೆ. ಆದರೆ ತೊಗರಿ ಬೆಳೆದ ರೈತರು ಮಾತ್ರ ತಮ್ಮ ಪಾಲಿಗೆ ಮಂಡಳಿಯಾಗಲಿ ಅಥವಾ ಸರಕಾರವಾಗಲಿ ಸಹಾಯಕ್ಕೆ ಬರುವ ನಂಬಿಕೆ ಕಳೆದುಕೊಂಡಿದ್ದಾರೆ. ನೊಂದ ರೈತರ ನಿಟ್ಟುಸಿರು ಪಂಚಾಯತ್‌ಗಳ ಚುನಾವಣೆಗಳಲ್ಲಿ ಪರಿಣಾಮ ಬೀರಬಹುದೇ?

ವೇತನ ನಿಗದಿಪಡಿಸಲು ಗ್ರಾಮೀಣಾಭಿವೃದ್ಧಿ ಸಚಿವ ಶೆಟ್ಟರ್‌ಗೆ ಗ್ರಾಮಪಂಚಾಯತ ನೌಕರರ ಒತ್ತಾಯ

ಗ್ರಾಮ ಪಂಚಾಯಿತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಫಾಯಿ, ಸಿಪಾಯಿ, ವಾಲ್‌ಮನ್‌ಗಳು, ಕರವಸೂಲಿಗಾರರು , ಗುಮಾಸ್ತ ಹಾಗೂ ಗಣಕಯಂತ್ರ ಸಹಾಯರಿಗೆ ವೇತನವನ್ನು ನಿಗದಿಪಡಿಸಬೇಕು ಎಂದು ಆಗ್ರಹಿಸಿ ಹಳಿಯಾಳ ತಾಲ್ಲೂಕು ಗ್ರಾ.ಪಂ ನೌಕರರ ಸಂಘ ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ ಶೆಟ್ಟರ್ ಅವರಿಗೆ ಮನವಿ ರವಾನಿಸಿದೆ.

ಗುರುವಾರ ಗ್ರಾ.ಪಂ. ನೌಕರರ ಸಂಘದ ಸದಸ್ಯರು ತಾ.ಪಂ. ಕಾರ್ಯಾಲಯಕ್ಕೆ ತೆರಳಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಚಿಕ್ಕಮಠ ಅವರಿಗೆ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹಾಗೂ ಸರಕಾರದ ಅಧೀನ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್ ಇಲಾಖೆ ಅವರಿಗೆ ಬರೆದ ಮನವಿಪತ್ರವನ್ನು ನೀಡಿದರು.

ಕಾರ್ಯದರ್ಶಿ ಎರಡು ಹುದ್ದೆಗೆ ಎಸ್‌ಎಸ್‌ಎಲ್‌ಸಿ ಪಾಸಾದ ಹತ್ತು ವರ್ಷ ಸೇವೆ ಸಲ್ಲಿಸಿದ ಎಲ್ಲಾ ವರ್ಗದ ನೌಕರರನ್ನು ನೇಮಕಾತಿ ಮಾಡಬೇಕು. ಗ್ರಾಮ ಪಂಚಾಯತ್ ನೌಕರರ ವಯೋಮಿತಿ 60 ವರ್ಷಕ್ಕೇರಿಸಬೇಕು. ಐದು ವರ್ಷ ಸೇವೆ ಸಲ್ಲಿಸಿದ ಪದವೀಧರರಿಗೆ ಪಿಡಿಓ ನೇಮಕಾತಿಯಲ್ಲಿ ಅವಕಾಶ ನೀಡಬೇಕು. ವೇತನ ಭದ್ರೆಗಾಗಿ ಪ್ರತ್ಯೇಕ ಅನುದಾನ ನೀಡಬೇಕು. ಎಲ್ಲ ನೌಕರರನ್ನು ಕಾಯಂಗೊಳಿಸಬೇಕು. ಸೇರಿದಂತೆ ಹತ್ತು ಬೇಡಿಕೆಗಳನ್ನು ಪ್ರಸ್ತಾಪಿಸಲಾಗಿದೆ. ಸಂಘದ ತಾಲ್ಲೂಕಾಧ್ಯಕ್ಷ ಟಿ.ಎಂ.ಗುರುಬಣ್ಣವರ, ಉಪಾಧ್ಯಕ್ಷ ರಿಯಾಜ್ ಕಿತ್ತೂರ, ಕಾರ್ಯದರ್ಶಿ ಸುರೇಶ ಉಮಣ್ಣವರ್, ಸಿಐಟಿಯು ಜಿಲ್ಲಾ ಮುಖಂಡ ಆರ್.ಎಂ.ಮುಲ್ಲಾ ಮೊದಲಾದವರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.

ಪಂಚಾಯತ್ ಚುನಾವಣೆಯಲ್ಲಿ ಅಭ್ಯರ್ಥಿಗಳಾಗಲು ಅರ್ಹತೆಗಳೇನು?

ಇಂತಹುದೇ ಹಲವು ಪ್ರಶ್ನೆಗಳು ನಿತ್ಯವೂ ಕೇಳುಬರುತ್ತಿವೆ. ನಿಷ್ಠಾವಂತ ಕಾರ್ಯಕರ್ತರಿಗೆ 'ಟಿಕೇಟ್' ಸಿಗಲಿಲ್ಲ. ನಮ್ಮ ಗುಂಪಿಗೆ ಸಿಗಲಿಲ್ಲ' ಎಂದೆಲ್ಲಾ ದೊಡ್ಡ ರಂಪಾಟ ಆಗುತ್ತಿವೆ. ಕೆಲವೆಡೆ ಶಿಸ್ತುಬದ್ಧ ಪಕ್ಷವಾದ 'ಬಿಜೆಪಿ' ಕಛೇರಿಯಲ್ಲಿ ಟಿಕೇಟ್ ವಂಚಿತರು ಪೀಠೋಪಕರಣಗಳನ್ನು ಪುಡಿಗುಟ್ಟಿದ್ದಾರೆ. ಹೊಡೆದಾಟಗಳು ಆಗಿವೆ. ಬಂಡಾಯ ಅಭ್ಯರ್ಥಿಗಳೂ ಕಣದಲ್ಲಿದ್ದಾರೆ. ಕಾಂಗ್ರೆಸ್ ಇದಕ್ಕಿಂತ ಭಿನ್ನವೇನೂ ಅಲ್ಲ...

'ಅರ್ಹತೆಯೆಂಬುದು ಏನಿರುತ್ತದೆ. ಗೆಲ್ಲುವ ಕುದುರೆಯಾಗಿರಬೇಕು'. ಗೆಲ್ಲುವ ಕುದುರೆ ಅಂದರೆ ಗೆಲ್ಲಲು ಯಥೇಚ್ಛ ಹಣವಿರಬೇಕು, ತೋಳ್ಬಲ, ಜಾತಿಬಲವಿರಬೇಕು. ಏನೆಲ್ಲಾ ಮಾಡಿ ದಕ್ಕಿಸಿಕೊಳ್ಳುವ ಶಕ್ತಿವಂತರಿರಬೇಕು ಎನ್ನುತ್ತಾರೆ ಖಾಸಗಿಯಾಗಿ ಮಾತನಾಡುತ್ತಾ ಕಮಲಧಾರಿ ನಾಯಕರೊಬ್ಬರು. ಈ ಮಾನದಂಡದಿಂದಾಗಿಯೇ ಹತ್ತಾರು ವರ್ಷಗಳು ನಿಷ್ಠರಾಗಿರುವ ಮೂಲ ಕಾರ್ಯಕರ್ತರು ಮೂಲೆಗುಂಪಾಗಿದ್ದಾರೆ.

ಇವರು ಅಭ್ಯರ್ಥಿಗಳು, ಕೋಟ್ಯಾಧೀಶರಲ್ಲ

ವಿ.ಗೀತಾ



ಗಂಗಮ್ಮ



ಇಲ್ಲಿ ಕೋಟ್ಯಾಧೀಶರದ್ದೇ ಕಾರುಬಾರು!

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭೂದಂಧೆ ಮಾಡುವ ಗುತ್ತಿಗೆದಾರ ಕೋಟ್ಯಾಧೀಶರದ್ದೇ ಮೇಲುಗೈ. ಬಿಜೆಪಿ, ಕಾಂಗ್ರೆಸ್‌ಗಳದ್ದು ಸಮಬಲ, ಪೈಪೋಟಿ. ಇದರಲ್ಲಿ ಜೆಡಿ(ಎಸ್) ಅಷ್ಟು ಹಿಂದೆ ಬಿದ್ದಿಲ್ಲವೆಂದು ಅಲ್ಲಲ್ಲಾದರೂ ತೋರಿಸಿದೆ. ದುರ್ಬಲ ವರ್ಗದವರು ಮೀಸಲಾತಿಗಾಗಿ ಇದ್ದರೂ ಅದರ ಹಿಂದೆ 'ಬಲಾಢ್ಯ'ರ ಹಸ್ತವೇ!

ಅಂದರೆ ಕಳಕಳಿಯ, ನಿಷ್ಠ, ಸಾಮಾನ್ಯರಿಗೆ ಎಲ್ಲಾ ಅವಕಾಶ ಇಲ್ಲವೇ? ಎಂದು ನೀವು ಕೇಳಬಹುದು.

ನಿಜ! ಯಾಕಿಲ್ಲ ?

ಕೋಲಾರದ ಸುಗಟೂರು ಜಿಲ್ಲಾ ಪಂಚಾಯ್ತಿಯಲ್ಲಿ ಒಬ್ಬ ಮಹಿಳೆ ಅಭ್ಯರ್ಥಿಯಾಗಿದ್ದಾರೆ. ಅವರು ಕೂಲಿಕಾರ ಮಹಿಳೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ದುಡಿಯುವಾಕೆ, ಹೆಸರು ಗಂಗಮ್ಮ ಗಂಡ ನಿಧನವಾಗಿ 10 ವರ್ಷಗಳಾಗಿವೆ. ಮಕ್ಕಳಿಲ್ಲ. ಆಸ್ತಿವಂತರಲ್ಲದ, ಆದರೆ ಬದುಕಿಗೆ ಬೆನ್ನು ತೋರಿಸದ ಆಕೆ ಕೂಲಿಕಾರಳಾಗಿ ದುಡಿಯುತ್ತಿದ್ದಾಳೆ. ತನ್ನ ಸಂಘಟನಾ ತೊಡಗುವಿಕೆಯಿಂದ ಸಿಪಿಐ(ಎಂ)ನ ಅಭ್ಯರ್ಥಿ, ರೈತಸಂಘದ ಜಿಲ್ಲಾ ಅಧ್ಯಕ್ಷೆ.

ಹಾಗೆಯೇ ಇನ್ನೊಬ್ಬ ಮಹಿಳಾ ನಾಯಕಿ ವಿ.ಗೀತಾ. ಹುಟ್ಟೂರು ಜಿಲ್ಲಾ ಪಂಚಾಯತ್‌ನ ಸಿಪಿಐ(ಎಂ)ನ ಅಭ್ಯರ್ಥಿ, ಸಾಮಾನ್ಯ ಕುಟುಂಬದ, ಜನತೆಯ ಚಳುವಳಿಯಲ್ಲಿ ಪೂರ್ಣ ತೊಡಗಿಸಿಕೊಂಡ ಕ್ರಿಯಾಶೀಲ ನಾಯಕಿ.... ಆ ಇಬ್ಬರಿಗೂ ಹಣವಿಲ್ಲ, ಆದರೆ ಘಟಾನುಘಟಿಗಳನ್ನು ಎದುರಿಸುತ್ತಿದ್ದಾರೆ. ಕೈಯಲ್ಲಿರುವುದು ಕೆಂಬಾವುಟ. ಎದೆಯಲ್ಲಿ ಆತ್ಮವಿಶ್ವಾಸ, ಸುತ್ತಲೂ ಸದಾ ಶ್ರಮಿಸುವ ಸಂಗಾತಿಗಳು. ಹೀಗೆ 'ನಿಮ್ಮದೇ ಓಟು

ಪುಟ 12 ಕ್ಕೆ

ಪಶ್ಚಿಮ ಬಂಗಾಳ: ಗ್ರಾಮೀಣ ಸಮಾಜದ ಪರಿವರ್ತನೆಯಲ್ಲಿ ಪಂಚಾಯತ್ ಸಂಸ್ಥೆಗಳ ಪಾತ್ರ

ದುಡಿಯುವ ಜನತೆಯ ಕೈಯಲ್ಲಿ ಅಧಿಕಾರ

ವಿಶ್ವದ ಗಮನವನ್ನು ಸೆಳೆದ ಪಶ್ಚಿಮ ಬಂಗಾಳದ ಪಂಚಾಯ್ತಿ ವ್ಯವಸ್ಥೆಯು ದೇಶದಲ್ಲೇ ವಿಶಿಷ್ಟವಾದುದು, ಮಾದರಿಯಾದುದು. ಕೆಳಹಂತಗಳಲ್ಲಿ ಪ್ರಜಾಪ್ರಭುತ್ವ ಬಲಗೊಂಡು, ವಿಸ್ತಾರವಾಗಿ ಬೆಳೆದು ನಿಲ್ಲುವಲ್ಲಿ ಎಡರಂಗದ ಪಾತ್ರ ಮಹತ್ವದ್ದು. ಇಂತಹ ಸಾಧನೆ, ಪ್ರಗತಿ ಸಾಧ್ಯವಾದುದಾದರೂ ಹೇಗೆ? ಇದರ ಮೂಲವನ್ನು ವಿಶ್ಲೇಷಿಸಿದ್ದಾರೆ ಪಶ್ಚಿಮ ಬಂಗಾಳದ ಪಂಚಾಯತ್‌ರಾಜ್ ಸಚಿವ ಸೂರ್ಯಕಾಂತ ಮಿಶ್ರಾರವರು.

ಸೂರ್ಯಕಾಂತ ಮಿಶ್ರ

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ವ್ಯವಸ್ಥೆಯ ಬೆಂಬಲದೊಂದಿಗೆ ಭೂಮಿ ಹಂಚಿಕೆಯು ಇಡೀ ದೇಶದಲ್ಲಿಯೇ ಜನ-ಕೇಂದ್ರಿತ ಅಭಿವೃದ್ಧಿಯ ಒಂದು ಹೊಸ ಶಕೆಯನ್ನೇ ಸ್ಥಾಪಿಸಿತು ಎನ್ನಬಹುದು. ಸಾಮಾಜಿಕ ನ್ಯಾಯವನ್ನು ಒಳಗೊಂಡ ಕ್ಷಿಪ್ರ ಆರ್ಥಿಕ ಅಭಿವೃದ್ಧಿಯುಳ್ಳ ಗ್ರಾಮೀಣ ಸಮಾಜದ ಪರಿವರ್ತನೆಗೆ ಇದು ತಳಹದಿಯಾಗಿದೆ. ಭೂ ಸುಧಾರಣೆಯ ಫಲಾನುಭವಿಗಳನ್ನು ಸರಿಯಾಗಿ ಗುರುತಿಸುವಲ್ಲಿ, ಹಂಚಿಕೆಯಾದ ಭೂಮಿಯು ಅದನ್ನು ಪಡೆದುಕೊಂಡವರ ಹಿಡಿತದಲ್ಲಿಯೇ ಉಳಿಯುವಲ್ಲಿ ಮತ್ತು ಗೇಣಿದಾರರನ್ನು ದಾಖಲಾತಿಗೊಳಪಡಿಸಿ ಅವರ ಹಕ್ಕುಗಳನ್ನು ಮಾನ್ಯ ಮಾಡುವಲ್ಲಿ ಪಂಚಾಯತ್ ವ್ಯವಸ್ಥೆಯ ಪಾತ್ರ ಗಣನೀಯವಾದದ್ದು. ಈ ಕಾರ್ಯ ಸಾಧಿಸಲು ಅಧಿಕಾರಶಾಹಿ ಯಂತ್ರವನ್ನು ನೆಚ್ಚಿಕೊಂಡಿದ್ದಲ್ಲಿ ಅನುಷ್ಠಾನ ಅಸಾಧ್ಯವೇ ಸರಿ.

ಇಡೀ ದೇಶದಲ್ಲಿಯೇ ಮೊದಲ ಬಾರಿಗೆ, 1978ರಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ, ಮೂರು ಹಂತದ ಪಂಚಾಯತ್ ವ್ಯವಸ್ಥೆಯನ್ನು ಜಾರಿಗೆ ತಂದಿತು. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಪಶ್ಚಿಮ ಬಂಗಾಳ ರಾಜ್ಯದ ಪಂಚಾಯತ್ ವ್ಯವಸ್ಥೆಯ ವೈಶಿಷ್ಟ್ಯವೆಂದರೆ: ಪಂಚಾಯತ್ ಸಂಸ್ಥೆಗಳಿಗೆ ಚುನಾಯಿತಗೊಂಡು



ಅಧಿಕಾರ ಹಿಡಿದವರು ಮೇಲ್-ಸ್ತರಕ್ಕೆ ಸೇರಿಲ್ಲದ ದುಡಿಯುವ ಜನವಿಭಾಗದಿಂದ ಬಂದ ಭೂರಹಿತರು, ದುಡಿಯುವ ಜನ, ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರನ್ನು ಒಳಗೊಂಡ ಗ್ರಾಮೀಣ ಬಡಜನತೆಯ ಪ್ರತಿನಿಧಿಗಳು ಇವರು ಗಣನೀಯ ಸಂಖ್ಯೆಯಲ್ಲಿದ್ದಾರೆ.

ಪಂಚಾಯತ್ ಸಂಸ್ಥೆಗಳಿಗೆ ನೈಜ ಶಕ್ತಿ ನೀಡಿರುವ ಎಡರಂಗ ಸರ್ಕಾರ:

ಪಂಚಾಯತ್ ಸಂಸ್ಥೆಗಳಂಥಹ ಸ್ಥಳೀಯ ಸಂಸ್ಥೆಗಳು ಪ್ರಮುಖ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಇದುವರೆಗೂ ಬೇರಾವ ರಾಜ್ಯಗಳಲ್ಲೂ ಹೊಂದಿರಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಬಡತನ ನಿರ್ಮೂಲನೆ ಮತ್ತು ಪ್ರಮುಖ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಪಂಚಾಯತ್‌ಗಳಿಗೆ ನೀಡಲಾಯಿತು. ಕಾರ್ಯಕ್ರಮದ ಜವಾಬ್ದಾರಿ ಹೊತ್ತ ಪಂಚಾಯತ್ ಸಂಸ್ಥೆಗಳಿಂದಾಗಿ ನೈಜ ಫಲಾನುಭವಿಗಳನ್ನು ಗುರುತಿಸಲು ಸಾಧ್ಯವಾಯಿತು. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಂಥಹ ಉದ್ಯೋಗ ನೀಡುವ ಯೋಜನೆಗಳನ್ನು ಗ್ರಾಮ ಪಂಚಾಯಿತಿಗಳು ಬಳಸಿಕೊಂಡು ಪ್ರಸಕ್ತ ಉದ್ಯೋಗ ಬೇಡಿಕೆ ಮತ್ತು ಆ ಪ್ರದೇಶದ ಉದ್ಯೋಗ-ಧಾರಣಾ ಸಾಮರ್ಥ್ಯವನ್ನು ಬಲಗೊಳಿಸಲು ಅದಕ್ಕೆ ಅತ್ಯವಶ್ಯ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಬಡತನ ನಿರ್ಮೂಲನೆ ಕಾರ್ಯಗಳನ್ನು ಜಾರಿಗೊಳಿಸಿವೆ. ಹತ್ತು ಲಕ್ಷ ಸ್ವಸಹಾಯ ಗುಂಪುಗಳನ್ನು ಸಂಘಟಿಸಲು ಗುರಿ ನಿಗದಿ ಪಡಿಸಿದ್ದು ಪ್ರತಿ ಗುಂಪಿನಲ್ಲಿ ಕನಿಷ್ಠ ಒಬ್ಬ ಮಹಿಳೆಯನ್ನು ಸೇರಿಸಲು ಮತ್ತು ಈ ಗುಂಪುಗಳು ಆದಾಯ ತರುವ ಚಟುವಟಿಕೆಗಳನ್ನು ನಡೆಸಲು ಅವಶ್ಯ ಸಾಲ, ತರಬೇತಿ ಮತ್ತು ಇತರೆ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಇತರೆ ಗ್ರಾಮಗಳಿಗೆ ಹೋಲಿಸಿದರೆ ಹಿಂದುಳಿದಿರುವ ಸುಮಾರು 4,614 ಗ್ರಾಮಗಳನ್ನು ಗುರುತಿಸಲಾಗಿದ್ದು ಆ ಗ್ರಾಮಗಳ ಎಲ್ಲ ಕುಟುಂಬಗಳು ಪಂಚಾಯತ್ ಸಂಸ್ಥೆಗಳ ಮತ್ತು ಇತರೆ ಸರ್ಕಾರಿ ಇಲಾಖೆಗಳ ಯೋಜನೆಗಳನ್ನು ಪಡೆದು ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಶ್ರಮಿಸಲಾಗುತ್ತಿದೆ.

ಪಂಚಾಯತ್ ವ್ಯವಸ್ಥೆಯನ್ನು ಬೇರು ಮಟ್ಟದಲ್ಲಿ ಮತ್ತಷ್ಟು ಬಲಗೊಳಿಸಿ, ವಿಶಾಲ ಜನವಿಭಾಗವು ಭಾಗವಹಿಸುವಂತೆ ಮಾಡಲು ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸಲಾಗುತ್ತಿದೆ. ಗ್ರಾಮ ಸಭಾ ಅಥವಾ ಗ್ರಾಮ ಸಂಸದ್‌ನಲ್ಲಿ ಆಯಾಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಹುತೇಕ ಜನತೆ ಭಾಗವಹಿಸುವುದನ್ನು ಖಾತರಿ ಮಾಡಲಾಗುತ್ತದೆ. ಇದರಿಂದ ಆಡಳಿತ ಯಂತ್ರದ ಅಥವಾ ಕಟಾಚಾರಕ್ಕೆ ನಡೆಯುವ ಗ್ರಾಮ ಸಭೆಗಳ ಕಣ್ಣಿಗೆ ಬೀಳದ ಬಡತನದ ಅಂಚಿನಲ್ಲಿರುವ ಜನವಿಭಾಗಗಳ ಸಮಸ್ಯೆಗಳನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಲು ಸಾಧ್ಯವೆನಿಸಿದೆ.

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಪ್ರತಿಯೊಬ್ಬರಿಗೆ ದೊರೆಯುವ ತಲಾ ಭೂಮಿಯು ಅತಿ ಕಡಿಮೆಯಿರುವುದರಿಂದ, ಕೃಷಿಯಲ್ಲಿ ವೈವಿಧ್ಯತೆಯ ಬೆಳೆ ಆಳವಡಿಸುವುದು, ಬೆಳೆ ಇಳುವರಿ ಹೆಚ್ಚಿಸುವುದು, ಕೈಗಾರಿಕೆ ಮತ್ತು ಸೇವಾ ವಲಯಗಳ ಆದ್ಯತೆಗಳನ್ನು ಪೂರೈಸುವಲ್ಲಿ ರಾಜ್ಯ ಸರ್ಕಾರದ ಪ್ರಯತ್ನಗಳಿಗೆ ಬೆಂಬಲವಾಗಿ ನಿಲ್ಲುವುದು ಪಂಚಾಯತ್ ಸಂಸ್ಥೆಗಳ ಪ್ರಮುಖ ಧ್ಯೇಯವಾಗಿದೆ. ಇದನ್ನು ಸಾಧಿಸಲು ಸರ್ಕಾರಿ ಇಲಾಖೆಗಳು, ಸರ್ಕಾರೇತರ ಸಂಸ್ಥೆಗಳು ಮತ್ತು ವೃತ್ತಿಪರ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ಪಂಚಾಯತ್ ಸಂಸ್ಥೆಗಳು ಹೊಸ ತಂತ್ರಜ್ಞಾನ ಮತ್ತು ಪರಿಣತಿಗಳನ್ನು ಜನತೆಗೆ ವರ್ಗಾಯಿಸುತ್ತಾ ಅವರ ಸಾಮರ್ಥ್ಯವನ್ನು ಇಮ್ಮಡಿಗೊಳಿಸುತ್ತಿವೆ.



ಇದಲ್ಲದೆ ಪಂಚಾಯತ್‌ಗಳ ಪ್ರಮುಖ ಆದ್ಯತಾ ಕೆಲಸಗಳೆಂದರೆ ರಸ್ತೆ, ನೀರಾವರಿ, ನೀರು ಸರಬರಾಜು, ಅರಣ್ಯ ಬೆಳೆಸುವುದು, ಮಾನವ ಸಂಪನ್ಮೂಲ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆ ಒದಗಿಸುವುದು.

ಇತ್ತೀಚಿನ ವರ್ಷಗಳಲ್ಲಿ ಪಂಚಾಯಿತಿಗಳ ಕೆಲಸ:

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ಸಾಧ್ಯವಿರದ ಸುಮಾರು 17 ಲಕ್ಷ ಮಕ್ಕಳಿಗೆ ಸಮುದಾಯವೇ ನಡೆಸುವ 17,?92 ಮಕ್ಕಳ ಶಿಕ್ಷಣ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳು ನಡೆಸುತ್ತಿವೆ. ನೈರ್ಮಲ್ಯ ಯೋಜನೆಯಲ್ಲಿಯೂ ಸಹ ವಿಶಿಷ್ಟವಾದ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆರು ಜಿಲ್ಲೆಗಳಲ್ಲಿ ಶೇ. 100 ರಷ್ಟು ನೈರ್ಮಲ್ಯ ಸೌಕರ್ಯಗಳನ್ನು (ಕಸ ವಿಲೇವಾರಿ, ಶೌಚಾಲಯ, ಇತ್ಯಾದಿ) ಸಾಧಿಸಲಾಗಿದ್ದು, ಇನ್ನುಳಿದ ಜಿಲ್ಲೆಗಳಲ್ಲಿಯೂ ಕೆಲಸ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ. ಎಲ್ಲ ಗ್ರಾಮ ಪಂಚಾಯಿತಿಗಳ ನೀರು ಸರಬರಾಜು ಕೇಂದ್ರಗಳನ್ನು ರಾಜ್ಯದೆಲ್ಲೆಡೆ ಸ್ಥಾಪಿಸಲಾಗಿರುವ ನೀರು ಪರೀಕ್ಷಾ ಕೇಂದ್ರಗಳೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ. ಹಲವಾರು ಗ್ರಾಮ ಪಂಚಾಯಿತಿಗಳು ತಾವೇ ಡಾಕ್ಟರುಗಳನ್ನು ನೇಮಿಸಿಕೊಂಡು ಕ್ಲಿನಿಕ್‌ಗಳನ್ನು ನಡೆಸುತ್ತಿದ್ದು, ಆಮೂಲಕ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಡೆಸಲಾಗುತ್ತಿದೆ. ಪಂಚಾಯಿತಿಗಳು ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳಲ್ಲಿ 6-36 ತಿಂಗಳೊಳಗಿನ ಮಕ್ಕಳಿಗಾಗಿ ಸರಬರಾಜಾಗುತ್ತಿರುವ ಆಹಾರ ಪರೀಕ್ಷೆಗಾಗಿ ವಿಚಕ್ಷಣಾ ದಳವನ್ನು ಹೊಂದಿವೆ.

ಪಂಚಾಯಿತಿಗಳಿಗೆ ಅತ್ಯವಶ್ಯ ನೇಮಕಾತಿ ಮಾಡಿಕೊಂಡು, ಉಪಗ್ರಹ-ಆಧಾರಿತ ಸಂವಹನ ವ್ಯವಸ್ಥೆಯ ಮೂಲಕ ದೂರ ಶಿಕ್ಷಣ ತರಬೇತಿ ಮತ್ತು ಮಾಹಿತಿ ತಂತ್ರಜ್ಞಾನ-ಆಧಾರಿತ ವ್ಯವಸ್ಥೆಯ ಮೂಲಕ ಅವುಗಳನ್ನು ನೈಜ ಮಾಹಿತಿ ಕೇಂದ್ರವಾಗಿಯೂ ಹಾಗೂ ಜನಜೀವನದ ಬೆನ್ನೆಲುಬಾಗಿಯೂ ಪರಿವರ್ತಿಸಲಾಗಿದೆ.

ಸದೃಢ ಪಂಚಾಯಿತ್ ಸಂಸ್ಥೆಗಳು ನೀಡಿರುವ ಫಲಿತಾಂಶ:

ಪಂಚಾಯಿತಿಗಳು ಬಡ ಜನಪರ ಧೋರಣೆಯ ಆಧಾರದಲ್ಲಿ ಜಾರಿಗೊಳಿಸಿರುವ ಭೂ ಸುಧಾರಣೆ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಗಳು ರಾಜ್ಯದ ಗ್ರಾಮೀಣ ಸಮಾಜದ ಮೇಲೆ ಪರಿಣಾಮ ಬೀರಿವೆ. ಇದರಿಂದ ಬಡತನ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬಹು ಬೇಗನೆ ಕೆಳಗಿಳಿದಿದೆ. 1973-76ರಲ್ಲಿ ಅಖಿಲ ಭಾರತ ಗ್ರಾಮೀಣ ಬಡತನವು ಶೇ. 56 ರಷ್ಟಿದ್ದರೆ, ಪಶ್ಚಿಮ ಬಂಗಾಳದ ಶೇ. 73 ರಷ್ಟು ಜನತೆ ಬಡತನ ರೇಖೆಯಿಂದ ಕೆಳಗಿದ್ದರು. 2004-05 ರ 61ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ ಪ್ರಕಾರ ದೇಶದ ಗ್ರಾಮೀಣ ಬಡತನವು 1983ರಲ್ಲಿ ಶೇ. 45.76 ರಿಂದ 2004-05ರಲ್ಲಿ ಶೇ. 29.18ಕ್ಕೆ ಇಳಿದಿತ್ತು, ಪಶ್ಚಿಮ ಬಂಗಾಳದ್ದು ಅದೇ ಅವಧಿಯಲ್ಲಿ ಶೇ. 61.56ರಿಂದ ಶೇ. 28.49ಕ್ಕೆ ಇಳಿದಿತ್ತು. ಅಂದರೆ ಬಡತನ ಇಳಿಮುಖ ಪ್ರಮಾಣ ದೇಶ ಮಟ್ಟದಲ್ಲಿ

ದುಡಿಯುವ ಜನತೆಯ ಕೈಯಲ್ಲಿ ಅಧಿಕಾರ

ಪುಟ 11 ರಿಂದ

ಶೇ. 16.6, ಪಶ್ಚಿಮ ಬಂಗಾಳದಲ್ಲಿ ಶೇ. 35.1. ರಾಜ್ಯದ ಆರ್ಥಿಕದ ಪ್ರಾಥಮಿಕ ವಲಯದಲ್ಲಿ


ಪಂಚಾಯತ್ ಸಭೆಯ ನೋಟ

ಪಂಚಾಯತ್‌ಗಳು ಪ್ರಮುಖ ಪಾತ್ರವಹಿಸದಿದ್ದಲ್ಲಿ ಈ ಪರಿವರ್ತನೆ ಸಾಧ್ಯವಾಗುತ್ತಿರಲಿಲ್ಲ.

ಭೂ ಹಂಚಿಕೆಯಾದ ಮೇಲೆ, ಕೃಷಿಯಲ್ಲಿ ರೈತರು ಯಶಸ್ಸು ಸಾಧಿಸಬೇಕಾದರೆ ಅವರಿಗೆ ಅತ್ಯವಶ್ಯವಾದ ನೀರಾವರಿ, ಸಾಲ, ಸುಧಾರಿತ ಬೀಜ, ರಸಗೊಬ್ಬರ, ಮಾರುಕಟ್ಟೆ ಸೌಲಭ್ಯ, ಇತ್ಯಾದಿಗಳು ಬೇಕು. ಭೂಮಿ ಮತ್ತು ಗೇಣಿ ಸುಧಾರಣೆಯೊಂದಿಗೆ, ಕಳೆದ ಮೂರು ದಶಕಗಳಲ್ಲಿ ನೀರಾವರಿಯನ್ನು ಶೇ. 32ರಿಂದ ಶೇ. 70ರಷ್ಟು ಭಾಗಕ್ಕೆ ವಿಸ್ತರಿಸಲಾಗಿದೆ. ಬೆಳೆ ಸಾಂದ್ರತೆಯಲ್ಲಿ ರಾಜ್ಯವು ಇಡೀ ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದೆ. ಅತಿ ಹೆಚ್ಚು ಇಳುವರಿ ನೀಡುವ ಭತ್ತವನ್ನು ಶೇ. 28ರಿಂದ ಶೇ. 96ರಷ್ಟು ಭತ್ತ ಬೆಳೆಯುವ ಪ್ರದೇಶಗಳಿಗೆ ವಿಸ್ತರಿಸಲಾಗಿದೆ. ಎಲ್ಲ ಬೆಳೆಗಳನ್ನು ಪರಿಗಣಿಸಿದರೆ ಅದು ಶೇ. 83. ಪಶ್ಚಿಮ ಬಂಗಾಳದಲ್ಲಿ ಠೇವಣಿಗಿಂತ ಸಾಲ ವಿತರಿಸುವ ಪ್ರಮಾಣವೇ ಜಾಸ್ತಿಯಿದ್ದರೂ, ಕೃಷಿ ವಲಯದಲ್ಲಿ ಮೂರನೇ ಎರಡರಷ್ಟು ಸಹಕಾರಿ ಸಾಲವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಲಭಿಸುತ್ತಿದೆ. ಇದರಿಂದ ವರ್ಗ ಶಕ್ತಿಗಳ ಬಲಾಬಲ ಬದಲಾಗಿದ್ದು, ಈ ವಿಭಾಗದ ಜನತೆಯೇ ಸಹಕಾರಿ ಮತ್ತು ಪಂಚಾಯತಿ ಸಂಸ್ಥೆಗಳಲ್ಲಿ ಪ್ರಾಬಲ್ಯ ಹೊಂದಿದ್ದಾರೆ. ಆಮೂಲಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಸರ್ಕಾರಿ ಯೋಜನೆಗಳಲ್ಲಿ ವರ್ಗ ದೃಷ್ಟಿಕೋನವು ಬದಲಾಗಿದೆ.

1993-94 ರಿಂದ 2003-04 ಅವಧಿಯಲ್ಲಿ ಕೃಷಿಯಲ್ಲಿ ಪಶ್ಚಿಮ ಬಂಗಾಳವು ದೇಶದಲ್ಲಿಯೇ ಅತಿ ಹೆಚ್ಚು ಶೇ. 3.64 ಬೆಳವಣಿಗೆ ದರ ಹೊಂದಿದೆ. ಸಣ್ಣ ಮತ್ತು ಅತಿ ಸಣ್ಣ ರೈತರು ಶೇ. 85ರಷ್ಟು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವುದರಿಂದ ಲಾಭ ಅವರಿಗೇ ತಲುಪಿದೆ. ಇದರೊಂದಿಗೆ ಬಡತನ ನಿರ್ಮೂಲನೆಯೂ ಆಗಿರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕಾ ಸರಕುಗಳಿಗೆ ಮಾರುಕಟ್ಟೆಯು ರೂ. 20,000 ಕೋಟಿಗೂ ಮೀರಿ ವಿಸ್ತರಣೆಯಾಗಿದೆ. ಅತಿ ಹೆಚ್ಚು ಉತ್ಪಾದನೆ ಯಾಗುತ್ತಿರುವ ಭತ್ತ, ಸೆಣಬು, ತರಕಾರಿ, ಮೀನು ಅಥವಾ ಬಡತನ ನಿರ್ಮೂಲನೆ, ನೈರ್ಮಲ್ಯ ಯೋಜನೆ ಜಾರಿಗೊಂಡಿರುವ ಅತಿ ಹೆಚ್ಚು ಹಳ್ಳಿಗಳು, ಶಾಲೆಗಳಿಗೆ ಅತಿ ಹೆಚ್ಚು ಹೆಣ್ಣು ಮಕ್ಕಳ ನೇಮಕಾತಿ, ಮಕ್ಕಳ ಸಾವಿನ ಕನಿಷ್ಟ ದರ, ಇತ್ಯಾದಿಗಳ **ಎಲ್ಲ ಹೆಗ್ಗಳಿಕೆಯ ಮೂಲವನ್ನು ಹುಡುಕಹೊರಟರೆ ನಾವು ಕೊನೆಗೆ ತಲುಪುವುದು ಭೂಸುಧಾರಣೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ವಹಿಸಿರುವ ಪಾತ್ರದೆಡೆಗೆ.**

ಆಯ್ದ ಸಾರ ಸಂಗ್ರಹ : ಜಯ

ಅಭ್ಯರ್ಥಿಗಳಾಗಲು ಅರ್ಹತೆಗಳೇನು?

ಪುಟ 10 ರಿಂದ

ನಿಮ್ಮದ್ದೇ ನೋಟು' ಇದು ಎಲ್ಲೆಡೆ ಸಿಪಿಐ(ಎಂ) ಅಭ್ಯರ್ಥಿಗಳಿಂದ ಕೇಳುವ ನಿತ್ಯ ಘೋಷಣೆ. ಇದನ್ನು ಹೇಳಿಕೊಂಡು ಹುಮ್ನಾಬಾದ್‌ನ ಮನೆ ಮನೆಗೆ ತೆರಳಿದರಂತೆ. 'ಏನಂತೀರಿ? ರೊಕ್ಕ ಕೊಟ್ರು, ರೊಟ್ಟೀ ಕೊಟ್ರು' ಈ ರೊಕ್ಕ ರೊಟ್ಟಿ ನಮ್ಮರಟ್ಟೆಯ ಕಸುವು' ಎನ್ನುತ್ತಾರೆ ಸಿಪಿಐ(ಎಂ) ನಾಯಕ ನೀಲಾ. 'ಮೊನ್ನೆ ನಮ್ಮ ಸಭೆಗೆ ಸಾವಿರದ ಮೇಲೆ ಜನ ಸೇರಿದರು. ಆದರೆ ಮರುದಿನದ ಕಾಂಗ್ರೆಸ್‌ನ ಧರ್ಮಸಿಂಗ್ ಸಭೆಗೆ ಎರಡುನೂರು ಹೀಗೆ ಹೇಳುವಾಗ ಜನರದ್ದೇ ಬಲ, ಒಲವು.

ಇದು ಒಂದೆರಡು ಕಡೆಗಳಲ್ಲ. ಬಹುತೇಕ ಸಿಪಿಐ(ಎಂ) ಸ್ಪರ್ಧಿಸಿದ ಕಡೆ ಇದೇ ಸ್ಥಿತಿ, ಅಭ್ಯರ್ಥಿಗಳದ್ದು.

ಭಿನ್ನಪಕ್ಷ, ಭಿನ್ನ ಸಂಸ್ಕೃತಿ ಎಂದೆಲ್ಲಾ ಹೇಳಿಕೊಳ್ಳೋ ಬಿಜೆಪಿ ಭಿನ್ನವೋ ಅಥವಾ ಕೆಂಬಾವುಟ ಹಿಡಿದ್ದ ಕಮ್ಯೂನಿಸ್ಟ್ ಪಕ್ಷವೋ.........

○

ತಿಪ್ಪೆಯನ್ನರಸಿ...

ಪುಟ 2 ರಿಂದ

ಬಂದಿದ್ದ ತಲಾಟಿ ಮತ್ತು ಕಾರ್ಯದರ್ಶಿಗಳು ಪರಿಹಾರದ ಪಟ್ಟಿಯಲ್ಲಿ 'ತಿಪ್ಪೆ' ಸೇರಿಸಲು ಹಿಂದೇಟು ಹಾಕಿದ್ದರು. ಛಲ ಬಿಡದ ಗಂಗವ್ವ ಅಲ್ಲಿ ಕಂಡ ಸಿಬ್ಬಂದಿಗಳಿಗೆಲ್ಲ ದುಂಬಾಲು ಬಿದ್ದಳು. ತಹಸೀಲ್ದಾರ ಸಾಹೇಬರು ತುಂಬ ಉದಾರ ಮನಸ್ಸಿನಿಂದ ಗಂಗವ್ವನೊಂದಿಗೆ ಮಾತೇನೋ ಆಡಿದರು. ಆದರೆ, ತಿಪ್ಪೆಗೆ ಪರಿಹಾರ ಬೇಕೆಂದಾಗ, ಕರ್ಚೀಫಿನಿಂದ ವಿಶಾಲ ಹಣೆ ಒರೆಸಿಕೊಂಡು ಪಕ್ಕದಲ್ಲಿದ್ದ ಧಡೂತಿ ಮೈನ ಮನುಷ್ಯನಿಗೆ 'ಈ ಮಂದಿ ಸರಕಾರಿ ರೊಕ್ಕ ಪುಗಸಟ್ಟೆ ಹೊಡೀಬೇಕಂತ ಏನೇನೋ ಹಿಕ್ಮತ್ ಹುಡುಕ್ತಾರ. ತಿಪ್ಪಿ ಕಳದದ ಅಂತ ಬಂದಾವ್ಳು, ಸುಮ್ನಿದ್ರ ಸಂಡಾಸಕನೂ ಪರಿಹಾರ ಬೇಕಂತಾರ' ಅಂದು ಕೆಂಪಾದ ಮೂಗನ್ನು ತಿಕ್ಕಿಕೊಂಡು ನಕ್ಕನು. ಧಡೂತಿ ಮೈಯ್ಯು ತಕ್ಷಣ ಅಲುಗಾಡಿ 'ತಿಪ್ಪಿ ಅಂದ್ರ ಬಂಗಾರದ ಖಜಾನಿ ಅನ್ಕೊಂಡಾಳ ಮುದುಕಿ' ಅಂತ ಗಹಗಹಿಸಿದಾಗ ಗಂಗವ್ವನಿಗೆ ತಲೆ ಗರಂ ಆಗಿ ಸಿಟ್ಟಿನಿಂದ ಹೆಜ್ಜೆಯಿಡುತ ಹೊರಗೆ ಬಂದಳು. 'ನನ್ನ ತಿಪ್ಪಿ ಅಂದ್ರ ಏನ್ ತಿಳ್ಕೊಂಡಾರ' ಇವ್ರ ಹೊಟ್ಟಿಗುಂಬಾ ಅನ್ನಾ ಬೆಳದದ ನನ್ ತಿಪ್ಪಿ ಉಂಡ ಗಂಗಾಳದಾಗ ಉಗಳಾ ಮಂದಿ ಹುಟ್ಟಿದ ಸಲ್ಪಾಕೇ ಹಿಂತಾ ಕಾಲಾ ಬಂದಾವ. ಇವರ ಹೆಣಾ ಎತ್ತಿ, ನನ್ ತಿಪ್ಪಿ ಮುಂದ ಇವ್ರೇನು? ತಿಪ್ಪಿ ಅಂದ್ರ ಬಂಗಾರ ಖಜಾನಿ ಏನು ಅಂತಾನ. ಇಂವ್ನ ಕೈಯ್ಯಾಗ ಬಂಗಾರದ ಉಂಗ್ರಗೋಳು ತಿಂತಾನೇನ ಹೊಟ್ಟಿಗಿ?' ಗಂಗವ್ವ ಲಟಿಗೆ ಮುರಿದು ಕ್ಯಾಕರಿಸಿ ಹೇಸಿ ಕಂಡಂತೆ ಥೂ ಅಂತ ಉಗುಳಿದಳು.

ಗಂಗವ್ವಗೆ ತಿಪ್ಪೆ ನೆನಪಾಗತೊಡಗಿತು. 'ತನ್ನ ಹೊಟ್ಟಿ ತುಂಬಿಸಿದ್ದು, ಊರಿಗೆಲ್ಲ ಹುರಿದು ತಿಂಬಾ ಭೀಮರಾಯನಂಥ ಸಾವ್ಕಾರನಿಗಿ ಎದರಸಲಾಕ ಬಲ ಕೊಟ್ಟಿದ್ದು, ಎಲ್ಲಕಿನಾ ಹೆಚ್ಚಿಗಿ ಬದುಕು ಜೈಸಲಾಕ ಛಲ ತುಂಬಿದ್ದು ತಿಪ್ಪೆ. ಯಾರೆಲ್ಲ ಹೊಲಸಂದರೂ ತನ್ನ ಹೊಟ್ಟೆಯ ಅನ್ನಕ್ಕ ಜೀವ ಆಗಿದ್ದು ಇದೇ ತಿಪ್ಪಿ ಅಲ್ಲೇನು?'

ಮರುದಿನ ಭೀಮರಾಯನೂ ತನ್ನ ಹಗೇವುಗಳಲ್ಲಿನ ದವಸ-ಧಾನ್ಯ ಕೊಚ್ಚಿ ಹೋಗಿದೆ ಹಾಗೂ ಬೀಳದ ಮನೆಗೆ ಬಿದ್ದಿದೆ ಎಂದು ಬರೆಯಿಸಿ 'ಪಕ್ಕಾ' ಮನೆಗೆ ಸಿಗಬೇಕಾದ ಪರಿಹಾರದ ಚೆಕ್ಕುಗಳನ್ನು ಪಡೆದನು. ಅಲ್ಲೇ ಗಿಡದ ಬಾಜು ಕೂತಿದ್ದ ಗಂಗವ್ವ ಗಪ್ಪೆಂದು ಹೊಲಸು ವಾಸನೆ ರಾಚಿದಂತಾಗಿ ಮೂಗು ಮುಚ್ಚಿಕೊಂಡಳು. ಭೀಮರಾಯನ ಹಿಂದೆಯೇ ಅವನಂಥವರು ಅನೇಕರು ಚೆಕ್ಕುಗಳ ಸಮೇತ ಠಳಾಯಿಸುತ್ತಿದ್ದರು. ವಾಸನೆ ಮಾತ್ರ ಸುಳಿ-ಸುಳಿದು ಬರುತ್ತಲೇ ಇತ್ತು.

ಪರಿಹಾರ ಕೊಡಿಸುವವವನೊಬ್ಬ ಗಂಗವ್ವನ ತಿಪ್ಪೆಗೂ ಪರಿಹಾರ ಕೊಡಿಸುವುದಾಗಿ ಹೇಳಿ ಅವಳಿಂದ ನೂರಿನ್ನೂರು ವಸೂಲಿ ಮಾಡಿದ್ದ. ಹೇಗಾದರೂ ಒಂದಿಷ್ಟು ಪರಿಹಾರ ಸಿಕ್ಕರೆ ತನಗೆ ಮಾತ್ರ ಅಲ್ಲ ಸರೋಜಕ್ಕನಂಥವರ ತಿಪ್ಪೆಗೂ ಸಿಗುತ್ತದೆ ಅಂದುಕೊಂಡು ಗಂಗವ್ವ ಎರಡು ದಿನಪೂರ್ತಿ ತಹಸೀಲ ಕಚೇರಿಯ ಆವರಣದಲ್ಲಿಯೇ ಠಿಕಾಣಿ ಹೂಡಿದಳು. ಪರಿಹಾರ ಕೊಡಿಸುವವ ಹೇಳಿದ 'ಗಂಗವ್ವಕ್ಕ ಹೆಂಗಾದರೂ ರೊಕ್ಕ ಬೇಕು ಹೌದಿಲ್ಲ? ತಿಪ್ಪಿಗಿ ಅಂದ್ರ ಸಿಗಲ್ಲ. ಚಲೋ ಆರ್‌ಸಿಸಿ ಮನಿ ಇತ್ತು ಬಿದ್ದದ ಅಂತ ಹೇಳು ಭಾಳ ರೊಕ್ಕ ಸಿಗ್ತಾವ'ಅಂತ.

ಗಂಗವ್ವ, 'ಸುಳ್ಳ ಹೇಳಲಾಕ ನಾ ಏನ್ ಸಾವ್ಕಾರ್ ಭೀಮರಾಯ ಅಲ್ಲ. ತಿಪ್ಪಿ ಹರದು ಹ್ವಾಗ್ಯಾದ. ಪರಿಹಾರ ನನ್ ತಿಪ್ಪಿಗಿ ಬೇಕು' ಅಂತ ಪ್ರತಿಪಾದಿಸಿದಳು.

ಪರಿಹಾರ ಕೊಡಿಸುವವನು ದಿನಪೂರ್ತಿ ಕಾಯ್ದರೂ ಬರಲಿಲ್ಲ. ಗಂಗವ್ವಗೆ ಒಂದು ನಮೂನೆಯ ಹಠ ಹಡೆಯೆತ್ತತೊಡಗಿತು. ಅವಳ ಕಣ್ಮುಂದೇ ಎಷ್ಟೊಂದು ಚೆಕ್ಕುಗಳು ಹರಿದಾಡಿದವು. ಜೊತೆಗೆ ಸಹಿಸಲಾಗದ ವಿಷಕಾರಿ ವಾಸನೆ. ಅವಳ ಸಹನೆಯ ಕಟ್ಟೆಯೊಡೆಯುತ್ತಿತ್ತು. ಆವರಣದ ತುಂಬ ಮಳೆಯಲ್ಲಿ ನೆನೆದು ಕುಸಿದು ಹೋದ ಬಟಾಬಯಲಿನ ಊರುಗಳಿಂದ ಬಂದ ಅಸಂಖ್ಯಾತ ಜನ ತೊಟ್ಟಿಕ್ಕುವ ಕಣ್ಣೀರ ಹನಿಗಳ ಸ್ವರೂಪದಲ್ಲಿ ಹರಡಿಕೊಂಡಿದ್ದರು. ಪರಿಹಾರದ ವ್ಯಾಪ್ತಿಗೆ ಬಾರದ ಸಂಕಟಗಳು ಹೊಳೆಯಂತೇ ಅವರ ಮುಂದೆ ಚೆಲ್ಲಾಡಿದ್ದವು. ಗಂಗವ್ವನ ತಲೆಯೆಂಬುದು ಸಹಸ್ರ ಹೋಳಾಗಿ ಹೋಗುವ ಮುನ್ನ ಈ ತಲೆಕೆಡಿಸುವ ವಾಸನೆ ಬರುತ್ತಿರುವುದೆಲ್ಲಿ ಎಂದು ಪತ್ತೆ ಹಚ್ಚಲು ಹೊರಟಳು. ಆ ವಾಸನೆಯು ಕಚೇರಿಯ ಒಳಗಿನಿಂದ ಬರುತ್ತಿತ್ತು. ಭೂತದ ಬಾಲದಂತೆ ಸುರುಳಿಸುರುಳಿಯಾಗಿ. ಒಳಗೆ ಬೆಳ್ಳನೆ ಜುಬ್ಬಾಧಾರಿಗಳು. ಗುಡಾಣ ಹೊಟ್ಟೆಯವರು, ಭೀಮರಾಯ, ಅಧಿಕಾರಿಗಳು ಹೀಗೆ ಯಾರೆಲ್ಲ ಸೇರಿದ್ದರು. ಅವರ ಸಂಖ್ಯೆ ಹೆಚ್ಚಾದಂತೆ ವಾಸನೆ ಇನ್ನಷ್ಟು ಗಬ್ಬೆನ್ನುತ್ತಿದೆ ಅನಿಸಿತು. ಏನು ಮಾಡುವುದು? ಗಂಗವ್ವ ಚಿಂತಿಸಿದಳು. ಇಂಥ ಗಬ್ಬು ಹೊಲಸನ್ನು ಸಹಿಸಲು ಸಾಧ್ಯವಿಲ್ಲದಂತಾಗಿ ಭರಭರನೇ ಎದ್ದವಳೇ ತಹಸೀಲ ಕಚೇರಿಯ ಬಾಗಿಲನ್ನು ಸರ್ರನೇ ಎಳೆದು ಚಿಲಕ ಹಾಕಿದಳು. ಸತ್ತೇ ಹೋಗುವಂಥ ವಾಸನೆಯಿಂದ ಥಟ್ಟನೇ ಬಚಾವಾದ ಖುಷಿಯಲ್ಲಿ ಗಂಗವ್ವ ಬಾಳಿಗಂಟಿಗೆ ಸಿಕ್ಕಿಸಿದ್ದ ಎಲೆ-ಅಡಿಕೆಯ ಚಂಚಿ ತೆಗೆದು, ಹೆಬ್ಬೆರಳಿನರ್ಧದ ಎಲೆಗೆ ಉಗುರಿನಷ್ಟು ಸುಣ್ಣ ಸವರಿ, ನಡುವಲ್ಲಿ ಅಡಿಕೆ ಮುಡಿಸಿ ನೀಟಾಗಿ ಮಡಿಚಿ ಹಲ್ಲುಗಳ ನಡುವಿಗೆ ಇಟ್ಟುಕೊಂಡು ಜಗಿದಳು. ಎಲೆಯು ಜಗಿದ ಪರಿಗೆ ಸೂರ್ಯ ಬರುವ ಹೊತ್ತಿನ ಮುಗಿಲ ಕೆಂಪಿನಂಥ ಬಣ್ಣವು ಬಾಯ್ತುಂಬ ಹರಿದಾಡಿತು. ಗಂಗವ್ವ ಎರಡು ಬೆರಳುಗಳನ್ನು ಎತ್ತಿ, ವಿಜಯದ ಸಂಕೇತದಂತೆ ತಿರುಗಿಸಿ ತುಟಿಗಳ ನಡುವಿಗೆ ತಂದು ಒಳಗಿರುವ ರಸವನ್ನು ಪಿಚಕ್ಕೆಂದು ಉಗುಳಿದಳು. ನೆಲದ ಮಣ್ಣಿಗೆ ಅದ್ಭುತ ಕಲಾತ್ಮಕ ರಂಗೋಲಿ ಬರೆದಂತೆ ಕೆಂಪೆಂಜಲು ಚೆಲ್ಲಾಡಿತು.


ಕಚೇರಿಯ ಅಂಗಳದ ತುಂಬ ಪರಿಹಾರಕ್ಕಾಗಿ ಜನರ ಕೂಗಾಟ ಮುಗಿಲು ಭೇದಿಸುತ್ತಿತ್ತು. ನಾನಾ ನಮೂನೆಯ ಕೂಗುಗಳ ನಡುವೆ ಗಂಗವ್ವಳ ತಿಪ್ಪೆಯ ಕೂಗು ಆಯೋಮಯವಾಗತೊಡಗಿತು. ಹೊಲಸು ನಾತ ಮತ್ತು ಕಿವಿಗಡಚಿಕ್ಕುವ ಗದ್ದಲದಿಂದ ತಪ್ಪಿಸಿಕೊಂಡು ಗಂಗವ್ವ ತನ್ನ ಕಮ್ಮಗಿನ ವಾಸನೆಯ ತಿಪ್ಪೆಯನ್ನು ಪುನಃ ಜಮಾಯಿಸಲು ಬೀದಿಗಿಳಿದಳು.

○

ವ್ಯವಸ್ಥೆಗೆ ನಮಸ್ತೆ

ಸಕ್ಕರೆಯು ಹಾಗಿರಲಿ ಬೆಲ್ಲವೂ ತುಟ್ಟಿ
ಕಾರಣವ ಬಲ್ಲಿರಾ ಆ ಕಳ್ಳಬಟ್ಟಿ
ಬಡಜನತೆಗಾಗಿಯೇ ಎಲ್ಲ ವ್ಯವಸ್ಥೆ
ಓ ವ್ಯವಸ್ಥೆಯೇ ನಿನಗೆ ನನ್ನ ನಮಸ್ತೆ

\- ವಿಡಂಬಾರಿ




2ಜಿ ಹಗರಣ : ಸರಕಾರೀ ಬ್ಯಾಂಕುಗಳ ಹತ್ತು ಸಾವಿರ ಕೋಟಿ ರೂ. ಸಾಲ

ತನಿಖೆ ನಡೆಸಲು ಸಿಬಿಐಗೆ ಸುಪ್ರೀಂಕೋರ್ಟ್ ಆದೇಶ

2ಜಿ ತರಂಗಾಂತರ ಹಗರಣದ ಮೇಲೆ ಜಂಟಿ ಸಂಸದೀಯ ಸಮಿತಿಯ ರಚನೆಯನ್ನು ತಪ್ಪಿಸಲು ಯುಪಿಎ ಸರಕಾರ ಮತ್ತು ಕಾಂಗ್ರೆಸ್ ಹೆಣಗುತ್ತಿರುವಂತೆಯೇ ಮತ್ತು ಯುಪಿಎ ಪಾಲುದಾರ ಪಕ್ಷ ಡಿಎಂಕೆ ಇದರಲ್ಲಿ ಹಗರಣವೇ ಏನೂ ಇಲ್ಲ ಎಂದು ಹೇಳುತ್ತಿರುವಂತೆಯೇ, ಸುಪ್ರಿಂ ಕೋರ್ಟ್ ಸಿಬಿಐಗೆ ಮತ್ತು ಜಾರಿ ನಿರ್ದೇಶನಾಲಯ(ಇಡಿ)ಕ್ಕೆ 2008ರಲ್ಲಿ ಲೈಸೆನ್ಸ್ ಪಡೆದ ಕಂಪನಿಗಳಿಗೆ ಸಾರ್ವಜನಿಕ ವಲಯದ ಬ್ಯಾಂಕುಗಳು ಸುಮಾರು 10000 ಕೋಟಿ ರೂ. ಸಾಲ ಕೊಟ್ಟಿರುವ ಬಗ್ಗೆ ತನಿಖೆ ನಡೆಸಿ, ಈ ಸಾಲ ಒಪ್ಪಂದಗಳಿಗೆ ದೂರಸಂಪರ್ಕ ಅಧಿಕಾರಿಗಳು ಸಹಿ ಹಾಕಿದ್ದಾರೆಯೇ, ಹಾಕಿದ್ದರೆ ಯಾರ ಅನುಮತಿಯಿಂದ ಎಂದು ಪರಿಶೀಲಿಸುವಂತೆ ಹೇಳಿದೆ. ಫೆಬ್ರುವರಿ 10ರಂದು ಮುಂದಿನ ವಿಚಾರಣೆಯ ಮೊದಲು ಈ ನಿಟ್ಟಿನಲ್ಲಿ ಕೆಲಸದ ಪ್ರಗತಿ ವರದಿಯನ್ನು ಸಲ್ಲಿಸಬೇಕೆಂದೂ ಅವಕ್ಕೆ ಹೇಳಲಾಗಿದೆ.

ದೇಶದ ಕಾವಲು ಸಂಸ್ಥೆಗಳಾದ ಕೇಂದ್ರೀಯ ವಿಚಕ್ಷಣ ಆಯೋಗ(ಸಿವಿಸಿ) ಮತ್ತು ಮಹಾಲೆಕ್ಕ ಪರಿಶೋಧಕರ ಕಚೇರಿ(ಸಿಎಜಿ) ಸಂಗ್ರಹಿಸಿದ ಮಾಹಿತಿಯನ್ನು ನೋಡಿದರೆ ಈ ವಿಷಯದ ಆಮೂಲಾಗ್ರ ತನಿಖೆ ಅಗತ್ಯವಾಗಿದೆ ಎಂದು ದೇಶದ ಮೇಲುನೋಟಕ್ಕೇ ಅನಿಸುತ್ತಿದೆ, 2001ರಲ್ಲಿ ಈ ಟೆಲಿಕಾಂ ಧೋರಣೆಯ ಆರಂಭದಿಂದಲೆ ತನಿಖೆಯನ್ನು 'ಪ್ರಭುತ್ವದ ಯಾವುದೇ ನಿರ್ವಾಹಕರು, ಸಂಸ್ಥೆ ಮತ್ತು ಸಾಧನದ ಯಾವುದೇ ಸ್ಥಾನಮಾನದ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗದೆ' ನಡೆಸಬೇಕು ಎಂದು ಸುಪ್ರಿಂ ಕೋರ್ಟ್ ಹೇಳಿದೆ. ಈ ಸುಪ್ರಿಂ ಕೋರ್ಟ್ ಆದೇಶ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಎರಡಕ್ಕೂ ಕಸಿವಿಸಿ ಉಂಟು ಮಾಡಿದ್ದರೂ ಇಬ್ಬರೂ ಅದನ್ನು ಸ್ವಾಗತಿಸಬೇಕಾಗಿ ಬಂದಿದೆ.

ಈ ನಡುವೆ ದಿಲ್ಲಿಯಲ್ಲಿ ನಡೆದಿರುವ ಭಾರತ ರಾಷ್ಟ್ರೀಯ ಕಾಂಗ್ರೆಸಿನ 83ನೇ ಅಧಿವೇಶನ ಭ್ರಷ್ಟಾಚಾರದ ಪ್ರಶ್ನೆಯನ್ನು ತಪ್ಪಿಸಲಾಗದೆ ಅದರ ಮೇಲೆ ಭಾರೀ ಭಾರೀ ಭಾಷಣಗಳು ಕೇಳಬಂದವು. 'ಅಧಿಕಾರದಲ್ಲಿದ್ದಾಗ ನೀವೂ ಮಾಡಿದ್ದೀರಾ, ನಿಮಗಿಂತ ನಮ್ಮ ದಾಖಲೆ ಉತ್ತಮ, ನಿಮಗೆ ನೈತಿಕ ಹಕ್ಕಿಲ್ಲ' ಎಂದು ಕಳೆದ ತಿಂಗಳು ಕರ್ನಾಟಕದಲ್ಲಿ ಕೇಳಿದಂತಹ ತರ್ಕಗಳು ಈ ವಾರ ದಿಲ್ಲಿಯಲ್ಲೂ ಕೇಳಬಂದವು. ಬಾಯಿಗಳು ಅದಲುಬದಲಾಗಿದ್ದ ವಷ್ಟೇ. ಜತೆಗೆ ಅಧ್ಯಕ್ಷೆಯವರು ಭ್ರಷ್ಟಾಚಾರದ ವಿರುದ್ಧ ಒಂದು 'ಕಾರ್ಯಯೋಜನೆ'ಯನ್ನು ಪ್ರಕಟಿಸಿದರು. ಪ್ರಧಾನ ಕಾರ್ಯದರ್ಶಿ ಭ್ರಷ್ಟಾಚಾರ ಒಂದು ಅಪಾರದರ್ಶಕ ಆರ್ಥಿಕ ಮತ್ತು ರಾಜಕೀಯ ರಚನೆಯ ಲಕ್ಷಣ ಎಂದರು. ಆದರೆ 'ಉದಾರೀಕರಣ' ಎಂದು ಹೇಳುವ, ಜೆಪಿಸಿ ರಚನೆಯ ವಿರುದ್ಧ ಹಠಮಾರಿ ನಿಲುವು ತಳೆಯುವ ಸರಕಾರ ಇರುವ ಪ್ರಸಕ್ತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗೆ ಇದು ಅನ್ವಯವಾಗುತ್ತದೋ ಹೇಳಿಲ್ಲ. ಹಿಂದಿದ್ದ 'ಲೈಸೆನ್ಸ್ ರಾಜ್' ವ್ಯವಸ್ಥೆಯೇ ಭ್ರಷ್ಟಾಚಾರದ ಸ್ರೋತ ಎಂದು ದೇಶಕ್ಕೆ ಹೇಳಲಾಗಿತ್ತು, ಅದಕ್ಕಾಗಿ ಆರ್ಥಿಕ ವ್ಯವಸ್ಥೆಯನ್ನು 'ಉದಾರ'ಗೊಳಿಸಲಾಗಿತ್ತು. ಆದರೆ ಭ್ರಷ್ಟಾಚಾರ ಈ ಅವಧಿಯಲ್ಲೇ ವಿಪರೀತವಾಗಿ ಹೆಚ್ಚಿದೆ ಎಂಬ ಮಾಹಿತಿಗಳು ಲಭ್ಯವಾಗಿವೆ. ಆದ್ದರಿಂದ ಅಪಾರದರ್ಶಕ ವ್ಯವಸ್ಥೆ ಯಾವುದು ಎಂಬ ಗೊಂದಲ ಮತ್ತು ಇದರಿಂದಾಗಿ ಕಾಂಗ್ರೆಸ್ ಅಧ್ಯಕ್ಷೆಯ 'ಕಾರ್ಯಯೋಜನೆ' ಏನಾದರೂ ಕೆಲಸ ಮಾಡೀತೇ ಎಂಬ ಸಂದೇಹ ಸಹಜವಾಗಿ ಏಳುತ್ತದೆ.



ಕಣ್ಣು ಮುಚ್ಚಿಕೊಳ್ಳಿ- ಎಲ್ಲವೂ ಹಿತಕರ

ಕಣ್ಣು ಮುಚ್ಚಿ, ಕೇಳಿಸಿಕೋ - ರಾಜೀವ್‌ಜಿ ದನಿಯಂತಿಲ್ಲವೇ, ಇಂದಿರಾಜಿಯಂತೆ...? ನೆಹರೂಜಿಯಂತೆ...? ಅಂದರೆ ಕಣ್ಣು ಮುಚ್ಚಿಕೊಂಡರೆ ನಿನಗೆ ಹಿತವೆನಿಸುತ್ತದೆ! 2ಜಿ, ಸಿಡಬ್ಲುಜಿ ಯಾವುದೂ ಕಾಣಿಸದು! 'ದಿ ಹಿಂದೂ' ನಲ್ಲಿ ಸುರೇಂದ್ರ ಅವರ ವ್ಯಂಗ್ಯ ಚಿತ್ರ.

ಈ ನಡುವೆ ವಿಕಿಲೀಕ್ಸ್ ಬಹಿರಂಗಗೊಳಿಸಿದ ಭಾರತದಿಂದ ಕಳಿಸಿದ ಅಮೆರಿಕನ್ ರಾಯಭಾರಿ ಕಚೇರಿಯ ಕೇಬಲ್‌ಗಳು ಅಮೆರಿಕನ್ ಸಾಮ್ರಾಜ್ಯಶಾಹಿ ಹೇಗೆ ನಮ್ಮ ದೇಶದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಮತ್ತು ಅದರ ಎದುರು 125 ವರ್ಷಗಳ ಇತಿಹಾಸವಿರುವ ಈ ಪಕ್ಷದ ನೇತೃತ್ವದಲ್ಲಿರುವ ಸರಕಾರಗಳು ಹೇಗೆ ತಲೆಬಾಗಿ ಅಮೆರಿಕನ್ ಸಾಮ್ರಾಜ್ಯ ಶಾಹಿಯ ಹಿತಗಳನ್ನು ಈಡೇರಿಸಿ ಕೊಡುವಲ್ಲಿ ಶಾಮೀಲಾಗುತ್ತಿವೆ ಎಂಬುದನ್ನು ದೃಢಪಡಿಸಿವೆ.

★★★

ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣ: ಚಿತ್ರ-ವಿಚಿತ್ರ ಆಯಾಮಗಳು

ಈ ಹಗರಣ ಚಿತ್ರ-ವಿಚಿತ್ರ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಒಂದೆಡೆ ಈ ಕ್ರೀಡಾಕೂಟಕ್ಕೆ ಸಾಧನ-ಸಲಕರಣೆಗಳನ್ನು ಪೂರೈಸಿದ ವಿದೇಶಿ ಕಂಪನಿಗಳು ತಮಗೆ ಕೋಟಿಗಟ್ಟಲೆ ಬಾಕಿಗಳನ್ನು ಇನ್ನೂ ತೀರಿಸಿಲ್ಲ ಎಂದು ದೂರುತ್ತಿದ್ದರೆ, ಈಗ ತಿಹಾರ್ ಜೈಲಿನಲ್ಲಿರುವ ಸಂಘಟನಾ ಸಮಿತಿಯ ಸದಸ್ಯರನ್ನು ಮುಗಿಸಿಬಿಡಲು ತಮಗೆ ಹೇಳಲಾಗಿದೆ ಎಂದು ಇಬ್ಬರು ವಿಚಾರಣಾಧೀನ ಕೈದಿಗಳು ಹೇಳಿರುವುದಾಗಿ ವರದಿಯಾಗಿದೆ. ಮತ್ತೊಂದೆಡೆ ಈ ಕ್ರೀಡಾಕೂಟದ ವಿವಿಧ ವ್ಯವಹಾರಗಳ ಮಹತ್ವದ ದಾಖಲೆಗಳು ಕಾಣೆಯಾಗಿವೆ ಎಂಬ ವರದಿಗಳು ಬಂದಿವೆ.

"ನಮಗೆ ಇದ್ದದ್ದು ಸರಕಾರದ ಕಾಂಟ್ರಾಕ್ಟುಗಳು. ಆದ್ದರಿಂದ ನಮಗೆ ಪೂರ್ಣ ನಂಬಿಕೆಯಿತ್ತು. ಆದರೆ ನಮ್ಮ ಬಿಲ್ ಗಳನ್ನು ಪಾವತಿ ಮಾಡಿಲ್ಲ, ದೂರವಾಣಿ ಕರೆಗಳಿಗೆ ಉತ್ತರವಿಲ್ಲ, ಇ-ಮೇಲ್ ಗಳಿಗೂ ಉತ್ತರವಿಲ್ಲ" ಎಂದು ಉದ್ಘಾಟನಾ ಮತ್ತು ಸಮಾರೋಪ ಸಮಾರಂಭಗಳ ವ್ಯವಸ್ಥೆ ಮಾಡಿದ್ದ ರಿಕ್ ಬಿರ್ಚ್ ಅಸೋಸಿಯೇಟೆಡ್ ಪ್ರೆಸ್‌ಗೆ ಹೇಳಿದ್ದಾರಂತೆ. ಒಟ್ಟು 15 ಕಂಪನಿಗಳದ್ದು ಇದೇ ಅನುಭವ. ಅಸೋಸಿಯೇಟೆಡ್ ಪ್ರೆಸ್‌ನವರು ಸುರೇಶ ಕಲ್ಮಾಡಿ, ಲಲಿತ್ ಬಾನೋಟ್ ಮತ್ತು ಮಟ್ಟೂ ಮುಂತಾದ ಸಂಘಟನಾಸಮಿತಿಯ ಉನ್ನತ ವ್ಯಕ್ತಿಗಳನ್ನು ಸಂಪರ್ಕಿಸುವ ಪ್ರಯತ್ನ ಸಫಲವಾಗಿಲ್ಲವಂತೆ.

ಕ್ರೀಡಾಕೂಟದ ವಿವಿಧ ಕಾಮಗಾರಿಗಳ ಟೆಂಡರುಗಳು, ಬಜೆಟ್ ಹಣಗಳು, ಕಾಂಟ್ರಾಕ್ಟ್ ವಿವರಗಳು ಇತ್ಯಾದಿ ಮಾಹಿತಿಗಳಿರುವ ಮಹತ್ವದ ದಾಖಲೆಗಳು ಕ್ರೀಡಾಕೂಟ ಸಂಘಟನಾ ಸಮಿತಿಯ ಕಚೇರಿಯಿಂದ ಮಾಯವಾಗಿವೆಯಂತೆ. ಅವನ್ನು ನಾಶಮಾಡಿರಬಹುದು ಅಥವ ಅಡಗಿಸಿಟ್ಟಿರಬಹುದು ಎಂಬ ಶಂಕೆಯಿದೆ. ಕೆಲವು ಸಂಘಟನಾ ಸಮಿತಿ ಅಧಿಕಾರಿಗಳು ಈ ದಾಖಲೆಗಳನ್ನು ಬದಲಿಸುವ ಅಥವ ಅವುಗಳಲ್ಲಿದ್ದ ಮಾಹಿತಿಗಳನ್ನು ತಿರುಚುವ ಕ್ರಿಮಿನಲ್ ಪಿತೂರಿಯ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಸಿಬಿಐ ಸಂಗ್ರಹಿಸಿದ್ದರು. ಪತ್ತೆಯಾಗದ ದಾಖಲೆಗಳ ಒಂದು ಪಟ್ಟಿಯನ್ನು ಸಿಬಿಐ ಅಧಿಕಾರಿಗಳು ತಯಾರಿಸಿದ್ದಾರಂತೆ. ಇದರ ತನಿಖೆಯಲ್ಲಿ ಕಲ್ಮಾಡಿ ಮತ್ತು ಬಾನೋಟ್‌ರ ಸಹಕಾರ ಸಿಗದ್ದರಿಂದ ಸಿಬಿಐ ಅವರನ್ನು ತೆಗೆದು ಹಾಕಬೇಕೆಂದು ಸಂಪುಟ ಕಾರ್ಯದರ್ಶಿಗಳನ್ನು ಕೇಳಿತ್ತು. ಆದರೆ ಆ ಸಮಿತಿ ಈಗ ತನ್ನ ವ್ಯಾಪ್ತಿಯಲ್ಲಿ ಇಲ್ಲವಾದ್ದರಿಂದ ತಾನು ಹಾಗೆ ಮಾಡಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದರಿಂದ ಈಗ ಕ್ರೀಡಾ ಇಲಾಖೆಯನ್ನು ಸಿಬಿಐ ಕೇಳಿದೆಯಂತೆ.

ಈ ನಡುವೆ ತಿಹಾರ್ ಜೈಲಿನಲ್ಲಿ ಭ್ರಷ್ಟಾಚಾರದ ಆಪಾದನೆಯ ಮೇಲೆ ವಿಶೇಷ ಭದ್ರತೆಯ ಜೈಲಿನಲ್ಲಿ ನ್ಯಾಯಾಂಗ ಕಸ್ಟಡಿಯಲ್ಲಿರುವ ಇಬ್ಬರು ಕ್ರೀಡಾಕೂಟದ ಅಧಿಕಾರಿಗಳನ್ನು ಮುಗಿಸಿ ಬಿಡಲು ತಮಗೆ ಒಂದು ಪಿಸ್ತೂಲು ಮತ್ತು ಚಾಕುವನ್ನು ಕೊಡಲಾಗಿದೆ ಎಂದು ಅಲ್ಲಿನ ಇಬ್ಬರು ವಿಚಾರಣಾಧೀನ ಕೈದಿಗಳು ಹೇಳಿರುವುದರ ಬಗ್ಗೆ ವಿವರವಾದ ವರದಿಯನ್ನು ಡಿಸೆಂಬರ್ 24ರಂದು ಸಲ್ಲಿಸಬೇಕು ಎಂದು ದಿಲ್ಲಿ ಮುಖ್ಯ ಮೆಟ್ರೊಪೊಲಿಟನ್ ಮ್ಯಾಜಿಸ್ಟ್ರೇಟ್ ದಿಲ್ಲಿಯ ಹರಿನಗರ ಪೋಲೀಸ್ ಠಾಣೆಯ ಮುಖ್ಯಸ್ಥರಿಗೆ ಆದೇಶ ನೀಡಿದ್ದಾರೆ ಎಂದು ವರದಿಯಾಗಿದೆ.

ಕಾಮನ್‌ವೆಲ್ತ್ ಕ್ರೀಡಾಕೂಟದ ಸಮಯದಲ್ಲಿ ಸರಕಾರ ರೋಗಿಗಳ ಶುಶ್ರೂಷೆಗೆ 15 ಕೋಟಿ ರೂ. ಖರ್ಚು ಮಾಡಿರುವುದಾಗಿ ಮಾಹಿತಿ ಹಕ್ಕಿನ ಅಡಿಯಲ್ಲಿ ಪಡೆದ ಮಾಹಿತಿಯೊಂದು ತಿಳಿಸಿದೆ. ಕ್ರೀಡಾಕೂಟದ ದವಾಖಾನೆಗೆ ಒಟ್ಟು 3665 ರೋಗಿಗಳು ಭೇಟಿಯಿತ್ತಿದ್ದು, ಅವರಲ್ಲಿ 566 ಮಂದಿಗೆ ಕ್ರೀಡಾಳುಗಳ ವೈದ್ಯಕೀಯ ಕೊಠಡಿಯಲ್ಲಿಯೇ ಶುಶ್ರೂಷೆ ನೀಡಲಾಗಿತ್ತು. ದಿಲ್ಲಿ ಸರಕಾರದ ಆರೋಗ್ಯ ಸೇವೆಗಳ ನಿರ್ದೇಶನಾಲಯದ ಸಾರ್ವಜನಿಕ ಸಂಪರ್ಕ ಅಧಿಕಾರಿ ನೀಡಿದ ಮಾಹಿತಿ ಪ್ರಕಾರ ಒಟ್ಟು ರೂ. 14,99,79,200 ಖರ್ಚಾಗಿದೆ. ಅಂದರೆ ಸರಾಸರಿ 40000 ರೂ. ಇವರಲ್ಲಿ ಯಾರೂ ಗಂಭೀರವಾಗಿ ಗಾಯಗೊಂಡ ಅಥವ ದೊಡ್ಡ ಪ್ರಮಾಣದ ಶುಶ್ರೂಷೆ ಪಡೆದ ವರದಿಗಳೇನೂ ಇರಲಿಲ್ಲ ಎಂಬುದು ಗಮನಾರ್ಹ.

★★★

ಬಡ್ಡಿಕೋರನ ರಕ್ಷಣೆಗೆ ನಿಂತ ಯುಪಿಎ ಮಂತ್ರಿ

ಕೇಂದ್ರ ಭಾರಿ ಕೈಗಾರಿಕೆ ಮಂತ್ರಿ ಹಾಗೂ ಮಹಾರಾಷ್ಟ್ರದ ಮಾಜಿ ಮುಖ್ಯ ಮಂತ್ರಿ ವಿಲಾಸರಾವ್ ದೇಶಮುಖ್ ಬಡ್ಡಿಕೋರತನದ ಒಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿರುವ ಸುಪ್ರಿಂ ಕೋರ್ಟ್ ಇದು ಕಳವಳಕಾರಿ ಸಂಗತಿ ಎಂದು ಹೇಳಿದೆ.

2006ರಲ್ಲಿ ಬರಪೀಡಿತ ವಿದರ್ಭ ಪ್ರದೇಶದಲ್ಲಿ ಲೇವಾದೇವಿ ಕಾನೂನಿನ ಪ್ರಕಾರ ಬಡ್ಡಿಕೋರತನದ ಮೊಕದ್ದಮೆ ಎದುರಿಸುತ್ತಿದ್ದ ಕಾಂಗ್ರೆಸ್ ಶಾಸಕ ದಿಲೀಪ್ ಕುಮಾರ್ ಸಾನಂದ ಮತ್ತು ಆತನ ಕುಟುಂಬವನ್ನು ರಕ್ಷಿಸಬೇಕೆಂದು ಆಗ ಮುಖ್ಯಮಂತ್ರಿಯಾಗಿದ್ದ ದೇಶಮುಖ್ ತಮ್ಮ ಆಪ್ತ ಕಾರ್ಯದರ್ಶಿ ಅಂಬಾದಾಸ್ ಮೂಲಕ ಬುಲ್ಡಾನ ಜಿಲ್ಲಾ ಎಸ್.ಪಿ.ಗೆ ಎಫ್‌ಐಆರ್ ದಾಖಲಿಸಬಾರದು ಎಂದು ಹೇಳಿದರು. ಆ ಪ್ರಕಾರ ಎಸ್.ಪಿ. ಎಫ್‌ಐಆರ್ ಹಾಕಲಿಲ್ಲ, ಆದರೆ ಇದನ್ನು ಕಡತದಲ್ಲಿ ನಮೂದಿಸಿದರು. ಮುಂಬೈ ಹೈಕೋರ್ಟಿನ ನಾಗಪುರ ಪೀಠ ಮಹಾರಾಷ್ಟ್ರ ಸರಕಾರಕ್ಕೆ 25000 ರೂ.ಗಳ ದಂಡ ವಿಧಿಸಿತು. ಸರಕಾರ ಸುಪ್ರಿಂ ಕೋರ್ಟಿಗೆ ಅಪೀಲು ಹೋಯಿತು.

ಮುಖ್ಯ ಮಂತ್ರಿಗಳು ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಬಾರದಿತ್ತು ಎಂದು ತೀರ್ಪಿತ್ತಿರುವ ಸುಪ್ರಿಂಕೋರ್ಟ್ ಮಹಾರಾಷ್ಟ್ರ ಸರಕಾರಕ್ಕೆ ವಿಧಿಸಿರುವ ದಂಡವನ್ನು 10 ಲಕ್ಷ ರೂ.ಗೆ ಏರಿಸಿದೆ. "ರಾಜ್ಯದ ಮುಖ್ಯಮಂತ್ರಿಯಾಗಿ ಶ್ರೀಯುತ ದೇಶಮುಖರು ಸಂವಿಧಾನಕ್ಕೆ ಬದ್ಧರಾಗಿರುವ ಗಂಭೀರ ಪ್ರತಿಜ್ಞೆ ಕೈಗೊಂಡಿರುತ್ತಾರೆ. ಆದರೆ ಅವರು ಕೊಟ್ಟಿರುವ ನಿರ್ದೇಶನಗಳು ಸಂಪೂರ್ಣವಾಗಿ ಸಂವಿಧಾನ ಬಾಹಿರ ಮತ್ತು ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಸಂವಿಧಾನಿಕ ವಿಧಿಗಳನ್ನು ಬುಡಮೇಲು ಮಾಡುವಂತದ್ದು" ಎಂದು ಸುಪ್ರಿಂಕೋರ್ಟ್ ಖಾರವಾಗಿ ಹೇಳಿದೆ.

ಜಗದಗಲ

ಶರತ್‌ಚಂದ್ರ

2010 ರ ಪ್ರಮುಖ ಬೆಳವಣಿಗೆಗಳು

- ವಿಕಿಲೀಕ್ಸ್ ಎಂಬ ವೆಬ್ ತಾಣ ಅಮೆರಿಕದ ರಾಯಭಾರಿಗಳು ಮತ್ತು ಸರ್ಕಾರದ ನಡುವೆ, ಸಿಐಎ ಗೂಢಚಾರರ ವರದಿಗಳ ಸಾವಿರಾರು ಕೇಬಲು ಪ್ರಕಟಿಸಿ ಅಮೆರಿಕನ್ ಸಾಮ್ರಾಜ್ಯಶಾಹಿ ಕ್ರೂರ ಮುಖ ಬಯಲು; ಅದರ ಪ್ರಧಾನ ಸಂಪಾದಕ ಜೂಲಿಯನ್ ಅಸಾಂಜ್ ಬಂಧನ-ಜಾಮೀನು ಬಿಡುಗಡೆ; ವಿಕಿಲೀಕ್ಸ್ ಮುಚ್ಚಿಸಲು ಅಮೆರಿಕನ್ ಸರ್ಕಾರದ ಶತಪ್ರಯತ್ನ ವಿಫಲ
- ಅಮೆರಿಕದ ಅಧ್ಯಕ್ಷ ಒಬಾಮಾ "ಬದಲಾವಣೆಯ ಹರಿಕಾರ" ಎಂದು ಅಮೆರಿಕ ಮತ್ತು ಇಡೀ ಜಗತ್ತಿನಲ್ಲಿ ಹುಟ್ಟಿಸಿದ್ದ ಭರವಸೆ ಹುಸಿಯಾದ್ದು; ವಿಶ್ವ ಶಾಂತಿ ಪರ ವಿದೇಶ ನೀತಿ ಬದಲು ಯುದ್ಧಕೋರತನದ ಹೆಚ್ಚಳ; ಅಮೆರಿಕದಲ್ಲಿ ಬಡವರ ಪರ ಆರ್ಥಿಕ ನೀತಿ ಭರವಸೆ ಬದಲು ಹಗರಣ ಮಾಡಿದ ಬ್ಯಾಂಕು ಕಂಪನಿಗಳ ಬೇಲೌಟ್
- ಜಗತ್ತಿನಾದ್ಯಂತ ಆರ್ಥಿಕ ಬಿಕ್ಕಟ್ಟು ಮುಂದುವರಿಕೆ; ವ್ಯಾಪಕ ಉದ್ಯೋಗ ನಾಶ ಮತ್ತು ನಿರುದ್ಯೋಗ
- ಯುರೋಪಿಗೆ ಆರ್ಥಿಕ ಬಿಕ್ಕಟ್ಟು ಬಿಸಿ, ಗ್ರೀಕ್ ದಿವಾಳಿ; ಬಿಕ್ಕಟ್ಟನ್ನು ಕಾರ್ಮಿಕರ ತಲೆ ಮೇಲೆ ಕಟ್ಟಲು ಅವರ ಸವಲತ್ತುಗಳ ತೀವ್ರ ಕಡಿತ; ಸಾರ್ವತ್ರಿಕ ಮುಷ್ಕರ ಪ್ರತಿಭಟನೆಗಳ ಭಾರಿ ಅಲೆ
- ಚೀನಾ ಎರಡನೇ ಅತಿ ದೊಡ್ಡ ಆರ್ಥಿಕವಾಗಿ ಉದಯ ಮತ್ತು ಆ ಕಾರಣ ಅಂತರ್‌ರಾಷ್ಟ್ರೀಯ ವ್ಯವಹಾರಗಳಲ್ಲಿ ಅದರ ಪ್ರಭಾವ ಹೆಚ್ಚಳ
- ಬ್ರೆಜಿಲ್, ರಶ್ಯಾ, ಇಂಡಿಯಾ, ಚೀನಾ, ದಕ್ಷಿಣ ಆಫ್ರಿಕಾ (ಬ್ರಿಕ್ಸ್ ದೇಶಗಳು) ಆರ್ಥಿಕ ಬಲ ಹೆಚ್ಚಳ ಮತ್ತು ಅವುಗಳ ಸಂಯೋಜಿತ ಪ್ರತಿರೋಧದಿಂದ ಅಮೆರಿಕದ ಏಕಧ್ರುವೀಯತೆಗೆ ಮುಂದುವರೆದ ಸವಾಲು
- ಯುರೋಪಿನಾದ್ಯಂತ ಆರ್ಥಿಕ ಬಿಕ್ಕಟ್ಟು, ಅದಕ್ಕೆ ಕಾರಣವಾದ ಆಳುವ ವರ್ಗಗಳ ನೀತಿಗಳಿಂದ ಗಮನ ಬೇರೆಡೆಗೆ ಸೆಳೆಯಲು ಮುಸ್ಲಿಮರು ಮತ್ತು ವಲಸೆಗಾರರ ವಿರುದ್ಧ ಸರ್ಕಾರಗಳ ಬಲಪಂಥೀಯರ ಪ್ರಚಾರ, ಅದಕ್ಕೆ ಸಾಕಷ್ಟು ಯಶಸ್ಸು; ಹಲವು ದೇಶಗಳಲ್ಲಿ ಬಲಪಂಥೀಯ ಪಕ್ಷಗಳ ಕೂಟಗಳ ಚುನಾವಣಾ ಜಯ
- ಮನುಕುಲದ ಅಳಿವು-ಉಳಿವಿನ ಪ್ರಶ್ನೆಯಾದ ಹವಾಮಾನ ಬದಲಾವಣೆ ತಡೆಗಟ್ಟುವಿಕೆಗೆ ಕ್ರಮಗಳಿಗೆ ಅಂತರ್‌ರಾಷ್ಟ್ರೀಯ ಒಪ್ಪಂದ ರೂಪಿಸಲು ಕೊಪನ್ ಹೇಗನ್ ಶೃಂಗಸಭೆ ನಂತರದ ಹಲವು ವಿಫಲ ಪ್ರಯತ್ನಗಳ ನಂತರ ಕಾಂಕುನ್ ಸಭೆಯಲ್ಲಿ ಸ್ವಲ್ಪ ಪ್ರಗತಿ;
- ಜಾಗತಿಕ ಸಂಘಟನೆಗಳಲ್ಲಿ (ವಿಶ್ವ ಸಂಸ್ಥೆ, ಐಎಂಎಫ್ ಇತ್ಯಾದಿ) ತೀವ್ರ ಪ್ರತಿರೋಧ ಇದ್ದಾಗ್ಯೂ ಶ್ರೀಮಂತ ದೇಶಗಳ ಯಜಮಾನಿಕೆ ಮುಂದುವರಿಕೆ;
- ಲ್ಯಾಟಿನ್ ಅಮೆರಿಕದಲ್ಲಿ ಎಡ ಅಲೆಯ ಮುಂದುವರಿಕೆ; ಚಿಲಿ ಕೊಲಂಬಿಯಾ ಬಿಟ್ಟರೆ ಎಲ್ಲಾ ದೇಶಗಳಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳ ಜಯ

ಏಷ್ಯಾದಗಲ 2010

- ಅಫ್ಘಾನಿಸ್ತಾನದಲ್ಲಿ 50 ಸಾವಿರ ಅಮೆರಿಕನ್ ಸೈನಿಕರ ಹೆಚ್ಚಳದಿಂದ ತಾಲಿಬಾನ್ ಸೋಲಿಸಲು ತೀವ್ರಗೊಂಡ ಯುದ್ಧ ಒಂದು ಕಡೆ; ರಿಮೋಟ್ ಕಂಟ್ರೋಲ್ (ದೂರ ನಿಯಂತ್ರಿತ) ಇರುವ ಪೈಲಟ್ ರಹಿತ ಡ್ರೋನ್ ವಿಮಾನ ದಾಳಿಗಳಿಂದ (ಪಾಕಿಸ್ತಾನದ ಗಡಿ ಪ್ರದೇಶಗಳು ಸೇರಿದಂತೆ) ತಾಲಿಬಾನಿ ನಾಯಕರ ನಾಶದ ಹೆಸರಲ್ಲಿ ವ್ಯಾಪಕ ದಾಳಿಗಳಿಂದ ಸಾವಿರಾರು ನಾಗರಿಕರ ಹತ್ಯೆ; ಇನ್ನೊಂದು ಕಡೆ ನಾಗರಿಕರ ಮೇಲೆ ಅಮೆರಿಕನ್ ದಾಳಿಯಿಂದ ರಾಜಕೀಯವಾಗಿ ಗಟ್ಟಿಗೊಂಡ ತಾಲಿಬಾನ್ ಜತೆ ಶಾಂತಿ ಮಾತುಕತೆ; "ಒಳ್ಳೆಯ



ಅಮೇರಿಕಾದ ಡ್ರೋನ್ ದಾಳಿಗೆ ತುತ್ತಾದ ಅಫ್ಘಾನ್ ಬಾಲೆ

ತಾಲಿಬಾನ್" ಹುಡುಕಿ ಅವರಿಗೆ ಅಧಿಕಾರ ಹಸ್ತಾಂತರಕ್ಕೆ ಜಾಗತಿಕ ಸಹಮತ ರೂಪಿಸಲು ಲಂಡನ್ ಶೃಂಗಸಭೆ, ಸ್ಥಳೀಯ ಸಹಮತಕ್ಕೆ ಕಾಬೂಲ್ "ಶಾಂತಿ ಜಿರ್ಗಾ"; ಚುನಾವಣೆಯ ಮತ್ತು ಅದರ ಅಪ್ಪಟತನದ ಬಗ್ಗೆ ತಿಂಗಳುಗಳ ತೀವ್ರ ವಿವಾದದ ನಾಟಕದ ನಂತರ ಕರ್ಜಾಯಿ ಪುನರಾಯ್ಕೆ ಘೋಷಣೆ; 2011 ರಲ್ಲಿ ಅಫ್ಘಾನಿಸ್ತಾನದಿಂದ ಅಮೆರಿಕನ್ ಪಡೆಗಳ ಹಿಂತೆಗೆತ ನಂತರವೂ ಅಮೆರಿಕನ್ ನಿಯಂತ್ರಣ ಮುಂದುವರೆಸಲು ಮತ್ತು ಅದರ ಮಿಲಿಟರಿ ವೆಚ್ಚ ಹಂಚಲು ನಾಟೋ ಕೂಟ ಮತ್ತು ಇತರ ನೆರೆ ದೇಶಗಳ ಸಹಭಾಗಿತ್ವಕ್ಕೆ ಪ್ರಯತ್ನ;
- ಇರಾಕಿನಿಂದ ಅಮೆರಿಕದ ಪಡೆಗಳ "ಅಧಿಕೃತ ಹಿಂತೆಗೆತ"ದ ನಾಟಕದ ನಂತರವೂ 2 ಲಕ್ಷಕ್ಕೂ ಹೆಚ್ಚು ಅಮೆರಿಕನ್ ಸೈನಿಕರ ಮತ್ತು ಬಾಡಿಗೆ ಪಡೆಗಳ ಮೂಲಕ ಇರಾಕಿನ ಮೇಲೆ ಅಮೆರಿಕದ ಯಜಮಾನಿಕೆ ಮುಂದುವರಿಕೆ; ಅಮೆರಿಕದ ಯಜಮಾನಿಕೆ ನಿಲ್ಲಿಸಿ ಇರಾಕಿಗೆ ನಿಜವಾದ ಸಾರ್ವಭೌಮತೆಗೆ ಶಿಯಾ-ಸುನ್ನಿ ಗೆರಿಲ್ಲಾ ಹೋರಾಟ ಮುಂದುವರಿಕೆ; ನಾಗರಿಕರಿಗೆ ಕಾನೂನು ಸುವ್ಯವಸ್ಥೆ ಮತ್ತು ಆರ್ಥಿಕತೆಗಳ ಬಗ್ಗೆ ಅಭದ್ರತೆ, ದುರ್ಭರ ಜೀವನ ಮುಂದುವರಿಕೆ; ಚುನಾವಣೆಯ ನಾಟಕ ಮತ್ತು ಒಂಬತ್ತು ತಿಂಗಳ ಶಿಯಾ-ಸುನ್ನಿ-ಕುರ್ದಿಶ್ ನಾಯಕರ ತೀವ್ರ ಕಿತ್ತಾಟ ಚೌಕಾಶಿ ನಂತರ ಇರಾನಿನ ನೆರವಿಂದ ಸರ್ಕಾರ ರಚನೆ; ಹೊಸ ಸರ್ಕಾರದ ಸುಭದ್ರತೆ ಮತ್ತು ಸಾರ್ವಭೌಮತೆ ಬಗ್ಗೆ ವ್ಯಾಪಕ ಸಂಶಯ/ಆತಂಕ;
- ಇರಾನಿನ ಅಣ್ವಸ್ತ್ರ ಅಭಿವೃದ್ಧಿ ಪಡಿಸುತ್ತಿದೆ ಎಂಬ ನೆಪ ಹೂಡಿ ಅದರ ಮೇಲೆ ಇರಾಕಿನ ಮೇಲೆ ಮಾಡಿದ ಹಾಗೆ ಯುದ್ಧ ಹೂಡಲು ಅಮೆರಿಕದ ಪ್ರಯತ್ನ; ಅದೇ ನೆಪ ಹೂಡಿ ಭದ್ರತಾ ಸಮಿತಿಯಿಂದ ಆರ್ಥಿಕ ದಿಗ್ಬಂಧನ; "ಪ್ರಜಾಪ್ರಭುತ್ವ ರಫ್ತು" ಮಾದರಿ ಮತ್ತು ಚುನಾವಣೆಯಲ್ಲಿ ಮಧ್ಯ ಪ್ರವೇಶಕ್ಕೆ ಅಮೆರಿಕನ್ ಪ್ರಯತ್ನ ವಿಫಲ; ಇರಾನಿನ ಅಣು ಶಕ್ತಿ ಸ್ಥಾವರಗಳ ಮೇಲೆ ದಾಳಿಯ ಇಸ್ರೇಲಿ ಬೆದರಿಕೆ ಮುಂದುವರಿಕೆ
- ಪ್ಯಾಲೆಸ್ಟೈನ್ ಸಮಸ್ಯೆ ಪರಿಹಾರಕ್ಕೆ ಒಬಾಮಾರ ದುರ್ಬಲ ಪ್ರಯತ್ನ ವಿಫಲ: ಗಾಜಾ ಪಟ್ಟಿಯ ಕ್ರೂರ ಇಸ್ರೇಲಿ ದಿಗ್ಬಂಧನ ಮುಂದುವರಿಕೆ; ದಿಗ್ಬಂಧನ ಮುರಿಯಲು ನೆರವಿನ ಪರಿಹಾರ ಸಾಮಗ್ರಿ ಹೊತ್ತು ತಂದ ಅಂತರ್‌ರಾಷ್ಟ್ರೀಯ ಸ್ವಯಂ ಸೇವಕರ ಹಡಗಿನ ಮೇಲೆ ಇಸ್ರೇಲಿ ಕಾನೂನು ಬಾಹಿರ ದಾಳಿ, ವ್ಯಾಪಕ ಖಂಡನೆ; ಆದರೆ ಅಮೆರಿಕದ ಬೆಂಬಲದಿಂದ ಇಸ್ರೇಲ್ ಬಚಾವ್; ದುಬೈಯಲ್ಲಿ ಹಾಮಾಸ್ ನಾಯಕರ ಕೊಲೆ ಮಾಡಿದ ಇಸ್ರೇಲಿ ಏಜೆಂಟರ ಮೇಲೆ ಮೊಕದ್ದಮೆ
- ಪಾಕಿಸ್ತಾನದ ಪಾರ್ಲಿಮೆಂಟು ಚುನಾಯಿತ ಸರ್ಕಾರ ನ್ಯಾಯಾಂಗ ಮತ್ತು ಮಿಲಿಟರಿಗಳ ನಡುವೆ ಮುಂದುವರೆದ ಚಕಮಕಿ; ಹಿಂದೆ ಮಿಲಿಟರಿ ಸರ್ವಾಧಿಕಾರಕ್ಕೆ ಹಾದಿ ಮಾಡಿಕೊಟ್ಟ ಅಧ್ಯಕ್ಷರ ಹಲವು ಪರಮಾಧಿಕಾರಗಳನ್ನು ಮೊಟಕು ಮಾಡುವ ಪ್ರಜಾಪ್ರಭುತ್ವೀಕರಣದ ಚಾರಿತ್ರಿಕ ಕಾನೂನು ಪಾಸು; ಮುಂದುವರೆದ ತೀವ್ರ ಭಯೋತ್ಪಾದಕ ಸ್ಫೋಟ ದಾಳಿಗಳು; ಹಲವು ದಶಕಗಳಲ್ಲೇ ಅತ್ಯಂತ ಭೀಕರ ನೆರೆಯಿಂದ ವ್ಯಾಪಕ ನಾಶ; ತಾಲಿಬಾನಿ ಭಯೋತ್ಪಾದನೆ ಮುಗಿಸಲು ಅಫ್-ಪಾಕ್ ವ್ಯೂಹದ ಹೆಸರಲ್ಲಿ ಪಾಕಿಸ್ತಾನಿ ಮಿಲಿಟರಿಯ ಜತೆ ಸಹಕಾರದ ಹೆಸರಲ್ಲಿ ದೇಶದ ಸಾರ್ವಭೌಮತೆ ಉಲ್ಲಂಘನೆಯ ವಿರುದ್ಧ ವ್ಯಾಪಕ ಆಕ್ರೋಶ;
- ಬಾಂಗ್ಲಾದೇಶದಲ್ಲಿ ಜಾತ್ಯತೀತತೆ ಸಂವಿಧಾನದ ಮೂಲಭೂತ ಅಂಶ ಎನ್ನುವ ಐತಿಹಾಸಿಕ ತೀರ್ಪು; ಧಾರ್ಮಿಕ ಮೂಲಭೂತವಾದಿ ಪಕ್ಷಗಳ ಚಟುವಟಿಕೆ ಮೇಲೆ ಕಡಿವಾಣ ಮತ್ತು ನಿಷೇಧಕ್ಕೆ ಹಾದಿ ಸುಗಮ;
- ನೇಪಾಳದಲ್ಲಿ ಮಿಲಿಟರಿ ಜನರಲ್ ವಜಾದ ವಿವಾದದಲ್ಲಿ ಮಾವೋವಾದಿ ಸರ್ಕಾರ ರಾಜೀನಾಮೆ; ಆ ನಂತರ ಸತತ ರಾಜಕೀಯ ಅಸ್ಥಿರತೆ; ಸಂವಿಧಾನ ಸಭಾ ಕೆಲಸ ಸ್ಥಗಿತ; ಸರ್ಕಾರ ರಚನೆಗೂ ಮಾವೋವಾದಿ, ಕಮ್ಯುನಿಸ್ಟ್, ಕಾಂಗ್ರೆಸ್ ಮತ್ತು ಮಾಧೇಶಿ ಪಕ್ಷಗಳ ನಡುವೆ ಸಹಮತದ ಅಭಾವ;
- ಹೊ ಚಿ ಮಿನ್ ಅವರ 120 ನೇ ವಾರ್ಷಿಕೋತ್ಸವ ಆಚರಿಸಲಾಯಿತು

ಯುರೋಪಿನಗಲ 2010

- ಗ್ರೀಕ್ ಸರ್ಕಾರ ದೀವಾಳಿ, ಕೆಲವು ಅಮೆರಿಕನ್ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳ ಸಾಲ ಸಲಹೆಗಳ ಮಹಿಮೆ; ಗ್ರೀಕ್ ಸರ್ಕಾರಕ್ಕೆ ಕಠಿಣ "ಮಿತವ್ಯಯ" ದ ಶರತ್ತುಗಳ ಮೇಲೆ ಯುರೋಪಿಯನ್ ಒಕ್ಕೂಟ-ಐಎಂಎಫ್ 10 ಸಾವಿರ ಕೋಟಿ ಡಾಲರು ಸಾಲ; "ಮಿತವ್ಯಯ" ದ ಶರತ್ತುಗಳ ಪರಿಣಾಮವಾಗಿ ಸಾರ್ವಜನಿಕ ವೆಚ್ಚ, ಸಾಮಾಜಿಕ ಕಲ್ಯಾಣ, ಕಾರ್ಮಿಕರ ಸವಲತ್ತುಗಳಲ್ಲಿ ತೀವ್ರ ಕಡಿತ; ಸರ್ಕಾರದ "ಮಿತವ್ಯಯ" ದ ಯೋಜನೆ ವಿರುದ್ಧ ಭಾರೀ ಸರಣಿ (ಒಂದೇ ತಿಂಗಳಲ್ಲಿ 4) ಸಾರ್ವತ್ರಿಕ ಮುಷ್ಕರಗಳು, ಪ್ರತಿಭಟನೆ, ಪ್ರತಿರೋಧ;
- ಐರ್ಲೆಂಡ್, ಸ್ಪೈನ್, ಪೋರ್ಚುಗಲ್ ಸಹ ದಿವಾಳಿಯ ಅಂಚಿನಲ್ಲಿ
- ಫ್ರಾನ್ಸಿನಲ್ಲಿ ಕಾರ್ಮಿಕ ಸವಲತ್ತುಗಳ (ಮುಖ್ಯವಾಗಿ ನಿವೃತ್ತಿ ವಯಸ್ಸು) ಕಡಿತದ ವಿರುದ್ಧ ಪ್ರತಿರೋಧ, ಸರಣಿ ಸಾರ್ವತ್ರಿಕ ಮುಷ್ಕರಗಳು; ಮುಷ್ಕರಗಳಿಗೆ ವಿದ್ಯಾರ್ಥಿ ಮತ್ತು ಸಾರ್ವಜನಿಕರ ವ್ಯಾಪಕ ಬೆಂಬಲ; 1968 ರ ವ್ಯಾಪಕ ರಾಜಕೀಯ ಬಿಕ್ಕಟ್ಟು ಮತ್ತು ವಿದ್ಯಾರ್ಥಿ-ಕಾರ್ಮಿಕ ದಂಗೆಗಳ ನೆನಪಿಸುವ ಸ್ಥಿತಿ;
- ಬ್ರಿಟನಿನಲ್ಲಿ ಮೂರು ಸತತ ಅಧಿಕಾರಾವಧಿಗಳ ನಂತರ ಲೇಬರ್ ಸೋಲು, ಟೋರಿ-ಲಿಬರಲ್ ಸಮ್ಮಿಶ್ರ ಸರ್ಕಾರ; ಶಿಕ್ಷಣ ಮುಂತಾದ ಸಾಮಾಜಿಕ ಕಲ್ಯಾಣ ಕ್ರಮಗಳು, ಕಾರ್ಮಿಕರ ಸವಲತ್ತುಗಳಲ್ಲಿ ತೀವ್ರ ಕಡಿತ; ಅದರ ಪರಿಣಾಮವಾಗಿ ಉಚ್ಚ ಶಿಕ್ಷಣದಲ್ಲಿ ತೀವ್ರ ಫೀಸು ಏರಿಕೆ ವಿರೋಧಿಸಿ ವ್ಯಾಪಕ ವಿದ್ಯಾರ್ಥಿ ಪ್ರತಿಭಟನೆ ದಂಗೆಗಳು;
- ಚೆಕ್ ಮತ್ತು ಪೋಲೆಂಡಿನಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಸಂಘಟನೆಗಳ ನಿಷೇಧಕ್ಕೆ ಪ್ರಯತ್ನ, ಪ್ರತಿರೋಧ
- ಫ್ರಾನ್ಸ್ ಮತ್ತು ಬೆಲ್ಜಿಯಂ ಗಳಲ್ಲಿ ಬುರ್ಖಾ ಧರಿಸಲು ನಿಷೇಧ

ಉತ್ತರ ಅಮೆರಿಕಾ

- ಒಬಾಮಾ ದುರ್ಬಲ ಆರ್ಥಿಕ ಚೇತರಿಕೆ ಯೋಜನೆ; ತಿಮಿಂಗಿಲ ಬ್ಯಾಂಕು ಮತ್ತು ಕಂಪನಿಗಳ ಬೇಲೌಟ್ ಬಿಟ್ಟರೆ ಅದರ ಪರಿಣಾಮ ಸೀಮಿತ; ಶೆ. 10 ರ ಲಕ್ಷ್ಮಣ ರೇಖೆ ದಾಟಿದ ನಿರುದ್ಯೋಗ;
- ಒಬಾಮಾ ಆರ್ಥಿಕ ಚೇತರಿಕೆ, ಸಾಮಾಜಿಕ ಕಲ್ಯಾಣ ವಿಸ್ತರಣೆ ಬಲಪಡಿಸುವಿಕೆ ಯೋಜನೆಗಳಿಗೆ ರಿಪಬ್ಲಿಕನ್ ವಿರೋಧ ಪಕ್ಷಗಳ ತೀವ್ರ ವಿರೋಧ; ಬುಶ್ ಆಡಳಿತ ಶ್ರೀಮಂತರಿಗೆ ಕೊಟ್ಟ ತೆರಿಗೆ ರಿಯಾಯಿತಿಗಳನ್ನು ಶಾಶ್ವತಗೊಳಿಸಲು ರಿಪಬ್ಲಿಕನ್ ಒತ್ತಡ;
- ಬುಶ್ ಪ್ರಣೀತ ಆರ್ಥಿಕ ನೀತಿಗಳ

ಪುಟ 15 ಕ್ಕೆ

ವಸ್ತುವಿನ ತದ್ರೂಪು ಪ್ರತಿ-ವಸ್ತುವನ್ನು ಹಿಡಿದಿಡುವಲ್ಲಿ ವಿಜ್ಞಾನಿಗಳ ಯಶಸ್ಸು



ಭೂಮಿಯಲ್ಲಿ ಒಂದೇ ತರಹದ 7 ಜನ ಇರುತ್ತಾರೆಂದು ಹಲವು ವೇಳೆ ಕೆಲವರು ಹೇಳುತ್ತಿರುವುದನ್ನು ನಾವು ಕೇಳಿದ್ದೇವೆ. ಆದರೆ ಯಾವುದೇ ವಸ್ತುವಿನ ಅತ್ಯಂತ ಸಣ್ಣಾತಿಸಣ್ಣ ಕಣವಾದ ಪರಮಾಣುವಿನ ಪ್ರತಿರೂಪ ಅಂದರೆ ಪ್ರತಿ-ಪರಮಾಣುವನ್ನು ವಿಜ್ಞಾನಿಗಳು ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಭೌತಶಾಸ್ತ್ರದಲ್ಲಿ ಮೂಲಕಣಗಳ ಸ್ವರೂಪ ಮತ್ತು ಅದರ ರಚನೆಯ ಮಹಾನ್ ರಹಸ್ಯಗಳನ್ನು ಭೇಧಿಸುವಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ.

1931ರಲ್ಲಿ ಬ್ರಿಟಿಷ್ ಭೌತಶಾಸ್ತ್ರಜ್ಞ ಪಾಲ್ ಡೈರಕ್ ಎಂಬುವನು ಮೊದಲ ಬಾರಿಗೆ ಈ ಸಿದ್ಧಾಂತವನ್ನು ರೂಪಿಸಿದ. ಆದರಂತೆ ಒಂದು ಶಕ್ತಿಯು ವಸ್ತುವಾಗಿ ಪರಿವರ್ತನೆಗೊಂಡಾಗ ಅದರಲ್ಲಿ ಉತ್ಪಾದನೆಯಾಗುವುದು: ಒಂದು ಕಣ ಮತ್ತು ಆ ಕಣದ ಕನ್ನಡಿ ಬಿಂಬ. ಈ ಕಣದ ಕನ್ನಡಿ ಬಿಂಬವನ್ನು ಪ್ರತಿ-ಕಣ ಎಂದು ಕರೆಯಲಾಗುತ್ತದೆ. ಈ ಪ್ರತಿ-ಕಣವು ವಿರುದ್ಧ ವಿದ್ಯುತ್ ಕಣವನ್ನು ಹೊಂದಿರುತ್ತದೆ. ನಮಗೆ ತಿಳಿದಿರುವಂತೆ ವಸ್ತುವೊಂದರ ಸಣ್ಣಾತಿಸಣ್ಣ ಕಣವಾದ ಪರಮಾಣುವೊಂದರಲ್ಲಿ ಮೂಲತ: ಒಂದು ಪ್ರೋಟಾನ್ ಮತ್ತು ನ್ಯೂಟ್ರಾನ್‌ನ್ನು ಇದ್ದು ಇವೆರಡರ ಸುತ್ತಲೂ ಇಲೆಕ್ಟ್ರಾನುಗಳು ಸುತ್ತು ಹಾಕುತ್ತಿರುತ್ತವೆ. ಇಲೆಕ್ಟ್ರಾನ್‌ನ ಪ್ರತಿವಸ್ತುವನ್ನು ಅಂದರೆ ಕನ್ನಡಿ ಬಿಂಬವನ್ನು ಪಾಸಿಟ್ರಾನ್ ಎಂದು ಕರೆಯುತ್ತಾರೆ. ಆದೇ ರೀತಿ ಪ್ರೋಟಾನ್- ಪ್ರತಿಪ್ರೋಟಾನ್, ಜಲಜನಕ-ಪ್ರತಿಜಲಜನಕ, ಇತ್ಯಾದಿ. ಕಣ ಮತ್ತು ಅದರ ಕನ್ನಡಿ ಬಿಂಬವಾದ ಪ್ರತಿ-ಕಣವು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಅವುಗಳಿಂದ ಹೆಚ್ಚಿನ ಶಕ್ತಿ ಬಿಡುಗಡೆ ಹೊಂದಿ ಅವು ನಾಶಗೊಳ್ಳುತ್ತವೆ.


ವಿಶ್ವ ಸೃಷ್ಟಿಯ ರಹಸ್ಯದ ಶೋಧನೆ:

ಭೌತಶಾಸ್ತ್ರದ ಪರಮಾಣುಗಳ ಸ್ವರೂಪವನ್ನು ಅಧ್ಯಯನ ನಡೆಸುತ್ತಿರುವ ವಿಜ್ಞಾನಿಗಳಿಗೆ ರಹಸ್ಯವಾಗಿಯೇ ಉಳಿದಿರುವ ವಿಷಯವೆಂದರೆ ವಿಶ್ವದಲ್ಲಿ ವಸ್ತು ಇರುವಂತೆಯೇ ಅದರ ಪ್ರತಿ-ವಸ್ತುಗಳು ಅಸ್ತಿತ್ವದಲ್ಲಿವೆಯೇ ಎಂಬುದು. ಅವು ಅಸ್ತಿತ್ವದಲ್ಲಿದ್ದರೆ ಎಲ್ಲಿವೆ? ಅವುಗಳನ್ನು ಪ್ರಯೋಗಗಳ ಮೂಲಕ ಅಸ್ತಿತ್ವಕ್ಕೆ ತರಬಹುದೇ? ಅವುಗಳನ್ನು ಅಸ್ತಿತ್ವಕ್ಕೆ ತಂದ





ಮೇಲೆ ಅವುಗಳ ಸ್ವಭಾವ ಏನು ಇತ್ಯಾದಿ ಕುರಿತು ಹಲವು ಪ್ರಯೋಗಗಳು ನಡೆಯುತ್ತಲೇ ಇವೆ. ಇದುವರೆಗೂ ಪ್ರಯೋಗಗಳ ಮೂಲಕ ಜಲಜನಕ ಎಂಬ ಮೂಲವಸ್ತುವಿನ ಪ್ರತಿ-ಪರಮಾಣುವನ್ನು ಉತ್ಪಾದಿಸಲಾಗಿತ್ತು. ಆದರೆ ಅದನ್ನು ಉತ್ಪಾದಿಸಿದ ಕ್ಷಣಾರ್ಧದಲ್ಲಿ ಅಲ್ಲ ಅಲ್ಲ, ಸೆಕೆಂಡಿನ ಲಕ್ಷದ ಒಂದು ಕಾಲ ಮಾತ್ರ! ಅದು ವಸ್ತುವಿನ ಜೊತೆ ಡಿಕ್ಕಿ ಹೊಡೆದು ನಾಶಗೊಳ್ಳುತ್ತಿತ್ತು! ಇದರಿಂದ ಅದನ್ನು ಅಳೆಯುವುದಾಗಲಿ ಅಥವಾ ಅದರ ರಚನೆಯನ್ನು ಅಧ್ಯಯನ ಮಾಡುವುದಾಗಲಿ ಅಸಾಧ್ಯವಾಗಿತ್ತು.



ಆದರೆ, ಯೂರೋಪ್ ಪರಮಾಣು ಸಂಶೋಧನಾ ಸಂಸ್ಥೆ (ಸಿಇಆರ್‌ಎನ್)ಯು ನಡೆಸುತ್ತಿರುವ ಹಲವಾರು ಪ್ರಯೋಗಗಳಲ್ಲಿ ಸಾವಿರಾರು ಪ್ರತಿ-ಜಲಜನಕ ಅಣುಗಳನ್ನು ತಯಾರಿಸಿದೆಯಾದರೂ ಅವುಗಳಲ್ಲಿ ಕೇವಲ 38 ಪ್ರತಿ-ಜಲಜನಕ ಅಣುಗಳನ್ನು ಮಾತ್ರವೇ ಹಿಡಿದಿಡಲು ಅದೂ ಕೂಡ ಸೆಕೆಂಡಿನ ಹತ್ತನೇ ಒಂದು ಕಾಲ ಮಾತ್ರ ಹಿಡಿದಿಡಿದು ಅಧ್ಯಯನ ಮಾಡಲು ಸಾಧ್ಯವಾಗಿದೆ.

ಈ ವಿಶ್ವ ಅಥವಾ ಬ್ರಹ್ಮಾಂಡವನ್ನು ದೇವರು ಹೇಗೆ ಸೃಷ್ಟಿ ಮಾಡಿದ ಎಂದು ಅನಾದಿ ಕಾಲದಲ್ಲಿ ತಮ್ಮ ಧರ್ಮಗ್ರಂಥಗಳಲ್ಲಿ ಬರೆದು ಹೋದ ತಮ್ಮ ಹಿರಿಯರ ವಿಚಾರಗಳಿಂದಲೇ ಹಿಂದೂ ಧರ್ಮದ ಆದಿಯಾಗಿ ಕ್ರಿಶ್ಚಿಯನ್, ಇಸ್ಲಾಂ, ಇತ್ಯಾದಿ ಎಲ್ಲ ಧರ್ಮಗಳು ಅರ್ಥೈಸುತ್ತವೆ. ಆದರೆ ಧರ್ಮಗಳು ನೀಡುವ ವಿವರಣೆಗೂ ಸಾಕ್ಷ್ಯ?ಗಳನ್ನುಳ್ಳ ವಾಸ್ತವತೆಗೂ ಯಾವುದೇ ನಂಟಿರುವುದಿಲ್ಲ. ಇಂದಿನ ವಿಜ್ಞಾನ ಈ ವಿಶ್ವದ ಆರಂಭ ಹೇಗಾಯಿತು? ಅಥವಾ ಅನಾದಿ ಕಾಲದಲ್ಲಿ ಹಲವು ಲಕ್ಷಾಂತರ ವರ್ಷಗಳ ಹಿಂದೆ ಈ ವಿಶ್ವ ಹೇಗಿತ್ತು? ಈ ವಿಶ್ವ ಹೇಗೆ ಬದಲಾಗುತ್ತಾ ವಿಕಸನಗೊಳ್ಳುತ್ತಾ ಹೋಗುತ್ತಿದೆ? ಈ ವಿಶ್ವದ ಸ್ವರೂಪಕ್ಕೆ ಕಾರಣವಾಗಿರುವ ಮೂಲ ಕಣಗಳ ಗುಣಸ್ವಭಾವಗಳೇನು? ಇತ್ಯಾದಿ ಪ್ರಶ್ನೆಗಳಿಗೆ ನಮ್ಮ ವಿಜ್ಞಾನಿಗಳು ವೈಜ್ಞಾನಿಕ ಸಾಕ್ಷ್ಯಾ?ಧಾರಗಳ ಮೂಲಕ, ಹಲವು ಪರೀಕ್ಷೆಗಳ ಮೂಲಕ ವಿವರಿಸುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ.

ದೊಡ್ಡ ಹ್ಯಾಡ್ರನ್ ಡಿಕ್ಕಿಕಾರಕ (ಎಲ್‌ಹೆಚ್‌ಸಿ) ಪ್ರಯೋಗ:

ಯೂರೋಪ್ ಪರಮಾಣು ಸಂಶೋಧನಾ ಸಂಸ್ಥೆ (ಸಿಇಆರ್‌ಎನ್)ಯು 100 ಕ್ಕೂ ಹೆಚ್ಚು ದೇಶಗಳ 10,000ಕ್ಕೂ ಹೆಚ್ಚು ವಿಜ್ಞಾನಿಗಳು ಒಡಗೂಡಿ ನಡೆಸುತ್ತಿರುವ ಮತ್ತೊಂದು ದೊಡ್ಡ ಹ್ಯಾಡ್ರನ್ ಡಿಕ್ಕಿಕಾರಕ (ಎಲ್‌ಹೆಚ್‌ಸಿ) ಪ್ರಯೋಗವು ಈ ವಿಶ್ವ ಹೇಗೆ ರೂಪುಗೊಂಡಿದೆ ಮತ್ತು ಮೂಲಕಣಗಳು ಯಾವುದರಿಂದ ಮಾಡಲ್ಪಟ್ಟಿವೆ ಎಂದು ಕಂಡುಹಿಡಿಯುವುದಾಗಿದೆ. ಮೂಲಕಣಗಳಿಗೆ ಅತಿ ಹೆಚ್ಚು ಶಕ್ತಿ ನೀಡಿದಾಗ ಅವು ಹೇಗೆ ವರ್ತಿಸುತ್ತಿವೆ ಎಂದು ಅಧ್ಯಯನ ನಡೆಸಲಾಗುತ್ತಿದೆ. ○

2010 ರ ಪ್ರಮುಖ ಬೆಳವಣಿಗೆಗಳು....

ಪುಟ 14 ರಿಂದ

ಪರಿಣಾಮವಾಗಿ ಬಂದ ಆರ್ಥಿಕ ಬಿಕ್ಕಟ್ಟು ಒಬಾಮಾ ತಲೆಗೆ ಒಬಾಮಾ ಕಟ್ಟುವ ರಿಪಬ್ಲಿಕನ್ ಪ್ರಯತ್ನಕ್ಕೆ ಡೆಮೊಕ್ರಾಟರ ದೌರ್ಬಲ್ಯಗಳಿಂದಾಗಿ ಯಶಸ್ಸು;

- ಆರೋಗ್ಯ ಇನ್ಶುರೆನ್ಸ್ ವಿಸ್ತರಣೆಯ ಕಾನೂನು (ಅಗತ್ಯಕ್ಕಿಂತ ದುರ್ಬಲವಾದರೂ) ಮಾತ್ರ ಒಬಾಮಾ ಆಡಳಿತ ತರಲು ಸಾಧ್ಯವಾದ ಆರ್ಥಿಕ ಸುದಾರಣೆಗಳು
- ಮೆಕ್ಸಿಕೊ ಕೊಲ್ಲಿಯಲ್ಲಿ ಬಿಪಿ ಕಂಪನಿಯ ಸಾಗರ ತೈಲ ಸ್ಥಾವರದಲ್ಲಿ ತೀವ್ರ ಸೋರಿಕೆಯಿಂದ ವ್ಯಾಪಕ ಪರಿಸರ ಹಾನಿ; 20 ಶತಕೋಟಿ ಡಾಲರುಗಳ ಪರಿಹಾರಕ್ಕೆ ಒಬಾಮಾ ಕ್ರಮ;
- ಬಲಪಂಥೀಯ ಟೀ ಪಾರ್ಟಿ ಉದಯ, ಬೆಳವಣಿಗೆ; ನವಂಬರ್ ಮಧ್ಯಂತರ ಚುನಾವಣೆಯಲ್ಲಿ ಒಬಾಮಾ ನಾಯತ್ವದ ಡೆಮಕ್ರಾಟರಿಗೆ ಸೋಲು; ದುರ್ಬಲಗೊಂಡ ಒಬಾಮಾ ರಾಜಕೀಯ ಪ್ರಭಾವ; ರಿಪಬ್ಲಿಕನ್ ಪಕ್ಷದೊಳಗೆ ಸ್ಪರ್ಧಿಸಿದ ಟೀ ಪಾರ್ಟಿ ಅಭ್ಯರ್ಥಿಗಳಿಗೆ ವ್ಯಾಪಕ ಜಯ;

ಲ್ಯಾಟಿನ್ ಅಮೆರಿಕಾ

- ವೆನೆಜುವೆಲಾ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಚವೇರ ?ರ ಸೋಶಲಿಸ್ಟ್ ಪಕ್ಷಕ್ಕೆ ಜಯ, ಆದರೆ ನಿರೀಕ್ಷಿತ ಮೂರನೇ ಎರಡು ಬಹುಮತ ಇಲ್ಲ; ತೀವ್ರ ಪ್ರಜಾಸತ್ತಾತ್ಮಕ ಸುಧಾರಣೆಗಳ ಮುಂದುವರಿಕೆ; ಕೊಲಂಬಿಯಾ ಮೂಲಕ ಅಮೆರಿಕನ್ ಮಿಲಿಟರಿ ಬೆದರಿಕೆ ಎದುರಿಸಲು ಸ್ವಯಂಸೇವಾ ಪಡೆಗಳ ಬಲಪಡಿಸುವಿಕೆ;
- ಬ್ರೆಜಿಲಿನ ಅಧ್ಯಕ್ಷೀಯ ಚುನಾವಣೆಗಳಲ್ಲಿ ವರ್ಕರ್ಸ್ ಪಾರ್ಟಿ ಅಭ್ಯರ್ಥಿಗೆ ಮೂರನೇ ಅವಧಿಗೆ ಸತತ ಜಯ;
- ಬೊಲಿವಿಯ, ಉರುಗುವೇಗಳ ಚುನಾವಣೆಗಳಲ್ಲೂ ಎಡಶಕ್ತಿಗಳಿಗೆ ಪುನಃ ಜಯ
- ಚಿಲಿಯಲ್ಲಿ ಬಲಪಂಥೀಯ ಸರ್ವಾಧಿಕಾರಿ ಪಿನೋಶೆ ಪಕ್ಷಕ್ಕೆ ಜಯ, ಸೋಶಲಿಸ್ಟ್ ಪಕ್ಷಕ್ಕೆ ಸೋಲು
- ಹೊಂಡುರಸ್‌ನಲ್ಲೂ ಮಿಲಿಟರಿ ಕ್ಷಿಪ್ರಕ್ರಾಂತಿ ನಂತರ ಅಮೆರಿಕನ್ ಕುಮ್ಮಕ್ಕಿನಿಂದ ತೀವ್ರ ದಮನದ ನಂತರ ಚುನಾವಣೆಗಳಲ್ಲಿ ಎಡಶಕ್ತಿಗಳಿಗೆ ಹಿನ್ನಡೆ
- ಲ್ಯಾಟಿನ್ ಅಮೆರಿಕದ ದೇಶಗಳ ಪ್ರಾದೇಶಿಕ ಕೂಟಗಳು ಮತ್ತು ಸಾಮೂಹಿಕ ಸಂಘಟನೆಗಳ (ವ್ಯಾಪಾರ ಕೂಟ ಅಲ್ಬಾ, ಮಾಧ್ಯಮ ಕೂಟ ಟೆಲಿಸುರ್, ಕಾರ್ಮಿಕ ಯೂನಿಯನುಗಳ ಕೂಟ "ನಮ್ಮ ಅಮೆರಿಕಾ" ಇತ್ಯಾದಿ) ಮುಂದುವರೆದ ಬಲಪಡಿಸುವಿಕೆ

ಆಸ್ಟ್ರೇಲಿಯಾ, ಆಫ್ರಿಕಾ

- ಇದು ಅರ್ಧಕ್ಕೂ ಹೆಚ್ಚು ಆಫ್ರಿಕನ್ ದೇಶಗಳ ಸ್ವಾತಂತ್ರ್ಯದ ಸುವರ್ಣ (50ನೇ) ವಾರ್ಷಿಕ. ಈ ದೇಶಗಳು ತಮ್ಮ ಸುವರ್ಣ ಸ್ವಾತಂತ್ರ್ಯೋತ್ಸವದ ಭಾಗವಾಗಿ ತಮ್ಮ ಸ್ವಾತಂತ್ರ್ಯ ಸಾರ್ವಭೌಮತ್ವ ಬೆಳವಣಿಗೆಗಳ ಬಗ್ಗೆ ಚಿಂತನೆ ನಡೆಸಿದವು.
- ಚೀನಾ ಆಫ್ರಿಕನ್ ದೇಶಗಳ ಒಂದು ಶೃಂಗಸಭೆ ನಡೆಸಿ ಖಂಡದ ಬೆಳವಣಿಗೆಗೆ ಸಹಕಾರದ ಹಲವು ಯೋಜನೆಗಳನ್ನು ಹಾಕಿತು
- ತೈಲ ಗಣಿಗಾರಿಕೆಗಳಲ್ಲಿ ತಂತ್ರಜ್ಞಾನ, ಧನಸಹಾಯ (ಪಾಶ್ಚಿಮಾತ್ಯ ದೇಶ/ಕಂಪನಿಗಳಿಗಿಂತ ಬಹಳ ಉದಾರವಾದ) ಕೊಡುವ ಹಲವು ಸಹಕಾರ ಒಪ್ಪಂದಗಳಿಗೆ ಚೀನಾ ಸಹಿ ಹಾಕಿ ಕೆಲಸ ಆರಂಭವಾಗಿದೆ
- (ದಕ್ಷಿಣ) ಆಫ್ರಿಕಾದಲ್ಲಿ ಮೊದಲ ಬಾರಿಗೆ ಫುಟ್ಬಾಲ್ (ಯಾವುದೇ) ವಿಶ್ವ ಕಪ್ ನಡೆಯಿತು. ಜಾಗತಿಕ ವಿದ್ಯಾರ್ಥಿ ಯುವಜನೋತ್ಸವ ಸಹ (ದಕ್ಷಿಣ) ಆಫ್ರಿಕಾದಲ್ಲಿ ನಡೆಯಿತು.
- ಆಸ್ಟ್ರೇಲಿಯಾ ಮೊದಲ ಬಾರಿಗೆ ಸ್ವತಂತ್ರ ಸದಸ್ಯರ ಬೆಂಬಲದ ಮೇಲೆ ಆಧಾರಿತ ಅಲ್ಪ ಸಂಖ್ಯಾತ ಲೇಬರ್ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಜಾಗತಿಕ ಸಂಘಟನೆಗಳು

- ಶ್ರೀಮಂತ ದೇಶಗಳ ಗುಂಪು-8 ಜಾಗತಿಕ ವಿಷಯಗಳ ಬಗ್ಗೆ ಸಹಮತ ರೂಪಿಸುವಲ್ಲಿ ವಿಫಲವಾಗಿದ್ದು ಅದನ್ನು ಇತರ ಪ್ರಮುಖ ದೇಶಗಳನ್ನು ಸೇರಿಸಿ (ಗುಂಪು-15, ಗುಂಪು-20) ಅದಕ್ಕೆ ಪ್ರಯತ್ನ ನಡೆಸಿದೆ. ಆದರೆ ಈ ಗುಂಪುಗಳಲ್ಲೂ ತನ್ನ ಯಜಮಾನಿಕೆ ನಡೆಸಲು ಪ್ರಯತ್ನಿಸುತ್ತಿದೆ.
- ವಿಶ್ವ ಬ್ಯಾಂಕು, ಐಎಂಎಫ್ ಡಬ್ಲ್ಯೂಟಿಒ ಗಳ ಸಂಘಟನಾ ಪ್ರಜಾಸತ್ತೆ ಹೆಚ್ಚಿಸಲು ಪ್ರಸ್ತಾವಗಳು, ತೀವ್ರ ಪ್ರಯತ್ನಗಳು ನಡೆದವು. ಆದರೆ ಯಾವುದೂ ಇನ್ನೂ ಗಮನಾರ್ಹ ಯಶಸ್ಸು ಕಂಡಿಲ್ಲ
- ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ (ಮತ್ತು ಶಾಶ್ವತ ಸದಸ್ಯರ) ಸಂಖ್ಯೆ ವಿಸ್ತರಿಸುವ ಪ್ರಸ್ತಾವ ಸಹ ಗಂಭೀರ ಪರಿಶೀಲನೆಯಲ್ಲಿದೆ. ಭಾರತ, ಬ್ರೆಜಿಲ್, ಜರ್ಮನಿ, ಜಪಾನ್ ಶಾಶ್ವತ ಸದಸ್ಯತ್ವ ಪಡೆಯಬಹುದಾದ ದೇಶಗಳು.
- ನಾಟೋ ಕೂಟದ ಶೃಂಗಸಭೆ ನಡೆದು ಅದನ್ನು ಜಾಗತಿಕ ಮಿಲಿಟರಿ ಕೂಟವಾಗಿ ಪರಿವರ್ತಿಸುವ ಅಪಾಯಕಾರಿ ಯೋಜನೆಗಳನ್ನು ರೂಪಿಸಲಾಗಿದೆ.
- ಬ್ರಿಕ್, ಬ್ರಿಕ್ಸ್ ಮತ್ತು ಶಾಂಘಾಯ್ ಸಹಕಾರ ಸಂಘಟನೆಗಳ ಶೃಂಗಸಭೆ ನಡೆದು ಜಾಗತಿಕ ವಿಷಯಗಳ ಬಗ್ಗೆ ಅಮೆರಿಕನ್ ಯಜಮಾನಿಕೆಯ ಪ್ರಭಾವ ಕುಂದಿದೆ. ○

'ಸೂಪರ್' ಡೂಪ್ ಮಗಾ !

ಭೂತದ ಬಾಯಲ್ಲಿ ಭಗವದ್ಗೀತೆಯೇ? ಹೌದು. ನೋಡುಗರಿಗೆ ಆಶ್ಚರ್ಯವೇನಿಸುವಂತೆ ಉಪೇಂದ್ರ ಅಪರೂಪಕ್ಕೆ ತಮ್ಮ ಚಿತ್ರದಲ್ಲಿ ಸಾಮಾಜಿಕ ಕಳಕಳಿ ವ್ಯಕ್ತಪಡಿಸಿದ್ದಾರೆ. ಆಳುವ ವರ್ಗಗಳ ಭ್ರಷ್ಟಾಚಾರ ಕಂಡು ಸಿಟ್ಟಿಗೆದ್ದಿದ್ದಾರೆ. ಇತಿಮಿತಿಯಿಲ್ಲದ ಖಾಸಗೀಕರಣದ ವಿರುದ್ಧ ದನಿ ಎತ್ತುತ್ತಾರೆ. ಎಲ್ಲಾ ದೌರ್ಜನ್ಯವನ್ನೂ ಸಹಿಸಿಕೊಂಡು ಹೋಗುವ ನಮ್ಮ ಜನಸಾಮಾನ್ಯರ ಸಹನೆಯನ್ನು ಕಂಡು ಅಸಹಾಯಕ ರಾಗುತ್ತಾರೆ. ಈ ಭ್ರಷ್ಟ ವ್ಯವಸ್ಥೆಗೆ ಪ್ರತಿ ವ್ಯವಸ್ಥೆಯಾಗಿ ಅವರ ಬಳಿ ಪರಿಹಾರವಿದೆ. ಅದುವೇ 'ಭೂ ಹಂಚಿಕೆ!' ಅದರ ಸಾಕಾರಕ್ಕೆ ಹಿಡಿಯುವ ದಾರಿಯೂ ಭ್ರಷ್ಟಾಚಾರದ್ದೇ!



ನಿಜ, ಉಪೇಂದ್ರರ ಹೊಸ ಚಿತ್ರ 'ಸೂಪರ್' ಚಿತ್ರದ ಕಥಾವಸ್ತು ಇದೇ. ಆದರೆ 'ಪರ್ವಾಗಿಲ್ಲವೇ ನಮ್ಮ ಉಪೇಂದ್ರ,' ಅಂತ ತುಂಬಾ ಖುಷಿ ಪಡಬೇಡಿ. ಅವರ ನಿಜವಾದ ವರಸೆಯಿಂದ, ಅಂದರೆ ಹುಚ್ಚಾಟದಿಂದ ಬಹುತೇಕ ಪ್ರೇಕ್ಷಕರಿಗೆ ಕಥೆ ಅರ್ಥವೇ ಆಗುವುದಿಲ್ಲ. ಅವರ ಹಿಂದಿನ ಬಹುತೇಕ ಚಿತ್ರಗಳ ತಂತ್ರದಂತೆ ಇಲ್ಲಿಯೂ ಹಲವು 'ಫ್ಲಾಷ್‌ಬ್ಯಾಕ್'ಗಳು ನೋಡುಗನನ್ನು ಗೊಂದಲದಲ್ಲಿ ಕೆಡವುತ್ತವೆ.

ಮೊದಲಿಗೆ, ದೃಶ್ಯ -1 ಅತ್ಯಂತ ಮುಂದುವರಿದ ರಾಜ್ಯವಾಗಿ ಕರ್ನಾಟಕದ ಚಿತ್ರಣ! ಎಷ್ಟೆಂದರೆ ವಿದೇಶಿಗರು ಕನ್ನಡಿಗರ ಮನೆಗಳಲ್ಲಿ ಕೆಲಸದಾಳು ಗಳಾಗಿ, ಇಲ್ಲಿನ ಬೀದಿಗಳಲ್ಲಿ ಅವರು ಭಿಕ್ಷೆ ಬೇಡುವಷ್ಟು ಶ್ರೀಮಂತ ರಾಜ್ಯ! ಈ ಅಭಿವೃದ್ಧಿಗೆ



ಕಾರಣ ಕಂಡುಹಿಡಿಯಲು ವಿದೇಶಿ ಪ್ರವಾಸಿಗನೊಬ್ಬ ಬರುತ್ತಾನೆ.

ಇಂಥಾ ಅಭಿವೃದ್ಧಿಗೆ ಕಾರಣವೇನು? - ಫ್ಲಾಶ್ ಬ್ಯಾಕ್-1, ಹುಡುಗಿಯ ಹಿಂದೆ ಬಿದ್ದ ನಾಯಕ. ಅವಳು ಯಾರ ಸಹಾಯ ಪಡೆಯಲು ಹೋದರೂ ನಾಯಕನ ಹೆಸರು ಕೇಳಿ ಅವರು ಪರಾರಿ! ಅವಳಿಗೆ ಸಹಾಯ ಮಾಡಲು ಬಂದ ಪೊಲೀಸ್ ಅಧಿಕಾರಿಯೂ ಸುಸ್ತು. ಕಾರಣ?

ಫ್ಲಾಶ್‌ಬ್ಯಾಕ್-2 ಆ ನಾಯಕ ಮತ್ತಾರೂ ಅಲ್ಲ ಆ ಹುಡುಗಿಯ ಗಂಡನೆ! ನಾಯಕ ಶ್ರೀಮಂತ ಉದ್ಯಮಿ- ಲಂಡನ್‌ನಲ್ಲಿ. ಭಾರತೀಯ ಸಂಸತಿ ಇಚ್ಛಿಸುವ ವ್ಯಕ್ತಿ. ಭಾರತೀಯ ನಾರಿಯ ತದ್ರೂಪು ಎನಿಸುವಂತಹ ನಾಯಕಿ ಕಂಡು ಬಯಸಿ ಮದುವೆಯಾಗುತ್ತಾನೆ. ಮೊದಲೇ ರಾತ್ರಿಯಲ್ಲೇ ಗೊತ್ತಾಗುತ್ತದೆ ಆಕೆ 'ಬಿಂದಾಸ್' ಹುಡುಗಿ ಅಂತ. ಮತ್ಯಾಕೆ ಈ ಮೋಸ ಅಂತಿರಾ? ನಾಯಕ ಹೇಳಿದಂತೆ ಇರುವ ಹುಡುಗಿ ಇರಲು ಸಾಧ್ಯವೇ ಇಲ್ಲ. ತಾನು ಹಾಗಿರಬೇಕಾದರೆ ಭಾರತದಲ್ಲಿ ತನ್ನ ಪರಿಚಯದ ವೃದ್ಧರೊಬ್ಬರಿಗೆ ಪಿಂಚಣಿ ಬರುವಂತ ಮಾಡಿದಲ್ಲಿ ನೀನು ಹೇಳಿದ ಹಾಗೆ ಇರುವೆ ಎಂದು ನಾಯಕನಿಗೆ ನಾಯಕಿಯ ಸವಾಲು.

ಫ್ಲಾಶ್‌ಬ್ಯಾಕ್-3 ಪಿಂಚಣಿ ಪಡೆಯುವ ಸಲುವಾಗಿ ವೃದ್ಧ ಮೇಷ್ಟ್ರು ಪಡಬಾರದ ಪಡಿಪಾಟಲು. ನಾಯಕ ಆತನಿಗೆ ಸಹಾಯ ಮಾಡಲು ಹೋಗುತ್ತಾನೆ. ಭ್ರಷ್ಟ ವ್ಯವಸ್ಥೆಯ ಖದೀಮರೊಂದಿಗೆ ಬಡಿದಾಟವೂ ಆಗುತ್ತದೆ. ಊಹುಂ, ಏನೂ ಆಗುವುದಿಲ್ಲ. ಬದಲಿಗೆ ವೃದ್ಧ ಮೇಷ್ಟ್ರಿಗೆ ತಾಪತ್ರಯ ಹೆಚ್ಚಾಗಿ, ಆತ ನಾಯಕನ ಸಹಾಯವನ್ನು ತಿರಸ್ಕರಿಸುತ್ತಾನೆ. ಖದೀಮರು ನಾಯಕನ ಹಿಂದೆ ಬೀಳುತ್ತಾರೆ. ಏಕೆಂದರೆ ನೋಡಿದರೆ ನಾಯಕಿಯೇ ಅವನನ್ನು ಕೊಲ್ಲು ಸುಪಾರಿ ನೀಡಿರುತ್ತಾಳೆ ! ನಾಯಕ ದಂಗಾಗುತ್ತಾನೆ. ತನ್ನ ಮೇಲಿನ ಹಗೆಗೆ ಕಾರಣ ಕೇಳುತ್ತಾನೆ.

ಫ್ಲಾಶ್‌ಬ್ಯಾಕ್-4 ನಾಯಕಿಯ ಅಕ್ಕನ ಪ್ರವೇಶ. ಹಿಂದುವಾಗಿ ವಿದೇಶಿ ಸಂಸತಿ ರೂಢಿಸಿಕೊಂಡು, ವಿದೇಶಿಗನೊಬ್ಬನಿಂದ ಮೋಸಕ್ಕೊಳಗಾಗುವುದನ್ನು ತಪ್ಪಿಸಲು, ಆಕೆ ಮನ ಬದಲಾವಣೆಗಾಗಿ ನಾಯಕ ಪ್ರೀತಿಯ ನಾಟಕವಾಡುತ್ತಾನೆ. ಅವಳಿಗೆ ಮನದಟ್ಟಾದ ಮೇಲೆ ಅವಳಿಂದ ದೂರವಾಗುತ್ತಾನೆ. ಆದರೆ ನಾಯಕಿಯ ಅಕ್ಕನ ಕೊಲೆಯ ಯತ್ನವಾಗಿ ಆಕೆ ಅರೆಪ್ರಜ್ಞಾವಸ್ಥೆಯ ರೋಗಿಯಾಗುತ್ತಾಳೆ. ಅದಕ್ಕೆ ಈತನೇ ಕಾರಣ ಎಂಬ ಬಲವಾದ ನಂಬಿಕೆ ನಾಯಕಿಗೆ. ಅದಕ್ಕಾಗಿ ಆತನ ಮೇಲು ಸೇಡು ತೀರಿಸಿಕೊಳ್ಳಲು ಕಾತರ!

ಫ್ಲಾಶ್‌ಬ್ಯಾಕ್ 3 ಕ್ಕೆ ವಾಪಸ್ - ಭ್ರಷ್ಟಗೊಂಡ ಸಮಾಜದ ಬದಲಾವಣೆಗೆ ನಾಯಕನ ನಿರ್ಧಾರ. ಅದೂ ಹೇಗೆ? ಅಗರ್ಭ ಶ್ರೀಮಂತ ಅಪ್ಪನಿಂದ ಭಾರಿ ಹಣವನ್ನು ಪಡೆದುಕೊಳ್ಳುತ್ತಾನೆ. ಸಮಾಜದಲ್ಲಿ ನಡೆಯುವ ಎಲ್ಲಾ ಕಳ್ಳದಂಧೆಗಳಿಗೂ ಕೈ ಹಾಕುತ್ತಾನೆ. ಗಣಿ ಲೂಟಿ, ಭೂದಂಧೆ ಅಂತಿಮವಾಗಿ ರಾಜಕೀಯಕ್ಕೂ ಇಳಿಯುತ್ತಾನೆ. ಇವೆಲ್ಲದರ ಜೊತೆಗೆ ನಾಯಕಿ ಬೆನ್ನುಹತ್ತುವುದನ್ನೂ ಬಿಡುವುದಿಲ್ಲ.

ನಾಯಕಿ ರಾಜ್ಯದ ಮುಖ್ಯಮಂತ್ರಿ ಬಳಸಿಕೊಂಡು ಇವನನ್ನು ಮಟ್ಟ ಹಾಕುವ ಯೋಜನೆ ಹಾಕುತ್ತಾಳೆ. ಆದರೆ ಕೆಲವೇ ಗಳಿಗೆಯಲ್ಲಿ ಹಲವು ಶಾಸಕರನ್ನು ಖರೀದಿಸಿ, ನಾಯಕನೇ ಮುಖ್ಯಮಂತ್ರಿಯಾಗುತ್ತಾನೆ. ಇಡೀ ರಾಜ್ಯವನ್ನೇ, ಜಿಲ್ಲೆ, ತಾಲ್ಲೂಕು, ಗ್ರಾಮಗಳನ್ನು ಖಾಸಗಿಯವರಿಗೆ ಮಾರಲು ನಿಶ್ಚಯಿಸುತ್ತಾನೆ ನೂತನ ಮುಖ್ಯಮಂತ್ರಿ. ಜೊತೆಗೆ ತನ್ನನ್ನು ಸೇರಲು ಒಪ್ಪದ ನಾಯಕಿಯನ್ನು ರೇಪ್ ಮಾಡಲು ಮುಂದಾಗುತ್ತಾನೆ.

ಫ್ಲಾಶ್‌ಬ್ಯಾಕ್ 4 - ನಾಯಕ-ನಾಯಕಿ ಹಳ್ಳಿಯೊಂದರಲ್ಲಿ ಆರಾಮವಾಗಿ ತಿರುಗಾಡುತ್ತಿರುತ್ತಾರೆ. ನಾಯಕನ ಬಗ್ಗೆ ಪ್ರಶಂಸೆಯ ಮಾತನಾಡುತ್ತಿರುತ್ತಾಳೆ ನಾಯಕಿ. ಅದು ಹೇಗೆ ಸಾಧ್ಯ?

ಫ್ಲಾಶ್‌ಬ್ಯಾಕ್ 5 - ನಾಯಕಿಯ ಮೇಲಿನ ರೇಪ್, ನಾಯಕಿಯ ಅಕ್ಕನ ಮುಂದೆ ಆಡುವ ನಾಟಕ ಅಷ್ಟೇ! ಅಕ್ಕನಿಗೆ ಇದನ್ನು ನೋಡಿ ಪ್ರಜ್ಞೆ ಮರಳಿ ಬರುತ್ತದೆ! ಮತ್ತು ತನ್ನ ಈ ಸ್ಥಿತಿಗೆ ಕಾರಣ ನಾಯಕನಲ್ಲ, ಬೇರೊಬ್ಬ ಎನ್ನುತ್ತಾಳೆ. ನಾಯಕಿಗೆ ನಾಯಕನ ಮೇಲಿದ್ದ ಸಿಟ್ಟೆಲ್ಲಾ ಕರಗಿ, ಒಲವು ಶುರು!

ನಾಯಕ ನಿಜಕ್ಕೂ ಭ್ರಷ್ಟಾಚಾರಿಯೇನಲ್ಲ! ಆತ ಅತ್ಯಂತ ಜನಪರ. ರಾಜ್ಯವನ್ನು ಖಾಸಗಿಯವರಿಗೆ ಮಾರುವ ಆತನ ನಿಲುವೂ ಹಾಗೇ ಸುಮ್ಮನೇ! ಆತ ನಿಜವಾಗಿ ಮಾಡುವುದೇನೆಂದರೆ ರಾಜ್ಯದ ಪ್ರತಿಯೊಬ್ಬ ಜನರಿಗೂ ಅವರಿರುವ ಜಾಗವನ್ನು ಅವರವರಿಗೇ ಮಾರಿಬಿಡುತ್ತಾನೆ. ಅಷ್ಟು ಮಾತ್ರವಲ್ಲ, ರಸ್ತೆ, ಪಾರ್ಕುಗಳು ಎಲ್ಲವೂ ಅದರ ಅಕ್ಕಪಕ್ಕವಿರುವ ಜನಗಳದ್ದೇ! ಹಾಗಾಗಿ ಅವುಗಳ ಜವಾಬ್ದಾರಿಯೂ ಆ ನಾಗರೀಕರದ್ದೇ. ಸ್ವಂತದ್ದು ಎನ್ನುವ ಕಾರಣಕ್ಕೆ ಅತ್ಯಂತ ಕಾಳಜಿಯಿಂದ ನೋಡಿಕೊಳ್ಳುತ್ತಾನೆ. ಪ್ರತಿಯೊಬ್ಬ ಪ್ರಜೆಯೂ ಅತ್ಯಂತ ಜವಾಬ್ದಾರಿಯುಳ್ಳ ನಾಗರೀಕನಾಗಿ ವರ್ತಿಸುತ್ತಾನೆ.

ದೃಶ್ಯ-1 ಕ್ಕೆ ವಾಪಸ್: ಬೃಹತ್ ಅಭಿವೃದ್ಧಿಗೆ ಕಾರಣ ಹುಡುಕಿ ಬಂದ ವಿದೇಶಿ ಪ್ರವಾಸಿಗನೊಬ್ಬನಿಗೆ ಉತ್ತರ ಸಿಗುತ್ತದೆ.

ಕರ್ನಾಟಕದ ಕುಲಗೆಟ್ಟ ರಾಜಕೀಯ ಪರಿಸ್ಥಿತಿ, ಭ್ರಷ್ಟಾಚಾರಿಗಳನ್ನು ತೆರೆಗೆ ತಂದಿರುವ ಉಪೇಂದ್ರ ಪ್ರಯತ್ನ ಪ್ರಶಂಸನೀಯ. ಭ್ರಷ್ಟ ವ್ಯವಸ್ಥೆ ತೊಲಗಿಸಲಿಚ್ಛಿಸುವವ ಅವರ ಚಡಪಡಿಕೆ ಮೆಚ್ಚುವಂತದ್ದೇ. ಆದರೆ..... ಹಣ, ಹೆಂಡ, ಭ್ರಷ್ಟತೆಯ ಹಾದಿಯಲ್ಲೇ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕೆಂಬ ಅವರ ನಿಲುವು ಹತಾಶೆಗೊಂಡವರ, ಹಾದಿತಪ್ಪಿದವರ, ಸಮಾಜವನ್ನು ಮತ್ತೂ ಭ್ರಷ್ಟಗೊಳಿಸುವವರ ನಿಲುವೇ ಸರಿ. ಸ್ವಸ್ಥ ಸಮಾಜಕ್ಕೆ ಪ್ರಾಮಾಣಿಕತೆಯೇ ಮೊದಲ ಮೆಟ್ಟಿಲು. ಅದನ್ನೇ ಬಿಟ್ಟವರು ಇನ್ನಾವ ಊರು ಕಟ್ಟುತ್ತಾರೆ ಇವರು?

ಚಿತ್ರದ ಯಶಸ್ಸಿಗೆ ತನ್ನ ಹುಚ್ಚಾಟಗಳು, ವೇಶಭೂಷಣ ಅನಿವಾರ್ಯ ಎಂದೇ ಭಾವಿಸಿರುವ ಉಪೇಂದ್ರ ತೀವ್ರ ನಿರಾಸೆ ಮೂಡಿಸುತ್ತಾರೆ. ●

"ವ್ಯಂಗ್ಯಚಿತ್ರಕಾರರು ಕಲೆಯನ್ನು ಪ್ರತಿಭಟನೆಯ ಅಸ್ತ್ರವಾಗಿ ಬಳಸಿದವರು"

ಸಮುದಾಯ ಕಾರ್ಯಾಗಾರದಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರ ಪಿ.ಮಹ್ಮದ್

'ವ್ಯಂಗ್ಯ ಚಿತ್ರಕಾರರು ಬಂಡಾಯ ನೆಲೆಯ ಚಿಂತನೆಯನ್ನು ಹೊಂದಿದ್ದು, ಕಲೆಯನ್ನು ಪ್ರತಿಭಟನೆಯ ಅಸ್ತ್ರವಾಗಿ ಸಮರ್ಥವಾಗಿ ಪ್ರಯೋಗಿಸಿದ ಪರಂಪರೆಯನ್ನು ಉಳ್ಳವರು. ಒಂದು ರೀತಿಯಲ್ಲಿ ವ್ಯಂಗ್ಯ ಚಿತ್ರಕಾರರು ನಿಜವಾದ ಜವಾಬ್ದಾರಿಯುತ ಜನವಾದಿ ಕಲಾವಿದರು' ಎಂದು ನಾಡಿನ ಖ್ಯಾತ ವ್ಯಂಗ್ಯಚಿತ್ರಕಾರ (ಪ್ರಜಾವಾಣಿ - ಸುಧಾ) ಪಿ.



ಮಹ್ಮದ್‌ರವರು ನುಡಿದರು.

ಅವರು ಇತ್ತೀಚೆಗೆ ನವೆಂಬರ್ 28, 2010 ರಂದು ಕುಂದಾಪುರದಲ್ಲಿ ನಡೆದ ಉಡುಪಿ ಜಿಲ್ಲಾಮಟ್ಟದ ವ್ಯಂಗ್ಯ ಚಿತ್ರಕಾರರ ಕಾರ್ಯಾಗಾರದಲ್ಲಿ ಸಂಪನ್ಮೂಲ ಕಲಾದರಾಗಿ ಭಾಗವಹಿಸಿದ್ದರು. ಈ ಕಾರ್ಯಾಗಾರವನ್ನು "ಸಮುದಾಯ" ಕುಂದಾಪುರ ಸಂಘಟಿಸಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ಚಿಂತಕಾದಮಾರು ಶ್ರೀಪತಿ ಆಚಾರ್ಯರವರು ವ್ಯಂಗ್ಯಚಿತ್ರಕ್ಕೆ 150 ವರ್ಷಗಳ ಇತಿಹಾಸವಿದೆ. ಚಿತ್ರಕಲಾ ಕ್ಷೇತ್ರದಲ್ಲಿ ವ್ಯಂಗ್ಯ ಚಿತ್ರಕಾರರು ಸಾಮಾಜಿಕ ಜವಾಬ್ದಾರಿಯನ್ನು ಅರಿತು ತಮ್ಮ ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಕಲೆಗಾಗಿ ಕಲೆ ಅಲ್ಲ, ಕಲೆ ಸಮಾಜಕ್ಕಾಗಿ, ಕಲಾವಿದರನ್ನು ಒಬ್ಬ ಜವಾಬ್ದಾರಿಯುತ ಪ್ರಜೆ ಎನ್ನುವುದನ್ನು ಮರೆಯಬಾರದು' ಎಂದು ನುಡಿದರು

ಈ ಕಾರ್ಯಾಗಾರದಲ್ಲಿ 75 ಕ್ಕೂ ಹೆಚ್ಚು ಕಲಾವಿದರು ಭಾಗವಹಿಸಿದ್ದರು. ವಿಶೇಷವಾಗಿ 'ಮಿಡ್ ಡೇ' ಪತ್ರಿಕೆಯ ಸತೀಶ್ ಆಚಾರ್ಯ, ಕುಂದಾಪುರದ ಕೇಶವ ಸಹಿಹಿತ್ಲುರವರು ಸಹ ಸಂಪನ್ಮೂಲ ಕಲಾವಿದರಾಗಿ ಕಾರ್ಯಾಗಾರ ವನ್ನು ನಡೆಸಿಕೊಟ್ಟರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಕೆ.ಪ್ರಭಾಕರನ್ ವಹಿಸಿದ್ದರು. ಆರಂಭ ಗೀತೆಯನ್ನು ಸುರೇಶ್ ಕಲಾಗಾರ್ ಹಾಡಿದರು. ಸದಾನಂದ ಬೈಂದೂರು ಕಾರ್ಯಕ್ರಮದ ನಿರೂಪಣೆ ಮಾಡಿದರು. ●

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH